ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 19 ಗುರುವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 184 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಆಫ್ಘಾನ್ ವಿರುದ್ಧ ನ್ಯೂಜಿಲ್ಯಾಂಡ್ ಭರ್ಜರಿ ಗೆಲುವು



ಚೆನ್ನೈ, ಅ.18– ಕೆಲ ದಿನಗಳ ಹಿಂದೆ ವಿಶ್ವ ಚಾಂಪಿಯನ್ ಇಂಗ್ಲೆಂಡ್ ತಂಡವನ್ನು ಮಣಿಸುವ ಮೂಲಕ ತನ್ನ ಸ್ಮರಣೀಯ ಗೆಲುವು ದಾಖಲು ಮಾಡಿದ್ದ ಅಫ್ಘಾನಿಸ್ತಾನ ತಂಡ ಬುಧವಾರ ಏಕದಿನ ವಿಶ್ವ ಕಪ್ ರನ್ನರ್‌ಅಪ್ ನ್ಯೂಜಿಲ್ಯಾಂಡ್ ವಿರುದ್ಧ ಭಾರೀ ಸೋಲು ಕಂಡಿದೆ. ಉತ್ತಮ ಆರಂಭ ಕಂಡಿತ್ತಾದರೂ ಇದರ ಲಾಭವನ್ನು ಪಡೆದುಕೊಳ್ಳಲು ವಿಫಲವಾಯಿತು. ಇದರಿಂದಾಗಿ ತಂಡ 149 ರನ್‌ಗಳ ಭಾರೀ ಅಂತರದ ಸೋಲು ಕಂಡಿತು.

ಸ್ಪಿನ್ ಸ್ನೇಹಿ ಎಂಎ ಚಿದಂಬರಂ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲ್ಯಾಂಡ್ ತಂಡ ಒಂದು ಹಂತದಲ್ಲಿ 110 ರನ್‌ಗೆ 4 ವಿಕೆಟ್ ಕಳೆದುಕೊಂಡು ಅಲ್ಪ ಮೊತ್ತಕ್ಕೆ ಕುಸಿಯುವ ಅಪಾಯದಲ್ಲಿತ್ತು. ಆದರೆ, ಕೆಳ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳ ಬ್ಯಾಟಿಂಗ್ ಸಾಹಸದಿಂದ ತಂಡ 6 ವಿಕೆಟ್‌ಗೆ 288 ರನ್ ಬಾರಿಸಿತು. ಪ್ರತಿಯಾಗಿ ಅಫ್ಘಾನಿಸ್ತಾನ ತಂಡ 34.4 ಓವರ್‌ಗಳಲ್ಲಿ 139 ರನ್‌ಗೆ ಆಲೌಟ್ ಆಯಿತು. ಈ ಗೆಲುವಿನೊಂದಿಗೆ ನ್ಯೂಜಿಲ್ಯಾಂಡ್ ತಂಡ ಟೂರ್ನಿಯಲ್ಲಿ ತನ್ನ ಅಜೇಯ ಓಟವನ್ನು ಮುಂದುವರಿಸಿದೆ.

ನ್ಯೂಜಿಲೆಂಡ್ ತಂಡ ತಾನು ಆಡಿದ ನಾಲ್ಕೂ ಪಂದ್ಯಗಳಲ್ಲಿ ಗೆಲುವು ಸಾಧಿಸಿದಂತಾಗಿದೆ. ಕಿವೀಸ್ ವಿರುದ್ಧ ಗೆಲುವು ಸಾಧಿಸಬೇಕಾದಲ್ಲಿ ಅಫ್ಘಾನಿಸ್ತಾನ ತಂಡ, ತನ್ನ ಈವರೆಗಿನ ಅತ್ಯುತ್ತಮ ಚೇಸಿಂಗ್, ಚೆನ್ನೈನಲ್ಲಿ ತಂಡವೊಂದರ ಅತ್ಯುತ್ತಮ ಚೇಸಿಂಗ್ ಹಾಗೂ ನ್ಯೂಜಿಲೆಂಡ್ ವಿರುದ್ಧ ವಿಶ್ವಕಪ್ ಪಂದ್ಯದಲ್ಲಿ ಗರಿಷ್ಠ ಚೇಸಿಂಗ್ ಅನ್ನು ಮಾಡಬೇಕಿತ್ತು. ಆದರೆ, ಇದಾವುದನ್ನು ಸಾಧಿಸಲು ಅಫ್ಘಾನಿಸ್ತಾನ ತಂಡಕ್ಕೆ ಸಾಧ್ಯವಾಗಲಿಲ್ಲ. ನ್ಯೂಜಿಲ್ಯಾಂಡ್ ಪರವಾಗಿ ವೇಗಿ ಲಾಕಿ ಫರ್ಗ್ಯೂಸನ್ 19 ರನ್‌ಗೆ 3 ವಿಕೆಟ್ ಉರುಳಿಸಿದರೆ, ಸ್ಪಿನ್ನರ್ ಮಿಚೆಲ್ ಸ್ಯಾಂಟ್ನರ್ 39 ರನ್‌ಗೆ 3 ವಿಕೆಟ್ ಉರುಳಿಸಿದರು. ಟ್ರೆಂಟ್ ಬೌಲ್ಟ್ 2 ವಿಕೆಟ್ ಸಾಧನೆ ಮಾಡಿದರೆ, ಮ್ಯಾಟ್ ಹೆನ್ರಿ ಹಾಗೂ ಆಲ್ರೌಂಡರ್ ರಚಿನ್ ರವೀಂದ್ರಾ ಒಂದೊಂದು ವಿಕೆಟ್ ಪಡೆದುಕೊಂಡರು.

ಈ ಪಂದ್ಯದಲ್ಲಿ ಮಿಚೆಲ್ ಸ್ಯಾಂಟ್ನರ್ ಏಕದಿನ ಕ್ರಿಕೆಟ್‌ನಲ್ಲಿ 100 ವಿಕೆಟ್ ಸಾಧನೆಯನ್ನೂ ಮಾಡಿದರು. ಕಿವೀಸ್ ಪರವಾಗಿ ಏಕದಿನದಲ್ಲಿ 100 ವಿಕೆಟ್ ಸಾಧನೆ ಮಾಡಿದ 2ನೇ ಸ್ಪಿನ್ನರ್ ಸ್ಯಾಂಟ್ನರ್. ಮೊದಲ ಆಟಗಾರ ಡೇನಿಯಲ್ ವೆಟೋರಿ.

ಅಫ್ಘಾನಿಸ್ತಾನ ತಂಡದ ಪರವಾಗಿ ಬ್ಯಾಟಿಂಗ್‌ನಲ್ಲಿ ಯಾರೂ ಗಮನಸೆಳೆಯಲಿಲ್ಲ. ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ ರಹಮತ್ ಶಾ ಗಳಿಸಿದ 36 ರನ್ ತಂಡದ ಗರಿಷ್ಠ ಮೊತ್ತವಾಗಿತ್ತು. ಅಜ್ಮತುಲ್ಲಾ ಓಮರ್‌ಜಾಯ್(27), ಐಕ್ರಾಮ್ ಐಖಿಲ್ (19) ಕೆಲ ರನ್‌ಗಳನ್ನು ಬಾರಿಸಿದರೂ ಇದು ತಂಡಕ್ಕೆ ಯಾವುದೇ ನೆರವು ನೀಡಲಿಲ್ಲ. ಆರಂಭಿಕ ಆಟಗಾರರಾದ ರಹಮತುಲ್ಲಾ ಗುರ್ಬಾಜ್(11), ಇಬ್ರಾಹಿಂ ಜದ್ರಾನ್ (14) ಅಲ್ಪ ಮೊತ್ತಕ್ಕೆ ಔಟಾದರೆ, ನಾಯಕ ಹಸ್ಮತುಲ್ಲಾ ಶಾಹಿದಿ ಕೇವಲ 8 ರನ್ ಬಾರಿಸಿದರು. ಉಳಿದಂತೆ ಮತ್ತೆ ಯಾವುದೇ ಬ್ಯಾಟ್ಸ್‌ಮನ್‌ಗಳು ಕಿವೀಸ್ ತಂಡ ಬೌಲಿಂಗ್ ಹೋರಾಟವನ್ನು ಎದುರಿಸಲಿಲ್ಲ.

149 ರನ್ ಗೆಲುವು ನ್ಯೂಜಿಲ್ಯಾಂಡ್ ತಂಡಕ್ಕೆ ವಿಶ್ವಕಪ್‌ನಲ್ಲಿ ರನ್ ಅಂತರದ 2ನೇ ದೊಡ್ಡ ಗೆಲುವು ಎನಿಸಿದೆ. ಇದಕ್ಕೂ ಮುನ್ನ 1975ರಲ್ಲಿ ಈಸ್ಟ್ ಆಫ್ರಿಕಾ ವಿರುದ್ಧ ಬರ್ಮಿಂಗ್‌ಹ್ಯಾಂನಲ್ಲಿ 181 ರನ್ ಗೆಲುವು ಕಂಡಿದ್ದು ನ್ಯೂಜಿಲೆಂಡ್‌ನ ದೊಡ್ಡ ವಿಶ್ವಕಪ್ ಗೆಲುವು ಎನಿಸಿದೆ. ಅಫ್ಘಾನಿಸ್ತಾನ ತಂಡದ ವಿಶ್ವಕಪ್‌ನ 2ನೇ ಕನಿಷ್ಠ ಮೊತ್ತ ಎನಿಸಿದೆ.

ಅರಮನೆ ಅಂಗಳದಲ್ಲಿ ವಿದೇಶಿಗರೂ ಸೇರಿ ನೂರಾರು ಮಂದಿ ಯೋಗ ಪ್ರದರ್ಶನ



ಮೈಸೂರು,ಅ.18(ಎಂಟಿವೈ)– ದಸರಾ ಮಹೋತ್ಸವದ ಅಂಗವಾಗಿ ಮೈಸೂರು ಅರಮನೆ ಅಂಗಳದಲ್ಲಿ ಬುಧವಾರ ದಸರಾ ಯೋಗ ಉಪಸಮಿತಿ ಆಯೋಜಿಸಿದ್ದ ಯೋಗ ಪ್ರದರ್ಶನದಲ್ಲಿ ವಿದೇಶಿಗರೂ ಸೇರಿದಂತೆ ನೂರಾರು ಯೋಗಪಟುಗಳು ಪಾಲ್ಗೊಂಡು ಯೋಗ ಪ್ರದರ್ಶಿಸಿದರು.

ನವರಾತ್ರಿ ಹಿನ್ನೆಲೆಯಲ್ಲಿ ಮೈಸೂರಿನ ವಿವಿಧೆಡೆ ಹಲವು ಕಾರ್ಯಕ್ರಮಗಳು ಜರುಗುತ್ತಿದ್ದು, ಇಂದು ಯೋಗ ದಸರಾ ಉಪ ಸಮಿತಿ ಯೋಗದ ಮಹತ್ವ ಸಾರುವ ನಿಟ್ಟಿನಲ್ಲಿ ಸಾಮೂಹಿಕ ಯೋಗ ಪ್ರದರ್ಶನ ಕಾರ್ಯಕ್ರಮ ಆಯೋಜಿಸಿತ್ತು. ಯೋಗ ಪ್ರದರ್ಶನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು. ಮುಂಜಾನೆ ಅರಮನೆ ಮುಂಭಾಗ ತಂಪಾದ ವಾತಾವರಣದಲ್ಲಿ ವಿವಿಧ ವಯೋಮಾನದ ಯೋಗಪಟುಗಳು ಯೋಗ ಪ್ರದರ್ಶಿಸಿ ಗಮನ ಸೆಳೆದರು.

ಆರೋಗ್ಯ ಕಾಪಾಡಿಕೊಳ್ಳಲು ಯೋಗ ಮುಖ್ಯ: ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಆರೋಗ್ಯ ಕಾಪಾಡಿಕೊಳ್ಳಲು ಯೋಗ ಪ್ರಮುಖ ಪಾತ್ರ ವಹಿಸುತ್ತದೆ. ಈ ವಿಧಾನದಿಂದ ಹೆಚ್ಚು ಹಣ ಖರ್ಚು ಮಾಡದೆ ರೋಗವನ್ನು ನಿಯಂತ್ರಿಸಿ ಕೊಂಡು ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಹಣ, ಆಸ್ತಿ, ಸಂಪತ್ತು ಕಳೆದುಕೊಂಡರೆ ಮರಳಿ ಪಡೆದುಕೊಳ್ಳಬಹುದು. ಆದರೆ, ಆರೋಗ್ಯ ಕೆಟ್ಟರೆ ಅದು ತುಂಬಲಾರದ ನಷ್ಟ ಅನುಭವಿಸಬೇಕಾಗುತ್ತದೆ. ಇದರಿಂದ ಎಲ್ಲರೂ ಯೋಗಾಭ್ಯಾಸ ಮಾಡಬೇಕು. ನಿತ್ಯ ನಿಯಮಿತವಾದ ವ್ಯಾಯಾಮ, ನಡಿಗೆ, ಕ್ರೀಡಾಭ್ಯಾಸದಲ್ಲಿ ತೊಡಗಿಸಿಕೊಳ್ಳುವುದರಿಂದ ಮನಸ್ಸನ್ನು ಉಲ್ಲಾಸದತ್ತ ಕೊಂಡೊಯ್ಯಬಹುದು. ಯೋಗಾಭ್ಯಾಸವೂ ರೋಗಕ್ಕೆ ಉತ್ತಮವಾದ ಚಿಕಿತ್ಸಾ ವಿಧಾನವೂ ಆಗಿದೆ ಎಂದರು.

ದೈಹಿಕ, ಮಾನಸಿಕ ಸದೃಢತೆಗೆ ಯೋಗ ಉಪಯುಕ್ತವಾಗಿದೆ. ಆರೋಗ್ಯದಲ್ಲಿ ಸಮತೋಲನ ಕಾಯಲು ನಿರಂತರ ಯೋಗಾಭ್ಯಾಸ ಸಹಕಾರಿಯಾಗಿದೆ. ವಿಶ್ವದ ಎಲ್ಲಾ ಜನರು ಒಂದೇ ಕುಟುಂಬದವರು ಎಂಬ ಸಂದೇಶವನ್ನು ಯೋಗ ಸಾರುತ್ತದೆ. ಮೈಸೂರು ಸಾಂಸ್ಕೃತಿಕ ನಗರ ಮಾತ್ರವಲ್ಲದೆ, ಯೋಗ ನಗರಿ ಎಂದೂ ಪ್ರಸಿದ್ಧಿ ಪಡೆದಿದೆ. ರಾಜರ ಕಾಲದಿಂದಲೂ ಯೋಗವನ್ನು ಪ್ರೋತ್ಸಾಹಿಸಲಾಗುತ್ತಿದೆ. ದೇಶಕ್ಕೆ ಮಾದರಿ ಆಡಳಿತ ನೀಡಿದ ನಾಲ್ವಡಿ ಕೃಷ್ಣರಾಜ ಒಡೆಯರ ದೂರದೃಷ್ಟಿಯನ್ನು ಆಧರಿಸಿ ಈ ಬಾರಿಯ ದಸರಾವನ್ನು ಆಯೋಜನೆ ಮಾಡಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ಜಿ.ರೂಪ, ಯೋಗ ದಸರಾ ಉಪಸಮಿತಿ ಅಧ್ಯಕ್ಷ ದೇವರಾಜು, ಉಪಾಧ್ಯಕ್ಷರಾದ ಹೇಮಂತ್, ಮಹೇಶ್, ಉಪ ವಿಶೇಷಾಧಿಕಾರಿ ಕೆ.ರಮ್ಯ, ಕಾರ್ಯಾಧ್ಯಕ್ಷೆ ಡಿ.ಎಂ.ರಾಣಿ, ಕಾರ್ಯದರ್ಶಿ ಡಾ.ಪುಷ್ಪ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಗಾಜಾ ಆಸ್ಪತ್ರೆ ಮೇಲೆ ದಾಳಿ; 500ಕ್ಕೂ ಅಧಿಕ ಸಾವು



ದುಬೈ: ಗಾಜಾ ಪಟ್ಟಿಯಲ್ಲಿರುವ ಅಲ್ ಅಹ್ಲಿ ಅಲ್ ಅರಬಿ ಆಸ್ಪತ್ರೆಯ ಮೇಲೆ ನಡೆದ ದಾಳಿಯಲ್ಲಿ 500ಕ್ಕೂ ಅಧಿಕ ಪ್ಯಾಲೆಸ್ಟೀನ್ ನಾಗರಿಕರು ಮೃತಪಟ್ಟಿದ್ದು, 314 ಮಂದಿ ಗಾಯಗೊಂಡಿದ್ದಾರೆ ಎಂದು ಪ್ಯಾಲೆಸ್ಟೀನ್‌ನ ಆರೋಗ್ಯ ಇಲಾಖೆಯ ವಕ್ತಾರ ಅಶ್ರಫ್ ಅಲ್ ಖಿದ್ರಾ ಹೇಳಿದ್ದಾರೆ. ಅಲ್ಲದೆ ಈ ಘಟನೆಯನ್ನು ಇಸ್ರೇಲಿ ಹತ್ಯಾಕಾಂಡ ಎಂದು ಅವರು ಟೀಕಿಸಿದ್ದಾರೆ.

ಅ.7ರಿಂದ ಈಚೆಗೆ ಗಾಜಾದಲ್ಲಿ 3,478 ಮಂದಿ ಪ್ಯಾಲೆಸ್ಟೀನ್ ನಾಗರಿಕರು ಸಾವಿಗೀಡಾಗಿದ್ದಾರೆ. 12 ಸಾವಿರ ಮಂದಿ ಗಾಯಗೊಂಡಿದ್ದಾರೆ ಎಂದೂ ಸಚಿವಾಲಯ ತಿಳಿಸಿದೆ. ಮಂಗಳವಾರ ಆಸ್ಪತ್ರೆ ಮೇಲೆ ನಡೆದ ದಾಳಿಗೆ ಇಸ್ರೇಲ್ ಕಾರಣ ಎಂದು ಪ್ಯಾಲೆಸ್ಟೀನ್ ಅಧಿಕಾರಿಗಳು ದೂರಿದ್ದಾರೆ. ಅದರೆ ಇದು ಹಮಾಸ್‌ನ ಗುರಿ ತಪ್ಪಿದ ರಾಕೆಟ್ ದಾಳಿ ಎಂದು ಹೇಳಿರುವ ಇಸ್ರೇಲ್, ಹಮಾಸ್ ಸುಳ್ಳು ಹೇಳುತ್ತಿದೆ ಎಂದು ಆರೋಪಿಸಿದೆ.

ಈ ದಾಳಿಗೆ ಜಾಗತಿಕ ವಲಯದಿಂದ ಖಂಡನೆ ವ್ಯಕ್ತವಾಗಿವೆ. ದಾಳಿಗೆ ಕಾರಣಕರ್ತನನ್ನು ಹೊಣೆಗಾರರನ್ನಾಗಿ ಮಾಡಬೇಕು ಎಂದು ಹಲವು ದೇಶಗಳು ಒತ್ತಾಯಿಸಿವೆ. ಇದು ಇಸ್ರೇಲ್‌ನದ್ದೇ ಕೃತ್ಯ ಎಂದು ಹಲವು ಮುಸ್ಲಿಂ ರಾಷ್ಟ್ರಗಳು ಆರೋಪಿಸಿವೆ.

ಮೋದಿ ಖಂಡನೆ: ಗಾಜಾ ಆಸ್ಪತ್ರೆ ಮೇಲೆ ನಡೆದ ಅಮಾನುಷ ದಾಳಿಯನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ತೀವ್ರವಾಗಿ ಖಂಡಿಸಿದ್ದು, ಭಾಗಿಯಾದವರು ಹೊಣೆ ಹೊರಬೇಕು ಎಂದು ಬುಧವಾರ ಹೇಳಿದ್ದಾರೆ.

ಸಾಮಾಜಿಕ ಜಾಲತಾಣ ಟ್ವಿಟರ್‌ನಲ್ಲಿ ಟ್ವೀಟ್ ಮಾಡಿರುವ ಅವರು, ಸಂಘರ್ಷದಲ್ಲಿ ನಾಗರಿಕರ ಸಾವು–ನೋವುಗಳು ಕಳವಳಕಾರಿ ವಿಚಾರವಾಗಿದೆ. ಗಾಜಾದ ಅಲ್ ಅಹ್ಲಿ ಆಸ್ಪತ್ರೆಯಲ್ಲಿ ಸಂಭವಿಸಿದ ದುರಂತದಲ್ಲಿ ಜೀವಹಾನಿಯ ಬಗ್ಗೆ ತೀವ್ರ ಆಘಾತವಾಗಿದೆ. ಸಂತ್ರಸ್ತರ ಕುಟುಂಬಗಳಿಗೆ ಸಂತಾಪಗಳನ್ನು ಸೂಚಿಸುತ್ತೇನೆ. ಗಾಯಗೊಂಡವರು ಶೀಘ್ರಗತಿಯಲ್ಲಿ ಗುಣಮುಖರಾಗಲಿ ಎಂದು ತಿಳಿಸಿದ್ದಾರೆ.

ಇಂಡಿಯನ್ ಸೂಪರ್ ವುಮೆನ್!: ಇಸ್ರೇಲ್‌ನ ಅನಾರೋಗ್ಯ ಪೀಡಿತ ದಂಪತಿ ಕಾಳಜಿ ವಹಿಸಲು ನಿಯುಕ್ತಿಗೊಂಡಿರುವ ಕೇರಳದ ಇಬ್ಬರು ಮಹಿಳೆಯರು ದಂಪತಿಗಳ ಜೀವ ಉಳಿಸಿದ್ದಾರೆ.

ಅ.07 ರಂದು ಇಸ್ರೇಲಿಗಳ ಹಬ್ಬದ ಸಂದರ್ಭದಲ್ಲಿ ನಡೆದ ದಾಳಿಯ ವೇಳೆ ಕೇರಳದ ಮಹಿಳೆಯರು ಹಮಾಸ್ ಉಗ್ರರಿಂದ ವೃದ್ಧ ದಂಪತಿಯ ಜೀವ ಉಳಿಸಿ ಮಾನವೀಯತೆ ಮೆರೆದಿದ್ದಾರೆ.

ಭಾರತದಲ್ಲಿರುವ ಇಸ್ರೇಲ್‌ನ ರಾಯಭಾರ ಕಚೇರಿ ಟ್ವಿಟರ್‌ನಲ್ಲಿ ಈ ಬಗ್ಗೆ ಮಾಹಿತಿ ಹಂಚಿಕೊಂಡಿದ್ದು, ಇಬ್ಬರು ಕೇರಳಿಗರಾದ ಸಬಿತಾ, ಮೀರಾ ಮೋಹನನ್ ಅವರನ್ನು ಭಾರತದ ಸೂಪರ್ ವುಮೆನ್ ಎಂದು ಬಣ್ಣಿಸಿ ಧನ್ಯವಾದ ತಿಳಿಸಿದೆ.



ಕನ್ನಡದ ಬಿಗ್‌ಬಾಸ್ ಸೀಸನ್ 10ರಲ್ಲಿ ಭಾಗವಹಿಸಿದ್ದ ಮೈಸೂರಿನ ಉರಗ ತಜ್ಞ ಸ್ನೇಕ್ ಶ್ಯಾಮ್ ಅವರನ್ನು ಪರಿಸರ ಸಂಜೀವಿನಿ ತಂಡದ ಅಧ್ಯಕ್ಷ ಸಿ.ಸಂದೀಪ್, ಸದಸ್ಯರಾದ ಧರ್ಮೇಂದ್ರ ದೀಪಕ್, ಮಧುಸೂದನ್, ಶ್ರೀಧರ್, ಸೈಫ್ ಅಭಿನಂದಿಸಿದರು.



ದಸರಾ ಮಹೋತ್ಸವದ ಅಂಗವಾಗಿ ಯೋಗ ದಸರಾ ಉಪಸಮಿತಿ ಆಯೋಜಿಸಿದ್ದ ರಾಜ್ಯ ಮಟ್ಟದ ಯೋಗ ನೃತ್ಯ ರೂಪಕ ಸ್ಪರ್ಧೆಯಲ್ಲಿ ಗೀತಾ ಶಿಕ್ಷಣ ಸಂಘ ಸಿಂಹ ಸುಬ್ಬ ಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನ ಆರ್.ಧ್ರುವ ದ್ವಿತೀಯ ಬಹುಮಾನ ಪಡೆದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.10.2023 ಗುರುವಾರ, ಮಳೆ ನಕ್ಷತ್ರ: ಚಿತ್ತ, 11.10.2023 ರಿಂದ 24.10.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಜ್ಯೇಷ್ಠ ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ:** ಶರನ್ನವರಾತ್ರಿ ಉತ್ಸವ, ಸಪ್ತಪತಿ ಪಾರಾಯಣ, ಸುಮಂಗಲಿಯರಿಂದ ಕುಂಕುಮಾರ್ಚನೆ, ಪೂರ್ಣಾಹುತಿ, ಶ್ರೀ ದುರ್ಗಾಸೂಕ್ತ ಹೋಮ, ವಾರಾಹಿ ಅಲಂಕಾರ, ಸ್ಥಳ: ದೇವಸ್ಥಾನದ ಪ್ರಾಂಗಣ, ವಿ.ವಿ.ಮೊಹಲ್ಲಾ, ಬೆಳಗ್ಗೆಯಿಂದ.

■ **ಸ್ವರ್ಣ ನೃಸಿಂಹದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್ :** ಶರನ್ನವರಾತ್ರಿ ಪೂಜಾ ಮಹೋತ್ಸವ, ಆಶೀರ್ವಾದ: ಶ್ರೀ ವೆಂಕಟಚಲ ಅವಧೂತ ಗುರು ಮಹಾರಾಜರು, ಸಾನ್ನಿಧ್ಯ: ಶ್ರೀ ಅರ್ಜುನ ಅವಧೂತರು, ಬೆಳಗ್ಗೆ 10ಕ್ಕೆ ಲಲಿತಾಹೋಮ, ಸಂಜೆ 7ಕ್ಕೆ ದುರ್ಗಾದೀಪ ನಮಸ್ಕಾರ, ಸ್ಥಳ: ಶ್ರೀರಾಮಮಂದಿರ, ಜಯನಗರ,

■ **ಸಿ. ಕೃಷ್ಣಯ್ಯ ಚೆಟ್ಟಿ ಗ್ರೂಪ್ ಆಫ್ ಜ್ಯುವೆಲ್ಲರ್ಸ್ :** ಎಕ್ಸ್‌ಕ್ಲೂಸಿವ್ ದರ್ಬಾರ್ ಕಲೆಕ್ಷನ್ ಪ್ರದರ್ಶನ, ಉದ್ಘಾಟನೆ : ಸಮಾಜ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ, ಚಲನಚಿತ್ರ ನಟಿ ರೋಶ್ನಿ ಪ್ರಕಾಶ್, ಸ್ಥಳ: ಹೋಟೆಲ್ ಸಂದೇಶ್ ದಿ ಪ್ರಿನ್ಸ್, ಬೆಳಗ್ಗೆ 10.30 ರಿಂದ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು:** ಐಡಿಯಾಥಾನ್ ಪ್ರೋಗ್ರಾಂ ಫಾರ್ ಸ್ಟಾರ್ಟಪ್, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಮುಖ್ಯ ಕಾರ್ಯ ನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಮುಖ್ಯ ಅತಿಥಿಗಳು: ಎಸ್‌ಜೆಸಿಇ ಮುಖ್ಯ ಕಾರ್ಯನಿರ್ವಾಹಕ ಶಿವಶಂಕರ್, ಗೌರವ ಅತಿಥಿಗಳು: ಪ್ರಿನ್ಸಿಪಾಲ್ ಡಾ.ಪ್ರತಿಭಾ, ಸ್ಥಳ: ಸೆಮಿನಾರ್ ಹಾಲ್, ಬೆಳಗ್ಗೆ 10.30ಕ್ಕೆ

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 26ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಲಲಿತಾ ಪಂಚಮಿ ಪ್ರಯುಕ್ತ ಮಹಾಭಿಷೇಕ, ಶ್ರೀ ಸ್ಕಂದಮಾತಾ, ಶ್ರೀ ವಿದ್ಯಾ ಜ್ವಲದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ ಮತ್ತು ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30 ರಿಂದ ಶ್ರೀ ಲಲಿತಾ ಮಹಾಯಾಗ ಮತ್ತು ಶ್ರೀ ದಶಮಹಾ ವಿದ್ಯಾ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್ :** ವಿದ್ವಾನ್ ಕೃಷ್ಣರಾವ್ ಪ್ರಕಾಶ್ ಅವರಿಂದ ಪತಂಜಲಿಯ ಯೋಗ ಸೂತ್ರಗಳು– ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಕಾರ್ಯಕ್ರಮ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ದಿವ್ಯ ಸಾನ್ನಿಧ್ಯ, ಬೆಳಗ್ಗೆ 9ರಿಂದ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀ ಚಕ್ರಪೂಜೆ, ನವಾವರಣ ಪೂಜೆ, ವಿದುಷಿ ಕಲಾಪಿನಿ ಕೊಂಕಲಿ ಅವರಿಂದ ಹಿಂದೂಸ್ಥಾನಿ ಸಂಗೀತ ಗಾಯನ, ಮಧ್ಯಾಹ್ನ 12 ಗಂಟೆಗೆ ಅನ್ನಾರ್ಚನೆ, ಪರಾಶಕ್ತಿ ಪೂಜೆ, ಹೋಮ ಪೂರ್ಣಾಹುತಿ, ಸಂಜೆ 4 ಗಂಟೆಗೆ ಮಹಾಮಂಗಳಾರತಿ, ಡೋಲೋತ್ಸವ, ಸುನಾಸಿನಿ ಪೂಜೆ, ಸಂಜೆ 6 ಗಂಟೆಗೆ ಶ್ರೀ ಸ್ವಾಮೀಜಿ ಅವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದಮಂಟಪ, ಆಶ್ರಮದ ಆವರಣ.

■ **ಶ್ರೀ ಸುಬ್ರಾಯದಾಸರ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ, ಪಂಚಮಿ, ಬೆಳಗ್ಗೆ ಮಹಾಸುದರ್ಶನ ಹೋಮ, ಸಾಯಂಕಾಲ ಮಹಾಕಲ್ಯಾಣೋತ್ಸವ, ಪ್ರವಚನ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನದ ಆವರಣ, ದೇವರಾಜ ಮೊಹಲ್ಲಾ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** 55ನೇ ವರ್ಷದ ನವರಾತ್ರಿ ಪೂಜಾ ಕಾರ್ಯಕ್ರಮ, ಗಜಾರೂಡಾಲಂಕಾರ, ಸಂಜೆ 5 ಗಂಟೆಗೆ.

■ **ಶ್ರೀ ವ್ಯಾಸರಾಜ ಮಠ :** ನವರಾತ್ರಿ ಪ್ರಯುಕ್ತ ವಿದ್ವಾನ್ ಎಸ್.ಎಂ. ಪ್ರಣವಾಚಾರ್ಯ ಅವರಿಂದ 'ಶ್ರೀನಿವಾಸ ಕಲ್ಯಾಣ ಪ್ರವಚನ' ಸ್ಥಳ: ಶ್ರೀ ವ್ಯಾಸರಾಜ ಮಠ ಸೋಸಲೆ ಶ್ರೀ ವ್ಯಾಸತೀರ್ಥ ವಿದ್ಯಾಪೀಠ, ಕೃಷ್ಣಮೂರ್ತಿಪುರಂ, ಸಂಜೆ 6ರಿಂದ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ವಿಶ್ವ ಹ್ಯಾಬಿಟೇಟ್ ಡೇ ಅಂಗವಾಗಿ ಜಂಗಲ್ ಸ್ಕೇಪ್ಸ್ ಚಾರಿಟೆಬಲ್ ಟ್ರಸ್ಟ್ ಸಮಿತಿ ಸದಸ್ಯ ಹನುಮಂತರಾವ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ.ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಆವರಣ, ಸಂಜೆ 6ಕ್ಕೆ

■ **ಕೆ.ಗೋಕುಲ್ ಗೋವರ್ಧನ್ ಸ್ನೇಹ ಬಳಗ:** ಮೈಸೂರು ವಿವಿ ಸಿಂಡಿಕೇಟ್ ಸದಸ್ಯರಾಗಿ ನೇಮಕವಾಗಿರುವ ಕೆ.ಗೋಕುಲ್ ಗೋವರ್ಧನ್ ಅವರಿಗೆ ಅಭಿನಂದನಾ ಸಮಾರಂಭ, ಅಧ್ಯಕ್ಷತೆ: ಮಲ್ಲಿಗೆ ಸೇವಾ ಸಂಘದ ಅಧ್ಯಕ್ಷ ಯು.ಜಿ.ಗೋಪಾಲರಾಜೇ ಅರಸ್, ಉದ್ಘಾಟನೆ: ಹಿರಿಯ ನ್ಯಾಯವಾದಿ ಪಿ.ಡಿ.ಮೇದಪ್ಪ, ಮುಖ್ಯ ಅತಿಥಿಗಳು: ಟೀಂ ಮೈಸೂರು ಪ್ರತಿಷ್ಠಾನ ಅಧ್ಯಕ್ಷ ಕಿರಣ್ ಜೈರಾಮ್‌ಗೌಡ, ಯಶ್ವಂತ್‌ಕುಮಾರ್, ಸ್ಥಳ: ನೇಗಿಲ ಯೋಗಿ ಮರುಳೇಶ್ವರ ಸೇವಾ ಭವನ, ಜಯನಗರ, ಸಂಜೆ 6ಕ್ಕೆ.

■ **ರಂಗಾಯಣ :** ನವರಾತ್ರಿ ರಂಗೋತ್ಸವ, ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಂದ ರೂಪ ರೂಪಗಳನು ದಾಟಿ ನಾಟಕ ಪ್ರದರ್ಶನ, ರಚನೆ : ಬೇಲೂರು ರಘುನಂದನ, ನಿರ್ದೇಶನ: ಪ್ರವೀಣ್ ಬೆಳ್ಳಿ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.


ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ದಸರಾ ವಿಶೇಷ ಗೀತಾರಾಧನ, 6.30 ಮೈಸೂರು ದಸರಾದಲ್ಲಿ ಇಂದು, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್, ಸಂಕಲನ–ಎಸ್. ಲಕ್ಷ್ಮೀನಾರಾಯಣ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ– ಮೈಸೂರಿನ ಎನ್. ರವಿಶಂಕರ್, 6.40 ಪದ ಸಂಸ್ಕೃತಿ, ಪ್ರಸ್ತುತಿ– ಡಾ.ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ– ಮೈಸೂರು ಉಮೇಶ್, 9.05 ಮೈಸೂರು ಮಹಲುಗಳು–ರೂಪಕ ಸರಣಿ, ಪ್ರಸ್ತುತಿ–ಡಾ. ಮೈಸೂರು ಉಮೇಶ್, 10.00 ದಸರಾ ವಿಶೇಷ ಕಥಾ ಕಾಲಕ್ಷೇಪ –"ನಾರಾಯಣಿ ಅವತಾರ" ನಡೆಸಿಕೊಡುತ್ತಾರೆ ವಿ. ಮಾಲಿನಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 "ಕನಕ–ಜಾನಕಿ" ತಾಳಮದ್ದಲೆಯ ರೂಪಕ ಸರಣಿ, ಪರಿಕಲ್ಪನೆ ಮತ್ತು ಪ್ರಸ್ತುತಿ–ದಿವಾಕರ ಹೆಗಡೆ, 1.20 ಭಾವಗೀತೆ –ಸಾವಿತ್ರಿ ಪ್ರಭಾಕರ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.30 ಭಾರತ ಹಾಗೂ ಬಾಂಗ್ಲಾದೇಶ್ ತಂಡಗಳ ನಡುವೆ ಪುಣೆಯಲ್ಲಿ ನಡೆಯಲಿರುವ ಐ.ಸಿ.ಸಿ. ವಿಶ್ವಕಪ್ ಏಕದಿನದ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ

ಮೈಸೂರು ದಸರಾ ಕಾರ್ಯಕ್ರಮ



■ **ಅರಮನೆ ಆವರಣ**

ಸಂಜೆ 4.30 ರಿಂದ ವಿಶೇಷ ಚೇತನ ಕಲಾವಿದರಿಂದ ಸಂಗೀತ ನೃತ್ಯ ಸಮ್ಮಿಲನ, ಸಂಜೆ 5 ರಿಂದ ವಿದ್ವಾನ್ ಮೈಸೂರು ಹರೀಶ್ ಪಾಂಡವ್ ಮತ್ತು ವೃಂದದವರಿಂದ ಸ್ಯಾಕ್ಸೋಫೋನ್ ಫ್ಯೂಷನ್, ಸಂಜೆ 6 ರಿಂದ ಕರ್ನಾಟಕ ಕಲಾಶ್ರೀ ವಿದ್ಯಾ ರವಿಶಂಕರ್ ಮತ್ತು ತಂಡದಿಂದ ನೃತ್ಯರೂಪಕ : ಶ್ರೀ ರಾಜರಾಜೇಶ್ವರಿ, ಸಂಜೆ 7 ರಿಂದ ಲಾಲ್ಗುಡಿ ಜಿ.ಜೆ.ಆರ್. ಕೃಷ್ಣನ್ ಮತ್ತು ಲಾಲ್ಗುಡಿ ವಿಜಯಲಕ್ಷ್ಮಿ ಅವರಿಂದ ವಯೋಲಿನ್ ವಾದನ.

■ **ಜಗನ್ಮೋಹನ ಅರಮನೆ ವೇದಿಕೆ**

ಸಂಜೆ 6 ರಿಂದ ತುಮಕೂರು ಕೀರ್ತನ ರಂಗಬಳಗದಿಂದ ಕಥಾ ಕೀರ್ತನ, ಸಂಜೆ 6.45 ರಿಂದ ವಿಜಯನಗರದ ಪಲ್ಲವಿ ಆರ್. ಮತ್ತು ತಂಡದಿಂದ ಶಾಸ್ತ್ರೀಯ ಸಂಗೀತ, ಸಂಜೆ 7.30 ರಿಂದ ಮೈಸೂರಿನ ಸಾಕ್ಷಿ ಎಸ್. ನಾಯಕ್ ಅವರಿಂದ ನೃತ್ಯರೂಪಕ, ರಾತ್ರಿ 8.30 ರಿಂದ ಶರಣಪ್ಪ ಹೆಚ್. ಭಜಂತ್ರಿ ಅವರಿಂದ ಹಿಂದೂಸ್ಥಾನಿ ಸಂಗೀತ.

■ **ಕರ್ನಾಟಕ ಕಲಾಮಂದಿರ ವೇದಿಕೆ**

ಸಂಜೆ 5.30 ರಿಂದ ಎಸ್.ಎನ್. ಮಂಜುನಾಥ್ ಮತ್ತು ತಂಡದಿಂದ ಸುಗಮ ಸಂಗೀತ, ಸಂಜೆ 6 ರಿಂದ ಚಿಕ್ಕಮಗಳೂರು ಮಾರುತಿ ಚಿಟ್ಟಿಮೇಳ ಕಲಾ ಸಂಘದಿಂದ ಚಿಟ್ಟಿಮೇಳ, ಸಂಜೆ 6.45 ರಿಂದ ರಾಯಚೂರಿನ ಉಸ್ಮಾನ್ ಸಾಬ್ ಅವರಿಂದ ಭಾವೈಕ್ಯತಾ ಗೀತೆ, ಸಂಜೆ 7.30 ರಿಂದ ಕೊಪ್ಪಳದ ರುಕ್ಮಿಣಿ ಸುರ್ವೆ ಅವರಿಂದ ನೃತ್ಯರೂಪಕ, ರಾತ್ರಿ 8.30 ರಿಂದ ವಿದ್ವಾನ್ ಪರಮೇಶ್ವರ ಹೆಗಡೆ ಅವರಿಂದ ತಬಲ ತರಂಗ ವಾದ್ಯ ಸಂಗೀತ.

■ **ಗಾನಭಾರತಿ ವೇದಿಕೆ**

ಸಂಜೆ 6 ರಿಂದ ಶ್ರೀರಂಗಪಟ್ಟಣದ ಪಿ.ಬಿ. ಶ್ರೀನಿವಾಸ್ ಅವರಿಂದ ಭಾವಗೀತೆ, ಸಂಜೆ 6.45 ರಿಂದ ಮೈಸೂರಿನ ಕೃಷ್ಣೇ ನೃತ್ಯ ಶಾಲೆಯ ಎಚ್.ಎಸ್. ಗಾಯಿತ್ರಿ ಅವರಿಂದ ಭರತನಾಟ್ಯ, ಸಂಜೆ 7.30 ರಿಂದ ಚನ್ನರಾಯಪಟ್ಟಣದ ಸೋನಿಕ ಅವರಿಂದ ನೃತ್ಯರೂಪಕ : ನೃತ್ಯ ಕಲಾನಿಕೇತನ, ರಾತ್ರಿ 8.30 ರಿಂದ ರಾಮನಗರದ ಮೌರ್ಯ ಮತ್ತು ತಂಡದಿಂದ ಹೋರಾಟದ ಗೀತೆಗಳು.

■ **ನಾದಬ್ರಹ್ಮ ಸಂಗೀತಾ ಸಭಾ ವೇದಿಕೆ**

ಸಂಜೆ 6 ರಿಂದ ಚಾಮರಾಜನಗರ ಜಿಲ್ಲಾ ಕಲಾವಿದರಿಂದ ಸೋಬಾನೆ ಪದ, ಸಂಜೆ 6.45 ರಿಂದ ಬೆಂಗಳೂರಿನ ಅಂಕಿತ, ವಸಂತಪುರ ಅವರಿಂದ ಭರತನಾಟ್ಯ, ಸಂಜೆ 7.30 ರಿಂದ ಶ್ರೀ ನಾಟ್ಯಾ ಕಲಾರ್ಪಣ ನೃತ್ಯ ಕೇಂದ್ರ ಟ್ರಸ್ಟ್‌ನ ಪದ್ಮಜ ಜಯರಾಮ್ ಅವರಿಂದ ಸಮೂಹ ಭರತನಾಟ್ಯ, ರಾತ್ರಿ 8.30 ರಿಂದ ಬೆಳಗಾವಿ ರಾಜಪ್ರಭುತ ಧೋತ್ರೆ ಅವರಿಂದ ಹಿಂದೂಸ್ಥಾನಿ ಸಂಗೀತ.

■ **ಚಿಕ್ಕ ಗಡಿಯಾರ ವೇದಿಕೆ**

ಸಂಜೆ 6ರಿಂದ ವಿರೂಪಾಕ್ಷ ಮತ್ತು ತಂಡದಿಂದ ಕೀಲು ಕುದುರೆ, ಕೋಲಾರದ ಮಂಜುನಾಥ್ ಮತ್ತು ತಂಡದಿಂದ ತಮಟೆ ವಾದನ, ಸಂಜೆ 6.30 ರಿಂದ ಹಾವೇರಿ ಆನಂದಪ್ಪ ಜೋಗಿ ಅವರಿಂದ ಕಿನ್ನರಿ ಹಾಡು, ಸಂಜೆ 7 ರಿಂದ ಶಿವು ಮತ್ತು ತಂಡದಿಂದ ಪೂಜಾ ಕುಣಿತ, ಕಲಘಟಗಿ ಸದ್ಗುರು ಸಿದ್ಧಾರೂಡ ಡೊಳ್ಳಿನ ಸಂಘದಿಂದ ಡೊಳ್ಳು ಕುಣಿತ, ಸಂಜೆ 7.30 ರಿಂದ ಬೆಂಗಳೂರಿನ ತಾಯಿಬೇರು ದೇಶಿ ಮ್ಯೂಸಿಕ್ ಬ್ಯಾಂಡ್‌ನಿಂದ ಸುಗಮ ಸಂಗೀತ, ರಾತ್ರಿ 8.30 ರಿಂದ ಹಿಪ್ಪರಗಿ ಮಾತೋಶ್ರೀ ಚಂದ್ರವ್ವ ಮಲ್ಲಪ್ಪ ಕಲ್ಲಳ್ಳಿ ಅವರಿಂದ ಜನಪದ ಗೀತೆ.

■ **ಪುರಭವನ ವೇದಿಕೆ**

ಬೆಳಗ್ಗೆ 10.30ರಿಂದ ಬಾಗಲಕೋಟೆ ನಾರಾಯಣ ದಂ ಪತ್ತಾರ ಅವರಿಂದ ನಾಟಕ : ಶ್ರೀ ಕೃಷ್ಣ ಪಾರಿಜಾತ, ಮಧ್ಯಾಹ್ನ 3 ರಿಂದ ಚಿತ್ರದುರ್ಗ ಕುಮಾರೇಶ್ವರ ನಾಟಕ ಸಂಘದಿಂದ ಸಾಮಾಜಿಕ ನಾಟಕ: ಕಿವುಡ ಮಾಡಿದ ಕಿತಾಪತಿ, ಸಂಜೆ 6 ರಿಂದ ಮೈಸೂರಿನ ಶಾಂತದೇವಿ ಮತ್ತು ತಂಡದಿಂದ ನಾಟಕ : ಮೋಹಿನಿ ಭಸ್ಮಾಸುರ.

■ **ಕಿರುರಂಗಮಂದಿರ ವೇದಿಕೆ**

ಮಧ್ಯಾಹ್ನ 2ರಿಂದ ಪದ್ಮಪಾಣಿ ಲಲಿತಕಲಾ ಅಕಾಡೆಮಿಯ ನಾರಾಯಣಸ್ವಾಮಿ ಅವರಿಂದ ಜನಪದ ಗಾಯನ, ಮಧ್ಯಾಹ್ನ 3 ರಿಂದ ಮೈಸೂರಿನ ಅದಮ್ಯ ರಂಗ ಶಾಲೆ ಅವರಿಂದ ನಾಟಕ : ಗಂಡಸ್ಕತ್ರಿ, ಸಂಜೆ 7 ರಿಂದ ಬೆಂಗಳೂರಿನ ರಂಗ ಸಂಪದ ಕಲಾವಿದರಿಂದ ನಾಟಕ : ಲೋಕದ ಒಳ ಹೊರಗೆ

■ **ರಮಾಗೋವಿಂದ ರಂಗಮಂದಿರ ವೇದಿಕೆ**

ಸಂಜೆ 5.30 ರಿಂದ ರಂಜನಿ ಎಸ್. ರಾವ್ ಅವರಿಂದ ಸುಗಮ ಸಂಗೀತ, ಸಂಜೆ 6.30 ರಿಂದ ಮೈಸೂರಿನ ಕು. ವಿನ್ಮಯಿ ಕೆ.ಹೆಚ್. ಅವರಿಂದ ಭರತನಾಟ್ಯ, ಸಂಜೆ 7.30 ರಿಂದ ಬೆಂಗಳೂರಿನ ನಂದನ ತಂಡದಿಂದ ನಾಟಕ : ಜಲಗಾರ

■ **ನಟನ ರಂಗಮಂದಿರ**

ಸಂಜೆ 5ರಿಂದ ಶಿವಮೊಗ್ಗದ ವಿದುಷಿ ಸುರೇಖಾ ಗೋಪಾಲ್ ಹೆಗಡೆ ಅವರಿಂದ ಸುಗಮ ಸಂಗೀತ, ಸಂಜೆ 6.30 ರಿಂದ ಮಂಗಳೂರಿನ ರಂಗ ಸಂಗಾತಿ ಸಾಂಸ್ಕೃತಿಕ ಪ್ರತಿಷ್ಠಾನದಿಂದ ನಾಟಕ : ದಟ್ಸ್ ಆಲ್ ಯುವರ್ ಆನರ್, ರಚನೆ, ನಿರ್ದೇಶನ : ಶಶಿರಾಜ್ ಕಾವೂರು.

■ **ಮಹಾರಾಜ ಕಾಲೇಜು ಮೈದಾನ–ಯುವ ದಸರಾ ಕಾರ್ಯಕ್ರಮ**

ಸಂಜೆ 6.15 ರಿಂದ ಸಂಚಿತ್ ಹೆಗ್ಡೆ ಅವರಿಂದ ಸಂಗೀತ, ರಾತ್ರಿ 8 ಗಂಟೆಗೆ ರಘು ದೀಕ್ಷಿತ್ ಮತ್ತು ತಂಡದಿಂದ ಸಂಗೀತ ನೃತ್ಯ, ರಾತ್ರಿ 9.30 ರಿಂದ 11ರವರೆಗೆ ಶಿಲ್ಪಾರಾವ್ ಮತ್ತು ತಂಡದಿಂದ ಸಂಗೀತ ನೃತ್ಯ ಕಾರ್ಯಕ್ರಮ.

ಶ್ರೀಕಂಠೇಶ್ವರ ದೇವಸ್ಥಾನ

■ **ನಂಜನಗೂಡು ವೇದಿಕೆ**

ಸಂಜೆ 6 ರಿಂದ ಹಾಸನದ ಉಷಾರಾಣಿ ಅವರಿಂದ ಕಂಸಾಳೆ, ಹಾಸನದ ಟಿ.ಎಸ್. ಲಕ್ಷ್ಮಣ ಅವರಿಂದ ಡೊಳ್ಳು ಕುಣಿತ, ಸಂಜೆ 6.45 ರಿಂದ ಬೀದರ್‌ನ ಸಂದೀಪ್ ಕುಮಾರ್ ಮತ್ತು ತಂಡದಿಂದ ಪೌರಾಣಿಕ ರಂಗಗೀತೆ, ಸಂಜೆ 7.30 ರಿಂದ ಅಭಿವ್ಯಕ್ತಿ ಮಹಿಳಾ ಜನಪದ ತಂಡದಿಂದ ಜನಪದ ಗೀತೆ, ರಾತ್ರಿ 8 ರಿಂದ ಅನುರಾಧ ವಿ. ಮತ್ತು ತಂಡದಿಂದ ಭಕ್ತಿಗೀತೆ, ರಾತ್ರಿ 8.30 ರಿಂದ ಧಾರವಾಡದ ಶ್ರೀ ಮಾನಸ ಸಂಗೀತ ಸಂಸ್ಥೆಯಿಂದ ಹಿಂದೂಸ್ಥಾನಿ ಶಹನಾಯಿ ಸಂಗೀತ.

ಮಹಿಳಾ ಮತ್ತು ಮಕ್ಕಳ ದಸರಾ–2023

■ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೈಸೂರು:** ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರಿಂದ ಕಾರ್ಯಕ್ರಮ, ಬೆಳಗ್ಗೆ 10 ರಿಂದ ಹಿರಿಯ ನಾಗರಿಕರಿಗೆ ಆಟೋಟ ಸ್ಪರ್ಧೆ, ಬೆಳಗ್ಗೆ 11.30 ರಿಂದ ಲಗೋರಿ, ಕಾಲಿಗೆ ದಾರ ಕಟ್ಟಿ ಮೇಲಿನಿಂದ ಇಳಿ ಬಿಟ್ಟು ಆಪಲ್ ತಿನ್ನುವುದು, ಜಾನಪದ, ನೃತ್ಯ, ಗೀತೆ, ಮಧ್ಯಾಹ್ನ 12.30 ರಿಂದ ಒನ್ ಮಿನಿಟ್ ಗೇಮ್ಸ್, ಮ. 2.30 ರಿಂದ ಅಂಗನವಾಡಿ ಕಾರ್ಯಕರ್ತೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಮ.3.30 ರಿಂದ ಅಂಧ ಮತ್ತು ಕಿವುಡ ಪಾಠಶಾಲಾ ಮಕ್ಕಳಿಂದ ವಿಶೇಷ ನೃತ್ಯ ಕಾರ್ಯಕ್ರಮ, ನಾಗನಹಳ್ಳಿ ಎಂ. ಮಹಾಲಿಂಗ ಅವರಿಂದ ಸುಗಮ ಸಂಗೀತ, ಶ್ರೀಮತಿ ರೂಪ ಅವರಿಂದ ಸುಗಮ ಸಂಗೀತ, ನಯನ ನಾಗರಾಜ್ ಅವರಿಂದ ಸುಗಮ ಸಂಗೀತ, ಕು. ಎಸ್. ಅನಘ ಅವರಿಂದ ಭರತನಾಟ್ಯ ಸ್ಥಳ: ಜೆ.ಕೆ.ಮೈದಾನ.

ನಾಡಕುಸ್ತಿ ಪಂದ್ಯಾವಳಿ

■ **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ:** ದಸರಾ ಮಹೋತ್ಸವ ಅಂಗವಾಗಿ ನಾಡಕುಸ್ತಿ ಪಂದ್ಯಾವಳಿ, ದಸರಾ ಕಂಠೀರವ, ದಸರಾ ಕೇಸರಿ, ದಸರಾ ಕಿಶೋರ, ದಸರಾ ಕಿಶೋರಿ ಮತ್ತು ದಸರಾ ಕುಮಾರ್ ಪ್ರಶಸ್ತಿಗಾಗಿ ಪಂದ್ಯಾವಳಿ, ಸ್ಥಳ: ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣ, ವಸ್ತು ಪ್ರದರ್ಶನ ಆವರಣ, ದೊಡ್ಡಕೆರೆ ಮೈದಾನ, ಬೆಳಗ್ಗೆ 8 ಗಂಟೆಯಿಂದ.

ದಸರಾ ಚಲನ ಚಿತ್ರೋತ್ಸವ

■ **ಐನಾಕ್ಸ್ (ಮಾಲ್ ಆಫ್ ಮೈಸೂರ್) :** ಕನ್ನಡ ಚಿತ್ರಗಳು: ಬೆಳಗ್ಗೆ 10 ಗಂಟೆಗೆ–ಸತ್ಯ ಹರಿಶ್ಚಂದ್ರ, ಮಧ್ಯಾಹ್ನ 1ಕ್ಕೆ–ಡೇರ್ ಡೆವಿಲ್ ಮುಸ್ತಾಫಾ, ಸಂಜೆ 4 ಗಂಟೆಗೆ–ರಾಘವೇಂದ್ರ ಸ್ಟೋರ್ಸ್, ಸಂಜೆ 7ಕ್ಕೆ–ಗುರು ಶಿಷ್ಯರು

■ **ಭಾರತೀಯ ಚಿತ್ರಗಳು:** ಬೆಳಗ್ಗೆ 10.15ಕ್ಕೆ ಭಾರತದ ಪ್ರಜೆಗಳಾದ ನಾವು, 1.15ಕ್ಕೆ ರಂಗಪ್ರವೇಶ, ಸಂಜೆ 4.15ಕ್ಕೆ ಪೊಮಲೆ ಕೊಡಗು, ಸಂಜೆ 7.15ಕ್ಕೆ ಕುಬುಸು

■ **ವಿಶ್ವ ಚಿತ್ರಗಳು:** ಬೆಳಗ್ಗೆ 10.30ಕ್ಕೆ ಲೈಲಾಸ್ ಬ್ರದರ್ಸ್, ಮಧ್ಯಾಹ್ನ 1.30ಕ್ಕೆ ಯೊಜಿಂಬೋ, ಸಂಜೆ 4.30ಕ್ಕೆ ಬ್ರೆತ್‌ಲೆಸ್, ಸಂಜೆ 7.30ಕ್ಕೆ ಎಂಗ್ ಅಹ್ಮದ್.

ಡಿಆರ್‌ಸಿ (ಬಿ.ಎಂ.ಹ್ಯಾಬಿಟೇಟ್ ಮಾಲ್)

■ **ಕನ್ನಡ ಚಿತ್ರಗಳು:** ಬೆಳಗ್ಗೆ 10 ಗಂಟೆಗೆ–ಕೌಡಿಕಳಿ, ಮಧ್ಯಾಹ್ನ 1 ಗಂಟೆಗೆ 19.20.21, ಸಂಜೆ 4 ಗಂಟೆಗೆ ರಾಣ, ಸಂಜೆ 7 ಗಂಟೆಗೆ ವೈಲ್ಡ್ ಸ್ಟ್ರಾಬೆರೀಸ್

■ **ಕಿರು ಚಿತ್ರಗಳು:** ಸಂಜೆ 4.15ಕ್ಕೆ ಇವತ್ತೆ ಲಾಸ್ಟ್ ನಾಳೆಯಿಂದ ಎಣ್ಣೆ ಹೊಡೆಯಲ್ಲ, ರಕ್ಷಕಿ, ಸಂಜೆ 7.15ಕ್ಕೆ ಅರುಣೋದಯ, ಕುಬುಸು

■ **ಆಹಾರ ಮೇಳ:** ಬೆಳಗ್ಗೆ 10ರಿಂದ ರಾತ್ರಿಯವರೆಗೆ, ವೈವಿಧ್ಯಮಯ ತಿಂಡಿ–ತಿನಿಸುಗಳ ಮಾರಾಟ, ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ.

■ **ವಸ್ತು ಪ್ರದರ್ಶನ:** ಮಧ್ಯಾಹ್ನ 3 ಗಂಟೆಯಿಂದ ರಾತ್ರಿಯವರೆಗೂ, ಸ್ಥಳ: ದೊಡ್ಡಕೆರೆ ಮೈದಾನ

■ **ಫಲಪುಷ್ಪ ಪ್ರದರ್ಶನ:** ಬೆಳಗ್ಗೆ 10ರಿಂದ ರಾತ್ರಿವರೆಗೂ ಸ್ಥಳ: ಕುಪ್ಪಣ್ಣ ಪಾರ್ಕ್, ನಜರ್‌ಬಾದ್.

■ **ಪಾರಂಪರಿಕ ಸೈಕಲ್ ಸವಾರಿ (ಟ್ರಿಣ್–ಟ್ರಿಣ್) :** ಉದ್ಘಾಟನೆ: ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ಪ್ರವಾಸೋದ್ಯಮ ಸಚಿವ ಹೆಚ್.ಕೆ. ಪಾಟೀಲ್, ಸ್ಥಳ: ಪುರಭವನ ಆವರಣ, ಬೆಳಗ್ಗೆ 7ಕ್ಕೆ

■ **ಯುವ ಕವಿಗೋಷ್ಠಿ, ಪ್ರಾದೇಶಿಕ ಕವಿಗೋಷ್ಠಿ :** ಬೆಳಗ್ಗೆ 11ಕ್ಕೆ ಪ್ರಾದೇಶಿಕ ಕವಿಗೋಷ್ಠಿ ಉದ್ಘಾಟನೆ: ಕವಿ ಎಸ್.ಜಿ. ಸಿದ್ದರಾಮಯ್ಯ, ಅಧ್ಯಕ್ಷತೆ : ಕವಯತ್ರಿ ಶ್ರೀಮತಿ ಚ. ಸರ್ವಮಂಗಳ, ಮುಖ್ಯ ಅತಿಥಿಗಳು : ಸಾಹಿತಿ ಡಾ. ಎಚ್.ಟಿ. ಪೋತೆ, ಯುವ ಕವಿಗೋಷ್ಠಿ, ಅಧ್ಯಕ್ಷತೆ : ಕವಯತ್ರಿ ಡಾ. ವಿನಯಾ ಒಕ್ಕುಂದ, ಶಾಸಕ ಟಿ.ಎಸ್. ಶ್ರೀವತ್ಸ, ಆಶಯ ಭಾಷಣ : ಕವಿ ಡಾ. ಹೆಚ್.ಎಸ್. ಸತ್ಯನಾರಾಯಣ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಮಧ್ಯಾಹ್ನ 2.30ಕ್ಕೆ

■ **ಉರ್ದು ಕವಿಗೋಷ್ಠಿ :** ಉದ್ಘಾಟನೆ: ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸ್ಥಳ: ಕ್ಲಾಸಿಕ್ ಕನ್ವೆನ್ಷನ್ ಹಾಲ್, ಸಂಜೆ 7ಕ್ಕೆ.

■ **ರಾಜ್ಯ ಮಟ್ಟದ ದಸರಾ ಯೋಗಾಸನ ಸ್ಪರ್ಧೆ :** ಉದ್ಘಾಟನೆ: ಶಾಸಕ ಟಿ.ಎಸ್. ಶ್ರೀವತ್ಸ, ಸ್ಥಳ: ಪಿ. ಕಾಳಿಂಗರಾವ್ ಸಭಾಂಗಣ, ವಸ್ತು ಪ್ರದರ್ಶನ ಪ್ರಾಧಿಕಾರ, ಬೆಳಗ್ಗೆ 11ಕ್ಕೆ.

■ **ಅಖಿಲ ಭಾರತ ಹಾಗೂ ರಾಜ್ಯಮಟ್ಟದ ಕರಕುಶಲ ಕಲೆಗಳ ಪ್ರಾತ್ಯಕ್ಷಿಕೆ ಹಾಗೂ ಪ್ರದರ್ಶನ :** ಉದ್ಘಾಟನೆ: ಸಣ್ಣ ಕೈಗಾರಿಕೆ ಸಚಿವ ಶರಣಬಸಪ್ಪ ದರ್ಶನಾಪುರ, ಸ್ಥಳ: ಕಲಾಮಂದಿರ, ಬೆಳಗ್ಗೆ 11ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 19 ಗುರುವಾರ 2023

ಸಂಪುಟ: 44 | ಸಂಚಿಕೆ: 184 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹4

ಸರ್ಕಾರ ಉರುಳಿಸಲು ಬಿಜೆಪಿ ತಂಡ ಪ್ರಯತ್ನ!

● ನನಗೆ ಎಲ್ಲಾ ಗೊತ್ತಿದೆ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್
● ಬಿಜೆಪಿ ಈಗಾಗಲೇ ಮುಳುಗಿರುವ ಹಡಗು: ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್

ಬೆಂಗಳೂರು: ರಾಜ್ಯದ ಆಡಳಿತಾರೂಢ ಕಾಂಗ್ರೆಸ್ ಸರ್ಕಾರವನ್ನು ಉರುಳಿಸಲು ಬಿಜೆಪಿಯ ತಂಡವೊಂದು ಪ್ರಯತ್ನ ನಡೆ ಸುತ್ತಿದೆ. ಅದು ನನಗೆ ಗೊತ್ತಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಬೆಂಗಳೂರಿನ ಸದಾಶಿವನಗರ ನಿವಾಸದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯ ಆ ತಂಡ ಯಾವ ಶಾಸಕರನ್ನು ಭೇಟಿ ಮಾಡುತ್ತಿದೆ ಎಂದು ಆ ಶಾಸಕರೇ ನನಗೆ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮಾಹಿತಿ ನೀಡಿದ್ದಾರೆ ಎಂದರು.

ಆಪರೇಷನ್ ಕಮಲಕ್ಕಾಗಿ ಏನೇನು ಆಫರ್ ಮಾಡುತ್ತಿದ್ದಾರೆ ಎಂಬುದರ ಬಗ್ಗೆಯೂ ಶಾಸಕರು ಹೇಳುತ್ತಿದ್ದಾರೆ. ಈ ಎಲ್ಲಾ ವಿಚಾರವಾಗಿ ನನ್ನಲ್ಲಿ ಪ್ರತಿಯೊಂದರ ಮಾಹಿತಿಯೂ ಇದೆ. ಅಧಿವೇಶನ ನಡೆಯಲಿ, ಬಿಜೆಪಿಯ ತಂಡ ಯಾರನ್ನೆಲ್ಲಾ ಭೇಟಿ ಮಾಡಿ ಮಾತುಕತೆ ನಡೆಸಿದೆ ಎಂದು ಆ ಶಾಸಕರೇ ಹೇಳುತ್ತಾರೆಂದು



ತಿಳಿಸಿದರು. ಬಿಜೆಪಿ ಮತ್ತು ಜನತಾದಳದವರು ಹತಾಶೆಯ ಅಂತಿಮ ಸ್ಥಿತಿ ತಲುಪಿದ್ದಾರೆ. ಅವರಿಗೆ ಡಾಕ್ಟರ್‌ಗಳೇ ಮೇಜರ್ ಆಪರೇಶನ್ ಮಾಡಬೇಕಿದೆ ಎಂದು ವ್ಯಂಗ್ಯವಾಡಿದರು. ಜಗದೀಶ್ ಶೆಟ್ಟರ್ ಹಾಗೂ ರಮೇಶ್ ಜಾರಕಿಹೊಳಿ ಭೇಟಿ ವಿಚಾರ ಕುರಿತು ಮಾತನಾಡಿ, ಹಾಗೆಲ್ಲ ಎಲ್ಲದರಲ್ಲೂ ಅನುಮಾನಪಡಲು ಆಗಲ್ಲ. ಜಗದೀಶ್ ಶೆಟ್ಟರ್ ಅವರು, ತಮ್ಮ ಶಕ್ತಿ ಏನಿದೆ ಎಂದು ತೋರಿಸಿದ್ದಾರೆ. ಈ ಬಗ್ಗೆ ನಾನೇನು ಹೆಚ್ಚು ಮಾತನಾಡುವುದಿಲ್ಲ ಎಂದರು.

ಬಿಜೆಪಿ ಮುಳುಗಿರುವ ಹಡಗು: ಈ ನಡುವೆ ಕೈಗಾರಿಕಾ ಸಚಿವ ಎಂಬಿ ಪಾಟೀಲ್ ಅವರು ಮಾತನಾಡಿ, ಬಿಜೆಪಿ ಮುಳುಗುತ್ತಿರೋ ಹಡಗಲ್ಲ ಈಗಾಗಲೇ ಮುಳುಗಿರುವ ಹಡಗು. ಆ ಪಕ್ಷದಲ್ಲಿ ಏನೂ ಉಳಿದಿಲ್ಲ. ಸಂಪೂರ್ಣ ನಿರ್ನಾಮವಾಗುತ್ತದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಆಪರೇಷನ್ ಕಮಲ ಮಾಡಬೇಕಾದರೆ 65 ಶಾಸಕರು ಬೇಕು. ಬಿಜೆಪಿಗೆ ಅಷ್ಟು ಶಾಸಕರು ಎಲ್ಲಿ ಸಿಗುತ್ತಾರೆ. ಐದು ಶಾಸಕರು ಕೂಡ ಸಿಗಲ್ಲ. ಆಪರೇಷನ್ ಕಮಲ ನಂತರ ಬಿಜೆಪಿಯವರ ಕಥೆ ಏನಾಗಿದೆ ಎಲ್ಲರಿಗೂ ಗೊತ್ತಿದೆ. ಬಿಜೆಪಿ ಮುಳುಗುತ್ತಿರೋ ಹಡಗಲ್ಲ, ಈಗಾಗಲೇ ಮುಳುಗಿ ಹೋಗಿರುವ ಹಡಗಾಗಿದೆ. ಬಿಜೆಪಿಯಲ್ಲಿ ನಾಯಕರಿಲ್ಲ. ಬಿಜೆಪಿಯಲ್ಲಿ ಏನೂ ಉಳಿದಿಲ್ಲ, ಸಂಪೂರ್ಣ ನಿರ್ನಾಮವಾಗುತ್ತದೆ ಎಂದು ವಾಗ್ದಾಳಿ ನಡೆಸಿದರು.

ಮಾಜಿ ಸಿಎಂ ಜಗದೀಶ್ ಶೆಟ್ಟರ್ ಮತ್ತು ಬಿಜೆಪಿ ಶಾಸಕ ರಮೇಶ್ ಜಾರಕಿಹೊಳಿ ಭೇಟಿ ವಿಚಾರ ಕುರಿತು ಮಾತನಾಡಿ, ವೈಯಕ್ತಿಕ ಭೇಟಿಯೋ ಅಥವಾ ರಾಜಕೀಯ ಭೇಟಿನೋ ನನಗೆ ಗೊತ್ತಿಲ್ಲ. ರಮೇಶ್ ಜಾರಕಿಹೊಳಿಗೆ ಕಾಂಗ್ರೆಸ್ ಸೇರುವ ಒಲವು ಇರಬಹುದು. ಬೇರೆ ಪಕ್ಷದ ನಾಯಕರ ಸೇರುವ ಬಗ್ಗೆ ವರಿಷ್ಠರು ನಿರ್ಧರಿಸುತ್ತಾರೆ ಎಂದು ಹೇಳಿದರು.

ಒಂದೇ ಗಂಟೆಯಲ್ಲಿ ಸಾವಿರ ಗೋಲ್ಡ್ ಕಾರ್ಡ್ ಮಾರಾಟ



ಮೈಸೂರು, ಅ.18 (ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಜಂಬೂ ಸವಾರಿ ಮೆರವಣಿಗೆ, ಟಾರ್ಚ್ ಲೈಟ್ ಪರೇಡ್ ಸೇರಿದಂತೆ ಹಲವು ಕಾರ್ಯಕ್ರಮಗಳ ವೀಕ್ಷಣೆಗೆ ಅವಕಾಶವಾಗುವಂತಹ ಗೋಲ್ಡ್ ಕಾರ್ಡ್ ಗಳ ಮಾರಾಟ ಆರಂಭವಾಗುತ್ತಿದ್ದಂತೆ ಕೇವಲ ಒಂದೇ ಗಂಟೆ ಅವಧಿಯಲ್ಲಿ ಸಾವಿರ ಕಾರ್ಡ್ ಮಾರಾಟವಾಗಿವೆ ಎಂದು ಜಿಲ್ಲಾಧಿಕಾರಿ ಡಾ.ಕೆವಿ.ರಾಜೇಂದ್ರ ತಿಳಿಸಿದ್ದಾರೆ. ಬುಧವಾರ ಬೆಳಿಗ್ಗೆ ಆನ್‌ಲೈನ್ ಮೂಲಕ ಖರೀದಿಗೆ ಸಾರ್ವಜನಿಕರಿಗೆ ಅನುವು ಮಾಡಿಕೊಡಲಾಗಿತ್ತು. ಈ ವೇಳೆ ಲಭ್ಯತೆಗನುಗುಣವಾಗಿ ಬಿಡುಗಡೆ ಮಾಡಲಾಗಿದ್ದ ಒಟ್ಟು 1,000 ಗೋಲ್ಡ್ ಕಾರ್ಡ್ ಒಂದು ಗಂಟೆಯಲ್ಲೇ ಮಾರಾಟವಾಗಿವೆ ಎಂದು ಹೇಳಿದ್ದಾರೆ.

ಇದಲ್ಲದೆ ಅರಮನೆ ಆವರಣದೊಳಗಿನ ದಸರಾ ಜಂಬೂ ಸವಾರಿ ಮೆರವಣಿಗೆ ವೀಕ್ಷಣೆಯ 3,000 ರೂಪಾಯಿ ಮುಖ ಬೆಲೆಯ 400 ಟಿಕೆಟ್, 2,000 ರೂಪಾಯಿ ಮುಖ ಬೆಲೆಯ 600 ಟಿಕೆಟ್‌ಗಳು ಕೂಡ ಕೇವಲ ಒಂದು ಗಂಟೆಯಲ್ಲೇ ಮಾರಾಟವಾಗಿವೆ ಎಂದು ತಿಳಿಸಿದ್ದಾರೆ. ಜೊತೆಗೆ ಬನ್ನಿಮಂಟಪ ಮೈದಾನದಲ್ಲಿ ನಡೆಯುವ ಟಾರ್ಚ್‌ಲೈಟ್ ಪರೇಡ್‌ನ 500 ರೂಪಾಯಿ ಮುಖ ಬೆಲೆಯ 1,000 ಟಿಕೆಟ್ ಕೂಡ ಮಾರಾಟವಾಗಿವೆ ಎಂದು ಡಾ.ರಾಜೇಂದ್ರ ಹೇಳಿದ್ದಾರೆ.

ಮೈಸೂರು ವಿವಿ 103ನೇ ವಾರ್ಷಿಕ ಘಟಿಕೋತ್ಸವ

ರಾಜ್ಯಪಾಲರಿಂದ ಡಾ.ಪಿ.ಎಸ್.ಶಂಕರ್, ಕೆ.ಬಿ.ಗಣಪತಿ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ

ಡಿಆರ್‌ಡಿಓ ಮಾಜಿ ಮಹಾನಿರ್ದೇಶಕ ಡಾ.ವಿ.ಕೆ.ಆತ್ರೆ ಅವರಿಂದ ಘಟಿಕೋತ್ಸವ ಭಾಷಣ; ದೇಶದ ಉತ್ಕೃಷ್ಟ ವಿಶ್ವವಿದ್ಯಾನಿಲಯಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯವೂ ಒಂದು: ಪ್ರಶಂಸೆ



ಕ್ರಾಫರ್ಡ್ ಭವನದಲ್ಲಿ ಬುಧವಾರ ನಡೆದ ಮೈಸೂರು ವಿಶ್ವವಿದ್ಯಾನಿಲಯದ 103ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ (ಕುಳಿತಿರುವವರು–ಎಡದಿಂದ) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ಮೆಡಿಸಿನ್ ವಿಭಾಗದ ವಿಶ್ರಾಂತ ಪ್ರಾಧ್ಯಾಪಕರಾದ ನಾಡೋಜ ಡಾ. ಪಿ.ಎಸ್. ಶಂಕರ ಹಾಗೂ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು. (ನಿಂತಿರುವವರು ಎಡದಿಂದ) ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ (ಪರೀಕ್ಷಾಂಗ) ಪ್ರೊ. ಕೆ.ಎಂ. ಮಹದೇವನ್, ಸಮಕುಲಾಧಿಪತಿಗಳೂ ಆದ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ, ಕುಲಾಧಿಪತಿಗಳೂ ಆದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಓ) ಮಾಜಿ ಮಹಾನಿರ್ದೇಶಕ ಡಾ. ವಾಸುದೇವ ಕೆ. ಆತ್ರೆ ಹಾಗೂ ಕುಲಸಚಿವೆ ವಿ.ಆರ್. ಶೈಲಜಾ (ಆಡಳಿತ) ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಅ.18(ಆರ್‌ಕೆ)–ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದ 103ನೇ ವಾರ್ಷಿಕ ಘಟಿಕೋತ್ಸವ ಸಮಾರಂಭ ಬುಧವಾರ(ಅ.18) ಬೆಳಗ್ಗೆ ವಿಶ್ವವಿದ್ಯಾನಿಲಯದ ಕಾರ್ಯಸೌಧ ಕ್ರಾಫರ್ಡ್ ಭವನದಲ್ಲಿ ನಡೆಯಿತು.

ಕರ್ನಾಟಕದ ರಾಜ್ಯಪಾಲರೂ ಆದ ಮೈಸೂರು ವಿಶ್ವವಿದ್ಯಾನಿಲಯದ ಕುಲಾಧಿಪತಿ ಥಾವರ್‌ಚಂದ್ ಗೆಹ್ಲೋಟ್ ಅವರು ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಮೆಡಿಸಿನ್ ವಿಭಾಗದ ವಿಶ್ರಾಂತ ಪ್ರಾಧ್ಯಾಪಕರಾದ ನಾಡೋಜ ಡಾ.ಪಿ.ಎಸ್.ಶಂಕರ್ ಹಾಗೂ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರೂ ಆದ ಹಿರಿಯ ಪತ್ರಿಕೋದ್ಯಮಿ ಕೆ.ಬಿ.ಗಣಪತಿ ಅವರಿಗೆ ಗೌರವ ಡಾಕ್ಟರೇಟ್ ಪದವಿಗಳನ್ನು ಪ್ರದಾನ ಮಾಡಿದರು.

▶ 7ನೇ ಪುಟಕ್ಕೆ

ಪ್ರಕೃತಿಯೊಂದಿಗಿನ ಸೌಹಾರ್ದತೆಯಿಂದ ನಾವು ದೂರ ಸರಿದಿದ್ದೇವೆ...

■ ಮೈಸೂರು ವಿವಿ ಘಟಿಕೋತ್ಸವದಲ್ಲಿ ಡಿಆರ್‌ಡಿಓ ಮಾಜಿ ಮಹಾನಿರ್ದೇಶಕ ಡಾ.ವಾಸುದೇವ ಕೆ.ಆತ್ರೆ ವಿಷಾದ ■ ವಿಜ್ಞಾನ–ತಂತ್ರಜ್ಞಾನದಿಂದ ಉದ್ಭವಿಸಿರುವ ಸಮಸ್ಯೆಗೆ ಅದರಿಂದಲೇ ಪರಿಹಾರ ಕಂಡುಕೊಳ್ಳಬೇಕಿದೆ

ಮೈಸೂರು, ಅ.18–ಭೂಮಿಗೆ ಸೀಮಿತವಾದ ಸಂಪನ್ಮೂಲವನ್ನು ಅತಿಯಾಗಿ ಹಾಗೂ ಅವಿವೇಕದಿಂದ ಬಳಸಿದ ಪರಿಣಾಮ ಉಂಟಾಗಿರುವ ಪರಿಸರ ನಾಶ ಹಾಗೂ ಮಾನವ ಕುಲಕೋಟಿ ಎದುರಿಸುತ್ತಿರುವ ಸವಾಲುಗಳನ್ನು ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಸರಿಪಡಿಸಬಹುದು ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಓ) ಮಾಜಿ ಮಹಾ ನಿರ್ದೇಶಕರಾದ ಪದ್ಮ ವಿಭೂಷಣ ಡಾ.ವಾಸುದೇವ ಕೆ.ಆತ್ರೆ ಅಭಿಪ್ರಾಯಪಟ್ಟಿದ್ದಾರೆ. ಮೈಸೂರಿನ ಕ್ರಾಫರ್ಡ್ ಭವನದಲ್ಲಿ ಬುಧವಾರ ನಡೆದ ಮೈಸೂರು ವಿಶ್ವವಿದ್ಯಾನಿಲಯದ 103ನೇ ಘಟಿಕೋತ್ಸವ ಸಮಾರಂಭದಲ್ಲಿ, ಘಟಿಕೋತ್ಸವ ಭಾಷಣ ಮಾಡಿದ ಅವರು, ವಿಜ್ಞಾನ ಮತ್ತು ತಂತ್ರಜ್ಞಾನ ಬಳಸಿಕೊಂಡು ಪರಿಸರ ಸಮತೋಲನ ಕಾಪಾಡುವ ಮೂಲಕ ಮಾನವ ಕುಲಕೋಟಿಗೆ ಎದುರಾಗಿರುವ ಸವಾಲನ್ನು ಪರಿಹರಿಸಬೇಕು ಎಂದರು. ವಿಜ್ಞಾನ ಮತ್ತು ತಂತ್ರಜ್ಞಾನ ವಿಕಾಸವಾದಂತೆ ಭೂಮಿಗೆ ಸೀಮಿತವಾದ ಸಂಪನ್ಮೂಲ ವನ್ನು ನಾವು ಅತಿಯಾಗಿ ಹಾಗೂ ಅವಿವೇಕದಿಂದ ಬಳಸಿ ಪ್ರಕೃತಿಯೊಂದಿಗಿನ ಸೌಹಾರ್ದತೆಯಿಂದ ದೂರ ಸರಿದಿದ್ದೇವೆ. ಕೆಲವು ಸಮಸ್ಯೆಗಳನ್ನು ವಿಜ್ಞಾನ ಮತ್ತು ತಂತ್ರಜ್ಞಾನವೇ ಸೃಷ್ಟಿಸಿದೆ ಎಂದ ಅವರು, ಇದನ್ನು ಸರಿಪಡಿಸಲು ನಾವು ನಮ್ಮಲ್ಲಿ ಲಭ್ಯವಿರುವ ಸಲಕರಣೆಗಳ ಮೂಲಕ ಅದೇ ವಿಜ್ಞಾನ ತಂತ್ರಜ್ಞಾನವನ್ನು ಬಳಸಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದರು. ಈ ಜಗತ್ತು ಇರುವುದು ಮಾನವನಿಗಾಗಿಯೇ ಹೊರತು, ಇತರ ಜೀವಿಗಳಿಗಲ್ಲ ಎಂಬ ಮನೋಭಾವವೇ ಭೂಮಿಯ ಮೇಲೆ ಅಗಾಧವಾದ ದುಷ್ಪರಿಣಾಮ ವನ್ನು ಬೀರಿದೆ. ಜಾಗತಿಕ ತಾಪಮಾನ ಮತ್ತು ಹವಾಮಾನ ಬದಲಾವಣೆ ಗಳಿಂದ ಪ್ರಕೃತಿ ವಿಕೋಪ ಹೆಚ್ಚಿನ ರೀತಿಯಲ್ಲಿ ತಲೆದೋರುತ್ತಿದೆ. ಸಮುದ್ರ ಮಟ್ಟ ಒಂದೇ ಸಮನೆ ಏರುತ್ತಿದೆ. ವಾಯು ಮಂಡಲದಲ್ಲಿ ಸೂಕ್ಷ್ಮ

▶ 10ನೇ ಪುಟಕ್ಕೆ

ಇಂದು ಜೆಡಿಎಸ್ ಮಹತ್ವದ ಸಭೆ

ಪಕ್ಷ ವಿರೋಧಿ ಚಟುವಟಿಕೆ ಹಿನ್ನೆಲೆಯಲ್ಲಿ ಸಿ.ಎಂ. ಇಬ್ರಾಹಿಂ ಉಚ್ಚಾಟನೆ ಸಾಧ್ಯತೆ

ಬೆಂಗಳೂರು, ಅ.18(ಕೆಎಂಶಿ)– ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿರುವ ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರನ್ನು ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿ, ಪಕ್ಷದಿಂದ ಉಚ್ಚಾಟಿಸಲು ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರು ತೀರ್ಮಾನಿಸಿದ್ದಾರೆ. ವಜಾ ಇಲ್ಲವೇ ಉಚ್ಚಾಟನೆ ಮಾಡಲು ನಾಳೆ ತುರ್ತು ಕೋರ್ ಕಮಿಟಿ ಹಾಗೂ ಪಕ್ಷದ ಶಾಸಕರ ಸಭೆಯನ್ನು ಕರೆದಿದ್ದಾರೆ.

ಶಾಸಕಾಂಗ ಪಕ್ಷದ ನಾಯಕ, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಇಂದು ರಾಷ್ಟ್ರೀಯ ಅಧ್ಯಕ್ಷರನ್ನು ಭೇಟಿಯಾಗಿ ಪಕ್ಷ ಕೈಗೊಂಡ ತೀರ್ಮಾನದ ವಿರುದ್ಧವಾಗಿ ರಾಜ್ಯಾಧ್ಯಕ್ಷರು ನಡೆದುಕೊಳ್ಳುತ್ತಿರುವ ಬಗ್ಗೆ ಪೂರ್ಣ ಮಾಹಿತಿ ನೀಡಿ ತಮ್ಮನ್ನೇ ಪಕ್ಷದಿಂದ ಉಚ್ಚಾಟಿಸಲು ಮುಂದಾಗಿರುವ ಬಗ್ಗೆಯೂ ವಿವರಣೆ ನೀಡಿದ್ದಾರೆ. ಆ ನಂತರ ಕುಮಾರಸ್ವಾಮಿ ಅವರು ಪಕ್ಷದ ಹಿರಿಯ ನಾಯಕರೊಂದಿಗೆ ಸಮಾಲೋಚನೆ ನಡೆಸಿದರು. ಇದಾದ ನಂತರ ದೇವೇಗೌಡರು ನಾಳೆ ತುರ್ತಾಗಿ ಸಭೆಗಳನ್ನು ನಡೆಸಿ ಕಾನೂನಾತ್ಮಕವಾಗಿ ಶಿಸ್ತು ಕ್ರಮ ಕೈಗೊಳ್ಳಲು ತೀರ್ಮಾನ ಮಾಡಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ದಸರಾ ಮೆಗಾ ಮನರಂಜನೆ 'ಯುವ ದಸರಾ' ಆರಂಭ

ಸ್ಯಾಂಡಲ್‌ವುಡ್ ತಾರೆಯರ ಜಾತ್ರೆಯಲ್ಲಿ ಯುವ ಚೇತನರಿಗೆ ಮಸ್ತ್ ಮಜಾ...



ಶಿವರಾಜ್‌ಕುಮಾರ್

ಮೈಸೂರು, ಅ.18(ಎಂಕೆ)– ವಿಶ್ವ ವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಮೇಗಾ ಇವೆಂಟ್ ಖ್ಯಾತಿಯ 'ಯುವ ದಸರಾ' ನೃತ್ಯ–ಸಂಗೀತ ವೈಭವಕ್ಕೆ ಬುಧವಾರ ವಿದ್ಯುಕ್ತ ಚಾಲನೆ ದೊರೆಯಿತು.

ಕರುನಾಡ ಚಕ್ರವರ್ತಿ, ಹ್ಯಾಟ್ರಿಕ್ ಹೀರೋ ಡಾ.ಶಿವರಾಜ್‌ಕುಮಾರ್ ಖಡಕ್ ಡೈಲಾಗ್, ಖ್ಯಾತ ನಟರಾದ ಶರಣ್ ಗಾಯನ, ಅಜಯ್‌ರಾವ್ ಅಭಿನಂದನಾ ನುಡಿ', ಸಾಧುಕೋಕಿಲಾ ಹಾಸ್ಯ ಚಟಾಕಿ, ಸರಿಗಮಪ ಖ್ಯಾತಿಯ ಹಾಡುಗಾರ್ತಿಯರ ಸಂಗೀತದ ಇಂಪು, ಡ್ಯಾನ್ಸ್ ಮಾಸ್ಟರ್‌ಗಳ ಅಮೋಘ ನೃತ್ಯದೊಂದಿಗೆ ಯುವ ದಸರಾ ಮೇಗಾ ಇವೆಂಟ್ ಮೊದಲ ದಿನವೇ ನೆರೆದಿದ್ದ ಯುವ ಸಾಗರದ ಮನದಾಳಕ್ಕಿಳಿಯಿತು.

ಹಾಸ್ಯನಟ ಸಾಧುಕೋಕಿಲಾ ನೇತೃತ್ವದ ಸಂಗೀತ ಕಲಾಪ್ರಕಾರಗಳ ಮ್ಯೂಸಿಕಲ್ ನೈಟ್ ರಂಜನೆಯೊಂದಿಗೆ ಆರಂಭಗೊಂಡ ಯುವ ದಸರಾ ವರ್ಣಮಯ ವೇದಿಕೆಯಲ್ಲಿ ಸಿಡಿಲಬ್ಬರದ ಧ್ವನಿಯ ಅಲೆಗಳು ಕಿವಿಗೆ ಅಪ್ಪಳಿಸುತ್ತಿದ್ದಂತೆ ಕುಣಿದು ಕುಪ್ಪಳಿಸಿದ ಯುವ ಸಮೂಹ ಶಿಳ್ಳೆ–ಚಪ್ಪಾಳೆಗಳ ಮೂಲಕ ಸಂಗೀತ ರಸದೌತಣ ಸವಿದರು. ಕೀ ಬೋರ್ಡ್ ವಾದನದಲ್ಲಿ ವೇಣುಗೋಪಾಲ್ ಮತ್ತು ಬಸ್ಸು, ಗಿಟಾರ್‌ನಲ್ಲಿ ಕರಣ್, ಫ್ಲೂಟ್‌ನಲ್ಲಿ ಸಂದೀಪ್, ವಯೋಲಿನ್‌ನಲ್ಲಿ ರಂಜುನ್, ಡ್ರಮ್ಸ್‌ನಲ್ಲಿ ಅಮೋಘ್, ರಿದಂ ಪ್ಯಾಡ್‌ನಲ್ಲಿ ಅಭಿ, ಡೋಲಕ್‌ನಲ್ಲಿ ಪ್ರವೀಣ್, ತಬಲದಲ್ಲಿ ಜಯಚಂದ್ರ ಹಾಗೂ ಡೊಳ್ಳು ವಾದನದಲ್ಲಿ ಸುಮುಖ್ ಸಂಗೀತ ಅಲೆಗಳನ್ನು ಸೃಷ್ಟಿಸಿದರು.

ಬಳಿಕ ಸರಿಗಮಪ ಖ್ಯಾತಿಯ ಐಶ್ವರ್ಯ ರಂಗರಾಜನ್ 'ಏಕ್ ಲವ್ ಯಾ' ಚಿತ್ರದ 'ಮೀಟ್ ಮಾಡೋಣ ಇಲ್ಲ ಡೇಟ್ ಮಾಡೋಣ' ಹಾಡನ್ನು ಹಾಡಿ ರಂಜಿಸಿದರೆ, ಗಾಯಕಿ ದಿವ್ಯಾ ರಾಮಚಂದ್ರನ್ 'ಕೆಜಿಎಫ್' ಚಿತ್ರದ 'ಜೋಕೆ ನಾನು ಬಳ್ಳಿಯ ಮಿಂಚು' ಎಂದು ಹಾಡುತ್ತಲೇ ವೇದಿಕೆಯಲ್ಲಿ ಮಿಂಚು ಹರಿಸಿದರು. ನಂತರ ಗಾಯಕ ವ್ಯಾಸರಾಜ್ ಸೋಸಲೆ 'ಚಕ್ರವರ್ತಿ' ಚಿತ್ರ 'ನೋಡೊ ಕತ್ತು ಎತ್ತಿ ಬಂದ ಚಕ್ರವರ್ತಿ' ಟೈಟಲ್ ಟ್ರ್ಯಾಕ್ ಹಾಡಿದರೆ, ನೃತ್ಯ ಕಲಾವಿದ ಕಿಶನ್ ಬಿಳಗಲಿ ಮತ್ತು ತಂಡ 'ಕಾಂತಾರ' ಚಿತ್ರದ 'ಸಿಂಗಾರ ಸಿರಿಯೇ' ಸೇರಿದಂತೆ ಮೂರ್‍ನಾಕು ಹಾಡುಗಳಿಗೆ ಅಮೋಘ ನೃತ್ಯ ಪ್ರದರ್ಶನ ನೀಡಿದರೆ, ನಟಿ ರಾಧಿಕಾ ನಾರಾಯಣ್ ಮತ್ತು ತಂಡ 'ಪುಷ್ಪಕ ವಿಮಾನ' ಚಿತ್ರದ 'ಜಿಲ್ಕಾ ಜಿಲ್ಕಾರೆ' ಹಾಡಿಗೆ ಮನಮೋಹನವಾಗಿ ನೃತ್ಯ ಮಾಡುವ ಮೂಲಕ ಎಲ್ಲರ ಮನಸ್ಸಿಗೆ ಮುದ ನೀಡಿದರು.

ಶರಣ್ ಗಾನಮೋಡಿ: 'ಅಧ್ಯಕ್ಷ.. ಅಧ್ಯಕ್ಷ..' ಹಾಡಿನೊಂದಿಗೆ ವೇದಿಕೆಗೆ ಆಗಮಿಸಿದ ನಟ ಶರಣ್, ಗಾಯಕಿ ದಿವ್ಯಾ ರಾಮಚಂದ್ರನ್ ಜೊತೆಗೂಡಿ

▶ 10ನೇ ಪುಟಕ್ಕೆ



ಧನ್ಯರಾಮ್‌ಕುಮಾರ್

ಯುವ ಶಕ್ತಿ ದೇಶದ ಶಕ್ತಿ



ಯುವ ದಸರಾ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮಾತನಾಡಿ, ಯುವ ಶಕ್ತಿ ದೇಶದ ಶಕ್ತಿ, ಯುವಕರ ಭವಿಷ್ಯ ದೇಶದ ಭವಿಷ್ಯ, ಯುವ ದಸರಾ ಮೂಲಕ ಉಲ್ಲಾಸ, ಉತ್ಸಾಹ ನಿಮ್ಮದಾಗಲೀ, ದಸರಾ ಸಂತೋಷ ಉಂಟುಮಾಡಲಿ, ಬಹುತ್ವದ ನಿರ್ಮಾಣಕ್ಕೆ ಪ್ರೇರಣೆಯಾಗಲೀ ಎಂದು ಕರೆ ನೀಡಿದರು. ಸಚಿವ ಮಧುಬಂಗಾರಪ್ಪ ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ರೂಪ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಎಸ್‌ಪಿ ಸೀಮಾ ಲಾಟ್ಕರ್ ಮತ್ತಿತರರು ಉಪಸ್ಥಿತರಿದ್ದರು. ನಟ ರಿಷಿ ನಿರೂಪಣೆ ನಡೆಸಿದರು.



ಐಶ್ವರ್ಯರಂಗರಾಜನ್



ನಕ್ಕರೆ ಅದೇ ಸ್ವರ್ಗ

ಟೀಚರ್ : "ಏಯ್ ನಾನು ಪಾಠ ಮಾಡ್ತಾ ಇರಬೇಕಾದ್ರೆ ನೀನು ಯಾಕೆ ಮಾತಾಡ್ತಾ ಇದೀಯಾ?"

ವಿದ್ಯಾರ್ಥಿ : "ಇಲ್ಲ ಟೀಚರ್, ನಾನು ಮಾತಾಡ್ತಾ ಇರಬೇಕಾದ್ರೆ ನೀವೇ ಪಾಠ ಮಾಡ್ತಾ ಇರೋದು!"

ಮೈಸೂರು ಮಿತ್ರ

ಗುರುವಾರ, 19 ಅಕ್ಟೋಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಿಮ್ಮ ಜ್ಞಾನದ ಮೂಲಕ ಬೇರೆಯವರೂ ತಮ್ಮ ದೀಪಗಳನ್ನು ಹೊತ್ತಿಸಿಕೊಳ್ಳಲು ಬಿಡಿ – ಕ್ಷತ್ರಚೂಡಾಮಣಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತುಪ್ಪ ತಿಂದ ಮಾತಿಗಷ್ಟು ತಪ್ಪು ಮಾತು ಬಂತು

ನಿಮ್ಮ ಪತ್ರಗಳು

ಕೆಬಿಜಿ, ಜಾವಗಲ್‌ಗೆ ಸಂದ ಗೌರವ ಡಾಕ್ಟರೇಟ್

ಮಾನ್ಯರೆ,



ಸದಾ ಹಸನ್ಮುಖಿ, ತಿಳಿ ಹಾಸ್ಯದ ಮಾತಿನಲ್ಲಿ ನಿಖರತೆ, ಶಿಸ್ತಿನ ಸಿಪಾಯಿ, ಸೌಂದರ್ಯ ಪ್ರಜ್ಞೆ ವ್ಯಕ್ತಿತ್ವ ಉಳ್ಳ, ಪತ್ರಿಕಾ ರಂಗದ ಮೌಲ್ಯವನ್ನು ಎತ್ತಿ ಹಿಡಿಯುತ್ತಿರುವ, ಸಾಮಾಜಿಕ ಕಳಕಳಿಯುಳ್ಳ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಕೆ.ಬಿ. ಗಣಪತಿ ಅವರಿಗೆ, ನಮ್ಮ ನಾಡ ದೊರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸ್ಥಾಪಿಸಿದ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯ ಕೊಡ ಮಾಡುವ ಗೌರವ ಡಾಕ್ಟರೇಟ್ ಪದವಿಗೆ ಭಾಜನ ರಾಗಿರುವುದು ತುಂಬಾ ಶ್ಲಾಘನೀಯ. ಕೆ. ಬಿ. ಗಣಪತಿ ಅವರ 'ಅಬ್ರಕದಬ್ರ' ಹಾಗೂ 'ಭೂಮಂತ್ರ' ಅಂಕಣದ ಲೇಖನಗಳು ಪ್ರತಿಯೊಬ್ಬ ಓದುಗರ ಮನವನ್ನು ಸೆಳೆಯುತ್ತವೆ. ನಾನು ವಿದ್ಯಾರ್ಥಿ ಜೀವನದಿಂದಲೂ ಈ ಎರಡು ಪತ್ರಿಕೆಗಳನ್ನು ಓದುವ ಪ್ರವೃತ್ತಿ ಬೆಳೆಸಿಕೊಂಡಿದ್ದೇನೆ. ಇದುವರೆಗೂ ಕೆಬಿಜಿ ಅವರು ಯಾವುದೇ ಹಗರಣಗಳಿಗೆ ಸಿಲುಕದೆ ತಮ್ಮ ಪತ್ರಿಕಾ ರಂಗದ ಬದುಕಿನ ಮೌಲ್ಯವನ್ನು ಕಾಪಾಡಿಕೊಂಡು ಬಂದಿರುವುದು ಮೆಚ್ಚುವ ಸಂಗತಿ ಹಾಗೂ ಡಾಕ್ಟರೇಟ್ ಪದವಿಗೆ ಭಾಜನರಾಗಿರುವುದಕ್ಕೆ ಅಭಿನಂದನಾರ್ಹರು.



ಇದೇ ರೀತಿ ಭಾರತೀಯ ಕ್ರಿಕೆಟ್ ಜಗತ್ತು ಕಂಡ ಅತ್ಯಂತ ಮಾರಕ ಬೌಲಿಂಗ್ ದಾಳಿಯ ಛಲದಂಕಮಲ್ಲ, 'ಜಾವಗಲ್ ಎಕ್ಸ್‌ಪ್ರೆಸ್' ಎಂದೇ ಖ್ಯಾತಿ ಗಳಿಸಿರುವ ಶ್ರೀನಾಥ್ ಅವರಿಗೆ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯ ಕೊಡಮಾಡುವ ಗೌರವ ಡಾಕ್ಟರೇಟ್ ಪದವಿಗೆ ಭಾಜನರಾಗಿರುವುದು ತುಂಬಾ ಸಂತಸದ ಸಂಗತಿ. ನಾಲ್ಕು ವಿಶ್ವಕಪ್‌ನಲ್ಲಿ(1992 ರಿಂದ 2003) ಭಾರತ ಕ್ರಿಕೆಟ್ ತಂಡದ ಅತ್ಯಂತ ಯಶಸ್ವಿ ಬೌಲರ್ ಆಗಿ ಕಾರ್ಯ ನಿರ್ವಹಿಸಿ ಇಂದಿಗೂ ಕ್ರಿಕೆಟ್ ಪ್ರೇಮಿಗಳ ಮನಸ್ಸಿನಲ್ಲಿ ನೆಲೆಯೂರಿದ್ದಾರೆ. ಅವರ ಶಿಸ್ತುಬದ್ಧ ಬೌಲಿಂಗ್‌ಗೆ ಎದುರಾಳಿ ಬ್ಯಾಟ್ಸ್‌ಮನ್‌ಗಳು ಕಂಗೆಡುತ್ತಿದ್ದುದರಲ್ಲಿ ಅನುಮಾನವೇ ಇಲ್ಲ. ಇಂತಹ ಕ್ರೀಡಾ ಪ್ರತಿಭೆಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿರುವುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿ. ಗೌರವ ಡಾಕ್ಟರೇಟ್ ಪಡೆದ ನಿಮಗೆ ಅಭಿನಂದನೆಗಳು.

–ಬೆಸಗರಹಳ್ಳಿ ರವಿ ಪ್ರಸಾದ್, ಕೆ.ಸಿ. ನಗರ, ಮೈಸೂರು.

ಸಾಧಕನಿಗೆ ಡಾಕ್ಟರೇಟ್ ಸ್ವಾಗತಾರ್ಹ

ಮಾನ್ಯರೆ,

ನಮ್ಮ ದೈನಂದಿನ ಜೀವನದಲ್ಲಿ ದಿನಪತ್ರಿಕೆ ನಮಗೆ ಬಹಳ ಉಪಯುಕ್ತ. ಪ್ರಪಂಚದ ಹಾಗೂ ದೇಶದ, ರಾಜ್ಯದ ಮೂಲೆ ಮೂಲೆಗಳ ವಿಷಯವನ್ನು ತಿಳಿಸುವುದು ಪತ್ರಿಕಾ ಮಾಧ್ಯಮ. ಸಾಮಾಜಿಕ ನ್ಯಾಯ, ಸಮಾನ ಚಿಂತನೆ, ಆವಿಷ್ಕಾರಗಳ ಆಯಾಮ, ರಾಜಕೀಯ ಬೆಳವಣಿಗೆ, ವ್ಯಕ್ತಿಗಳ ಪರಿಚಯ ಹೀಗೆ ಅನೇಕ ವಿಷಯಗಳನ್ನು ನಮ್ಮಂಥವರಿಗೆ ಪರಿಚಯಿಸಿ ಪ್ರಕಟಿಸುವ ಹಳೇ ಮೈಸೂರು ಪ್ರಾಂತ್ಯದ ಸ್ಥಳೀಯ ಪತ್ರಿಕೆಗಳಲ್ಲಿ 'ಮೈಸೂರು ಮಿತ್ರ' ಪತ್ರಿಕೆ ಕೂಡ ಒಂದು. 'ಮೈಸೂರು ಮಿತ್ರ' ಪತ್ರಿಕೆ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರಿಗೆ ಮೈಸೂರು ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ಪ್ರಶಸ್ತಿ ಪ್ರದಾನ ಮಾಡಿರುವುದು ಸ್ವಾಗತಾರ್ಹ.

–ಪಿ.ಸಿ. ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು

ಮೈಸೂರು ದಸರಾ ಚೆಲ್ಲಿದೆ ನಗೆಯ ಪನ್ನೀರಾ

ಮಾನ್ಯರೆ,

ಮೈಸೂರು ದಸರಾ ಎಷ್ಟೊಂದು ಸುಂದರ, ಚೆಲ್ಲಿದೆ ನಗೆಯ ಪನ್ನೀರಾ, ಗೀತೆಯು ಆರ್.ಎನ್.ಜಯಗೋಪಾಲ್ ಅವರ ಸಾಹಿತ್ಯದಲ್ಲಿ ಮೂಡಿಬಂದ ಗೀತೆ, ಇವರ ಸಾಹಿತ್ಯದ ಗೀತೆ ಹಾಗೂ ದಸರಾ ಆಚರಣೆ, ಎರಡೂ ಭೂಮಿ ಇರುವವರೆಗೂ ಶಾಶ್ವತ. ದಸರಾ ಬಂತೆಂದರೆ ಕನ್ನಡ ನಾಡಿನಾದ್ಯಂತ ಈ ಗೀತೆ ಮೊಳಗುವುದು. ದಸರಾ ಹಬ್ಬದ ಅರ್ಥವನ್ನು ಬಿಂಬಿಸುವ ಗೀತೆಯಲ್ಲಿ ಧರ್ಮವು ಅಧರ್ಮಗಳನ್ನು ಸೋಲಿಸಿ ಕನ್ನಡ ಜನತೆಯ ಮನೆ ಮನೆ ಬೆಳಗಿ ಮಂಗಳವನ್ನು ಉಂಟುಮಾಡುವ ಶುಭರಾತ್ರಿ, ಮಕ್ಕಳು ನಾವು ಒಂದಾಗಿ ಮಹಾನವಮಿಯಂದು ಆಯುಧ ಪೂಜೆಯ ಮೂಲಕ ತಾಯಿಯನ್ನು ಕೊಂಡಾಡಿ ವರವನ್ನು ಬೇಡುವ ಶುಭರಾತ್ರಿ, ತಾಯಿಯ ಹೆಸರನ್ನು ಹಾಡಿ ಶಸ್ತ್ರಗಳನ್ನು ಹೂಡಿ ಶತ್ರುಗಳನ್ನು ಅಳಿಸಿ, ಜೊತೆಯಾಗಿ ಹೆಗಲಿಗೆ ಹೆಗಲು ಕೊಟ್ಟು ದುಡಿದು ಸಮಾಜದಲ್ಲಿ ತಾಂಡವ ವಾಡುವ ಬಡತನವನ್ನು ನಿರ್ಮೂಲ ಮಾಡೋಣ ಎಂಬುದು, ಎಂದೋ ಬರೆದ ಸಾಹಿತ್ಯವು ಇಂದಿಗೂ ನೂರಕ್ಕೆ ನೂರರಷ್ಟು ಒಪ್ಪಿತವಾಗಿದೆ.

ಶತ್ರುಗಳೇ ತುಂಬಿರುವ ಸಮಾಜದಲ್ಲಿ ಜಾತಿಧರ್ಮಗಳ ಭೇದಭಾವದಿಂದ ಒಂದಾಗಿ ಶಾಂತಿ ಮೂಡುವ ಮಾತೆಲ್ಲಿ? ರಾಜಕಾರಣಕ್ಕಾಗಿ ಅಶಾಂತಿ ಹೆಚ್ಚುತ್ತಲೇ ಇದೆ. ಬಡವರು ಬಡವರಾಗಿಯೇ ಇದ್ದಾರೆ. ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಿದ್ದಾರೆ. ಚುನಾವಣೆಯಿಂದ ಚುನಾವಣೆಗೆ ಮತವನ್ನು ಕೊಂಡುಕೊಳ್ಳುವ ಬಿಡ್ ದರ ಹೆಚ್ಚುತ್ತಲೇ ಇದೆ. ಹಾಕಿದ ಬಂಡವಾಳವನ್ನು ಲಾಭಸಹಿತ ವಾಪಸ್ಸು ಪಡೆಯಲು ಒಂದಾಗಿ ದುಡಿಯುತ್ತಾರೆ. ಆಡಳಿತದಲ್ಲಿ ಯಾರಿದ್ದರೂ ಅಷ್ಟೇ! ನಡೆಯುವುದು ನಡೆಯುತ್ತಲೇ ಇರುತ್ತದೆ. ಮಹಾನವಮಿ ಆಯುಧ ಪೂಜೆಯಂದು ಮಹಾತಾಯಿಯಲ್ಲಿ ಬೇಡೋಣ; 'ಸಮಾಜಘಾತುಕರ ಮನಸ್ಥಿತಿಯನ್ನು ಕೊಂದು ಅಧರ್ಮವನ್ನು ಸೋಲಿಸಿ ಧರ್ಮವನ್ನು ಸ್ಥಾಪಿಸು ತಾಯೇ' ಎಂದು, ಆಗ ಮಾತ್ರ ಕನ್ನಡ ಜನತೆಯ ಮೊಗದಲ್ಲಿ ಚೆಲ್ಲುವುದು ನಗೆಯ ಪನ್ನೀರು!

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ವಿದ್ಯುತ್ ಕೊರತೆಗೆ ಜನತೆ ಸಹಕರಿಸಲಿ

ಮಾನ್ಯರೆ,

ಮಳೆಯೂ ಇಲ್ಲ, ಜಲಾಶಯಗಳೂ ಬರಿದೋ ಬರಿದು... ಇನ್ನು ವಿದ್ಯುತ್ ತಯಾರಿಕೆ ಎಲ್ಲಿಂದ ಬಂದಿತು? ಉಚಿತ ವಿದ್ಯುತ್ ಬಳಸುವ ಜನರು ತಮ್ಮ ಮನೆಯ ವಿದ್ಯುತ್ ಬಳಕೆಯನ್ನು ತಾವೇ ಕಡಿಮೆ ಮಾಡುವ ಮೂಲಕ ವಿದ್ಯುತ್ ಕೊರತೆಗೆ ಪರಿಹಾರ ಕಂಡುಕೊಳ್ಳಬೇಕಾಗಿದೆ. ಜನರಿಗಾಗಿ ಸರಕಾರ ಇಷ್ಟೆಲ್ಲಾ ಮಾಡು ತ್ತಿರುವಾಗ ಅಗತ್ಯವಾದಷ್ಟೇ ವಿದ್ಯುತ್ತನ್ನು ಬಳಸಿ ವಿದ್ಯುತ್ ಉಳಿಸುವ ಕ್ರಮಕ್ಕೆ ಜನತೆ ಮುಂದಾಗುವ ಮೂಲಕ ಸರಕಾರದ ಸಂಕಷ್ಟದಲ್ಲಿ ತಾವೂ ಪಾಲುದಾರ ರಾಗಬೇಕು. ಉಚಿತ ವಿದ್ಯುತ್ತನ್ನು ಸರಕಾರ ಎಲ್ಲಿಂದ ಪೂರೈಸಬೇಕು?

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು.

ಸಂಗೀತ ವಿವಿಯ ಐದು, ಆರನೇ ಘಟಿಕೋತ್ಸವ ಸಂಭ್ರಮ

ನಾಲ್ವರು ಕಲಾಸಾಧಕರಿಗೆ ಗೌರವ ಡಾಕ್ಟರೇಟ್; ಆರು ಮಂದಿಗೆ ಡಿ.ಲಿಟ್; 19 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಸೇರಿದಂತೆ 84 ಮಂದಿಗೆ ವಿವಿಧ ಪದವಿ ಪ್ರದಾನ



ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಸಂಗೀತ ಕ್ಷೇತ್ರದ ಸಾಧಕರಾದ ವಿದುಷಿ ಡಿ.ಶಶಿಕಲಾ, ಪಂಡಿತ್ ವಿನಾಯಕ ತೊರವಿ, ಪ್ರೊ.ಎಸ್.ಸಿ.ಶರ್ಮಾ ಹಾಗೂ ಪಂಡಿತ್ ಶ್ರೀಪಾದ ಹೆಗಡೆ ಕಂಪ್ಲಿ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿ, ಅಭಿನಂದಿಸಲಾಯಿತು. ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ, ಕುಲಸಚಿವೆ ವಿ.ಆರ್.ಶೈಲಜಾ ಚಿತ್ರದಲ್ಲಿದ್ದಾರೆ.



ಸಂಗೀತ ವಿವಿಯಲ್ಲಿ ಚಿನ್ನದ ಪದಕ ಪಡೆದ ಶ್ರೀಷಾ ಜಿ.ಭಟ್(7 ಪದಕ), ವಿಘ್ನೇಶ್ ದಾಮೋದರ ಭಾಗವತ್(4), ದಿವ್ಯಾ ಕೇಶವನ್(4), ಸಿಂಧು ವಿ. ಆಚಾರ್ಯ(3) ಹಾಗೂ ವಿ.ಸ್ನೇಹಾ(3).

ಮೈಸೂರು,ಅ.18(ಎಸ್‌ಬಿಡಿ)–ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ(ಸಂಗೀತ ವಿವಿ)ದ 5 ಮತ್ತು 6ನೇ ಘಟಿಕೋತ್ಸವ ಬುಧವಾರ ನೆರವೇರಿತು.

ರಾಜ್ಯಪಾಲರು, ವಿವಿಯ ಕುಲಾಧಿಪತಿಗಳೂ ಆದ ಥಾವರ್‌ಚಂದ್ ಗೆಹ್ಲೋಟ್ ಅವರ ಅಧ್ಯಕ್ಷತೆ, ಸಹ ಕುಲಾಧಿಪತಿಗಳೂ ಆದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಉಪಸ್ಥಿತಿಯಲ್ಲಿ ಮಾನಸ ಗಂಗೋತ್ರಿ ವಿಜ್ಞಾನಭವನದಲ್ಲಿ ನಡೆದ ಘಟಿಕೋತ್ಸವದಲ್ಲಿ ನಾಲ್ವರು ಕಲಾಸಾಧಕರಿಗೆ ಗೌರವ ಡಾಕ್ಟರೇಟ್, ಆರು ಮಂದಿಗೆ ಡಿ.ಲಿಟ್, 19 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಹಾಗೂ ಒಟ್ಟು 84 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

5ನೇ ಘಟಿಕೋತ್ಸವ(2019–20)ದ ಅಂಗವಾಗಿ ಕರ್ನಾಟಕ ಸಂಗೀತ ಕ್ಷೇತ್ರದ ಸಾಧಕಿ ದೃಷ್ಟಿ ವಿಶೇಷ ಚೇತನ, ವಿದುಷಿ ಡಿ.ಶಶಿಕಲಾ, ಹಿಂದೂಸ್ತಾನಿ ಸಂಗೀತ ಸಾಧಕ ಪಂಡಿತ್ ವಿನಾಯಕ ತೊರವಿ ಹಾಗೂ ಆರನೇ ಘಟಿಕೋತ್ಸವ(2020–21)ದ ಅಂಗವಾಗಿ ಹಿಂದೂಸ್ತಾನಿ ಸಂಗೀತ ಕ್ಷೇತ್ರದ ಸಾಧಕ ಪಂಡಿತ್ ಶ್ರೀಪಾದ ಹೆಗಡೆ ಕಂಪ್ಲಿ ಹಾಗೂ ಕರ್ನಾಟಕ ಸಂಗೀತ ಕ್ಷೇತ್ರದ ಸಾಧಕ ಪ್ರೊ.ಎಸ್.ಸಿ.ಶರ್ಮಾ ಅವರಿಗೆ ಗೌರವ ಡಾಕ್ಟರೇಟ್ ನೀಡಿ, ಗೌರವಿಸಲಾಯಿತು.

ಇದೇ ವೇಳೆ ವಿವಿಧ ವಿಷಯಗಳಲ್ಲಿ ಅಧ್ಯಯನ ನಡೆಸಿರುವ ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ, ಎಂ.ಮಂಜುನಾಥ, ಎ.ಆರ್.ಶಾಲಿನಿ, ಎಸ್.ಸೌಮ್ಯಾ, ನಟ ಕೆ.ಎನ್.ಹಿರಣಯ್ಯ ಹಾಗೂ ಡಾ.ಎ.ಲೋಕೇಶ್ ಅವರಿಗೆ ಡಿ.ಲಿಟ್ ಪದವಿ ಪ್ರದಾನ ಮಾಡಲಾಯಿತು. ಗೌರವ ಡಾಕ್ಟರೇಟ್‌ಗೆ ಭಾಜನರಾಗಿರುವ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಹಾಗೂ ಮಧುಸೂದನ್ ಸಾಯಿ ಅವರು ಕಾರಣಾಂತರಗಳಿಂದ ಗೈರಾಗಿದ್ದರು.

ಚಿನ್ನದ ಪದಕ ಪ್ರದಾನ: 2020–21ನೇ ಸಾಲಿನ ಸ್ನಾತಕೋತ್ತರ(ಎಂಪಿಎ) ಕರ್ನಾಟಕ ಸಂಗೀತ ಗಾಯನ ವಿಭಾಗದ ವಿದ್ಯಾರ್ಥಿ ಶ್ರೀಷಾ ಜಿ.ಭಟ್ 7 ಚಿನ್ನದ ಪದಕಗಳು ಸೇರಿದಂತೆ ವಿ.ಸ್ನೇಹಾ(3 ಪದಕ), ಕಿರಣ್ ಯಾವಗಲ್(2) ಹಾಗೂ ಚಿನ್ಮಯಾ ಶಂಕರ್ ಮಹಾಲಿಂಗಯ್ಯ ಮಠದ್(2), ಎನ್. ದಿವ್ಯಾ(1), ಕೆ.ಎ.ಮೌಲ್ಯ (1), ಎಂ.ಭಾರ್ಗವಿ(1), ಸ್ನಾತಕ(ಬಿಪಿಎ) ವಿಭಾಗದ ಸಿಂಧು ವಿ.ಆಚಾರ್ಯ (3), ಸುವರ್ಣ ನಾಯಕ್(2) ಹಾಗೂ ದರ್ಶನ್ ಎಂ.ಪ್ರಸಾದ್(1), 2019–20ನೇ ಸಾಲಿನ ಸ್ನಾತಕೋತ್ತರ(ಎಂಪಿಎ) ವಿಭಾಗದ ದಿವ್ಯಾ ಕೇಶವನ್(4) ಹಾಗೂ ವಿಘ್ನೇಶ್ ದಾಮೋದರ್ ಭಾಗವತ್(4), ಎಸ್.ವಿ.ಕಾರ್ತಿಕ್ (2), ಎಸ್.ನೇತ್ರ(2), ಎಸ್.ರಶ್ಮಿ(1) ಎಂ.ಎಸ್. ಸಂತೋಷ್(1), ಸ್ನಾತಕ ವಿಭಾಗದ ಆರ್.ಸಿ. ಲಕ್ಷ್ಮೀ (2), ಬಿ.ಜೆ.ಸುಮಿತ್ರ(1) ಹಾಗೂ ಡಿ.ಎಂ.ದಾಕ್ಷಾಯಿನಿ (1 ಪದಕ) ಅವರಿಗೆ ಚಿನ್ನದ ಪದಕಗಳನ್ನು ನೀಡಿ, ಅಭಿನಂದಿಸಲಾಯಿತು. ಇದರೊಂದಿಗೆ ವಿದ್ಯುಕ್ತವಾಗಿ 2019–20ನೇ ಸಾಲಿನ 30 ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ, 9 ವಿದ್ಯಾರ್ಥಿಗಳಿಗೆ ಸ್ನಾತಕ, 2020– 21ನೇ ಸಾಲಿನ 27 ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ, 18 ವಿದ್ಯಾರ್ಥಿಗಳಿಗೆ ಸ್ನಾತಕ ಸೇರಿ ಒಟ್ಟು 84 ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಮಾಡಲಾಯಿತು.

ಮೈಸೂರಲ್ಲಿ ಸಂಸ್ಕೃತಿ, ಆಧುನಿಕತೆ ಸಮ್ಮಿಳಿತಗೊಂಡಿದೆ

ಮೈಸೂರು: ಭವ್ಯ ಪರಂಪರೆ ಹೊಂದಿರುವ ಮೈಸೂರು, ಸಂಸ್ಕೃತಿ ಹಾಗೂ ಆಧುನಿಕತೆಯ ಸಮ್ಮಿಳಿತ ಎಂದು ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಬಣ್ಣಿಸಿದರು. ಸಂಗೀತ ವಿವಿ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ಸಂಗೀತ ಮತ್ತು ನೃತ್ಯ ಕಲೆ ಪ್ರಾಚೀನ ಕಾಲದಿಂದಲೂ ದೇಶದ ಸಂಸ್ಕೃತಿ, ಪರಂಪರೆಯ ಪ್ರಮುಖ ಭಾಗವಾಗಿವೆ. ಸಂಗೀತ ಪ್ರತಿಯೊಬ್ಬರಿಗೂ ದಿವ್ಯಾನಂದದ ಅನುಭೂತಿ ನೀಡುತ್ತದೆ. ಸಂಗೀತದಲ್ಲಿ ಹಲವು ಶೈಲಿಗಳಿದ್ದು, ಭಾರತೀಯ ಶಾಸ್ತ್ರೀಯ ಸಂಗೀತ ವಿಶ್ವದ ಉದ್ದಗಲಕ್ಕೂ ಖ್ಯಾತಿ ಪಡೆದಿದೆ. ಮೈಸೂರಿನಲ್ಲಿ ಭವ್ಯ ಪರಂಪರೆ, ಸಂಸ್ಕೃತಿ ಹಾಗೂ ಆಧುನಿಕ ಜೀವನ ಶೈಲಿ ಸಂಯೋಜನೆಗೊಂಡಿದೆ. ಈ ವಿಶೇಷ ನಗರದಲ್ಲಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಮಹಾನ್ ಸಾಧಕಿ ಡಾ.ಗಂಗೂಬಾಯಿ ಹಾನಗಲ್ ಹೆಸರಿನಲ್ಲಿ ಸ್ಥಾಪಿತವಾಗಿರುವ ಸಂಗೀತ ವಿವಿ, ಸಂಸ್ಕೃತಿ, ಸಂಗೀತ ಪರಂಪರೆ ಪಸರಿಸುವ ನಿಟ್ಟಿನಲ್ಲಿ ಮತ್ತಷ್ಟು ಶ್ರಮಿಸಲಿ ಎಂದು ಆಶಿಸಿದರು.

7 ಚಿನ್ನದ ಪದಕ ಗಳಿಸಿದ ಉಡುಪಿ ಮೂಲದ ಇಂಜಿನಿಯರ್ ಶ್ರೀಷಾ

ಮೈಸೂರು: ಉಡುಪಿ ಮೂಲದ ಇಂಜಿನಿಯರ್ ಶ್ರೀಷಾ ಜಿ.ಭಟ್, ಕರ್ನಾಟಕ ಸಂಗೀತದಲ್ಲಿ ಬರೋಬ್ಬರಿ 7 ಚಿನ್ನದ ಪದಕಗಳನ್ನು ಗಳಿಸಿದ್ದಾರೆ. ಈ ಬಗ್ಗೆ ಸಂತಸ ಹಂಚಿಕೊಂಡ ಅವರು, ನನ್ನ ತಂದೆ ಗಣೇಶ್ ಭಟ್ ಎಲೆಕ್ಟ್ರಿಕಲ್ ಕಂಟ್ರಾಕ್ಟರ್ ಹಾಗೂ ಸಂಗೀತ ಶಿಕ್ಷಕಿಯಾಗಿರುವ ತಾಯಿ ಜಯಶ್ರೀ ಭಟ್ ಮನೆಯಲ್ಲೇ ದೇವಗಂಗಾ ಸಂಗೀತ ಶಾಲೆ ನಡೆಸುತ್ತಾರೆ. ನಾನು ಚಿಕ್ಕವನಿದ್ದಾಗಿನಿಂದಲೂ ಸಂಗೀತಾಭ್ಯಾಸ ಮಾಡಿದ್ದೇನೆ. ಹಲವು ಕಡೆ ಹಾಡಿದ್ದೇನೆ. ತಾಯಿಯೊಂದಿಗೆ ದೂರದಲ್ಲಿರುವ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿ ನೀಡುತ್ತಿದ್ದೆ. ಕಂಪ್ಯೂಟರ್ ಸೈನ್ಸ್‌ನಲ್ಲಿ ಇಂಜಿನಿಯರಿಂಗ್ ಮುಗಿಸಿ, 4 ವರ್ಷ ಉದ್ಯೋಗ ಮಾಡಿದೆ. ನಂತರ ಕೆಲಸ ಬಿಟ್ಟು ಸಂಗೀತ ವಿವಿಯಲ್ಲಿ ಸ್ನಾತಕೋತ್ತರ ಪದವಿಗೆ ಸೇರಿದೆ. ಬಾಡಿಗೆ ಮನೆಯಲ್ಲಿ ಉಳಿದುಕೊಂಡಿದ್ದೆ. ತಾಯಿಯಿಂದ ಸ್ವರ, ಸಂಸ್ಕಾರ ಬಂದಿದೆ. ತಂದೆ ಪ್ರೋತ್ಸಾಹ ತುಂಬಾ ಇದೆ. ಶಿಕ್ಷಕರ ಮಾರ್ಗದರ್ಶನವಿಲ್ಲದೆ ಸಾಧನೆ ಸಾಧ್ಯವಿಲ್ಲ. ಮುಂದೆ ಸಂಗೀತದಲ್ಲಿ ಹೆಚ್ಚು ಸಾಧಿಸುವ ಆಸೆಯಿದೆ ಎಂದರು.

> ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡ ಸಂಗೀತ ವಿವಿ 15 ವರ್ಷ ಪೂರೈಸಿದೆ. ಇದು ಆಸಕ್ತರಿಗೆ ಸಂಗೀತ ಮತ್ತು ಪ್ರದರ್ಶಕ ಕಲೆಗಳನ್ನು ಕಲ್ಪಿಸುವುದರ ಜೊತೆಗೆ ನಮ್ಮ ಕಲಾ ಶ್ರೀಮಂತಿಕೆಯನ್ನು ನಶಿಸದಂತೆ ಕಾಪಾಡುವ ಜವಾಬ್ದಾರಿ ಹೊಂದಿದೆ. ಸಂಗೀತ ಮತ್ತು ಕಲಾ ಪ್ರಕಾರಗಳ ಸಂಶೋಧನೆಗೆ ಹೆಚ್ಚು ಕಾರ್ಯೋನ್ಮುಖವಾಗಬೇಕು. ಸರ್ಟಿಫಿಕೇಟ್ ಕೋರ್ಸ್ 200, ಡಿಪ್ಲೊಮಾ 165, ಡಿ.ಲಿಟ್ 65, ಪಿಜಿ 64, ಯುಜಿ 70 ಸೇರಿ ಸದ್ಯ ಒಟ್ಟು 563 ವಿದ್ಯಾರ್ಥಿಗಳಿದ್ದಾರೆ. ಈ ಸಂಖ್ಯೆ ಹೆಚ್ಚಾಗಬೇಕು. ನ್ಯಾಕ್ ಶ್ರೇಣಿ ಬಗ್ಗೆ ಕೇಂದ್ರೀಕರಿಸಬೇಕು. ದೇಶದಲ್ಲೇ ಉತ್ತಮ ಕೀರ್ತಿ ಹೊಂದಬೇಕು.
>
> **–ಡಾ.ಎಂ.ಸಿ.ಸುಧಾಕರ್, ಉನ್ನತ ಶಿಕ್ಷಣ ಸಚಿವ**

ಕಲೆ, ಸಾಹಿತ್ಯ, ಸಂಗೀತ ನಮ್ಮ ಸಂಸ್ಕೃತಿಯ ತಳಹದಿ

● ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಪ್ರತಿಪಾದನೆ ● ವಿವಿ ಘಟಿಕೋತ್ಸವದಲ್ಲಿ ಪ್ರಧಾನ ಭಾಷಣ

ಮೈಸೂರು: ಸಾಹಿತ್ಯ, ಕಲೆ, ಸಂಗೀತ ನಮ್ಮ ಸಂಸ್ಕೃತಿಯ ಮೂಲರೂಪಿಕೆಗಳು ಎಂದು ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಹೇಳಿದರು.

ಸಂಗೀತ ವಿವಿ ಘಟಿಕೋತ್ಸವದಲ್ಲಿ ಪ್ರಧಾನ ಭಾಷಣ ಮಾಡಿದ ಅವರು, ಸಂಗೀತ ಮತ್ತು ಪ್ರದರ್ಶಕ ಕಲೆಗಳು ನಮ್ಮ ನಾಡಿನ ಜೀವನಾಡಿ. ಇವು ನಮ್ಮ ಬದುಕಿನ ಉತ್ಕರ್ಷ. ನಮ್ಮ ಬದುಕಿಗೆ ಇವು ಬೇಕೇ ಬೇಕು. ಸಾಹಿತ್ಯ, ಕಲೆ, ಸಂಗೀತ ಇವು ನಮ್ಮ ಸಂಸ್ಕೃತಿಯ ಮೂಲ ರೂಪಿಕೆಗಳು. ಯಾವುದೇ ಸಮಾಜ ಭಾಷೆ, ವರ್ಣ ಮತ್ತು ನಾದಗಳಿಲ್ಲದೆ ಜೀವಿಸಲಾರದು. ವಿಶ್ವ ಸಾಂಸ್ಕೃತಿಕ ಚರಿತ್ರೆ ಬಗೆದು ನೋಡಿದರೆ ಈ ಮೂರು ಸಂಸ್ಕೃತಿಯ ತಳಹದಿಯಾಗಿರುವುದು ತಿಳಿಯುತ್ತದೆ ಎಂದರು.

ಅವಕಾಶ ಕಲ್ಪಿತವಾಗಲಿ: ನಮ್ಮ ಶಿಕ್ಷಣದಲ್ಲಿ ಭಾಷೆ, ಶುದ್ಧ ವಿಜ್ಞಾನ, ಸಮಾಜ ವಿಜ್ಞಾನಗಳಿಗಿರುವಂತೆ ಸಂಗೀತ ಮತ್ತು ಪ್ರದರ್ಶಕ ಕಲೆಗಳಿಗೂ ಅವಕಾಶ ಕಲ್ಪಿತವಾಗಬೇಕು. 6 ದಶಕಗಳ ಹಿಂದೆ ಪ್ರತಿಯೊಂದು ಶಾಲೆಗಳಲ್ಲೂ ವಾದ್ಯ, ಹಾಡುಗಾರಿಕೆ ಹೇಳಿಕೊಡುವ ಶಿಕ್ಷಕರಿದ್ದರು. ಶಾಲಾ–ಕಾಲೇಜಿನಲ್ಲಿ ವಿಜ್ಞಾನದ ಹಲವು ನೆಲೆಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣದಲ್ಲಿ ಎಲ್ಲಾ ಬಗೆಯ ಸಂಗೀತ ಮತ್ತು ಪ್ರದರ್ಶಕ ಕಲೆಗಳಿಗೆ ಆದ್ಯತೆ ನೀಡುವುದರ ಜೊತೆಗೆ ಪಠ್ಯ ಚಟುವಟಿಕೆಗಳ ಭಾಗವಾಗುವುದು ಅವಶ್ಯಕವಾಗಿದೆ. ಸಮಾಜದಲ್ಲಿ ಪರಸ್ಪರ ಅಪನಂಬಿಕೆಗಳು ಬೆಳೆಯುತ್ತಿವೆ. ದ್ವೇಷ–ಅಸೂಯೆ ಆಳವಾಗಿ ಬೇರೆತು ಹೋಗುತ್ತಿವೆ. ತಾಂತ್ರಿಕತೆ ಮನುಷ್ಯನನ್ನು ಆಳುತ್ತಿದೆ. ಮಾನವ ಸಮಾಜ ಉಳಿಸಲು ಸಂಗೀತ–ಪ್ರದರ್ಶಕ ಕಲೆಗಳಿಗೆ ಪ್ರಾಮುಖ್ಯತೆ ದೊರಕಬೇಕು ಎಂದು ಆಶಿಸಿದರು.

ನಿರಂತರ ಪ್ರೋತ್ಸಾಹ ಬೇಕು: ಮಹಾರಾಜ ಶ್ರೀ ನಾಲ್ವಡಿ ಅವರ ಕಾಲದಲ್ಲಿ ವೀಣೆ ಶೇಷಣ್ಣ, ಬಿಡಾರಂ ಕೃಷ್ಣಪ್ಪ, ವಾಗ್ಗೇಯಕಾರ ವಾಸುದೇವಾಚಾರ್ಯರಂಥ ಮಹಾ ಸಂಗೀತಕಾರರು ಅಪಾರ ಕೊಡುಗೆ ನೀಡಿದರು. ಸಂಗೀತ ಮತ್ತು ಪ್ರದರ್ಶಕ ಕಲೆಗಳ ರಕ್ಷಣೆ, ಪೋಷಣೆ, ಪ್ರಸರಣೆ, ವಿಶೇಷ ಶೋಧನೆಗಾಗಿ ಜನ್ಮ ತಾಳಿದ ಸಂಗೀತ ವಿವಿ ಈಗ ಕಿಶೋರಾವಸ್ಥೆಯಲ್ಲಿದೆ. ಇದು ತಾರುಣ್ಯಾವಸ್ಥೆಗೆ ಬರಲು ಸರ್ಕಾರ ಮತ್ತು ಸಾರ್ವಜನಿಕ ಅಭಿಮಾನಿಗಳ ನಿರಂತರ ಪ್ರೋತ್ಸಾಹ ಬೇಕು. ದಕ್ಷಿಣ ಭಾರತದಲ್ಲೇ ಮೊದಲಿಗೆ ಕರ್ನಾಟಕ ಸರ್ಕಾರ ಇಂಥದೊಂದು ವಿಶ್ವವಿದ್ಯಾಲಯ ಸ್ಥಾಪಿಸಿರುವುದು ಹೆಮ್ಮೆಯ ಸಂಗತಿ. ಈ ವಿವಿ ನಾನಾ ಜ್ಞಾನ ಶಾಖೆಗಳ ಮೂಲಕ ಸರ್ವ ಮಾನ್ಯತೆಯನ್ನು ಗಳಿಸಬೇಕು. ಸಂಗೀತ ಕೆಲವೇ ಜನರ ಸ್ವತ್ತಾಗದೆ, ಅದು ಸಮಸ್ತ ಕನ್ನಡಿಗರನ್ನು ಒಳಗೊಳ್ಳಬೇಕೆಂದು ಹಾರೈಸುತ್ತೇನೆ ಎಂದರು. ಇದಕ್ಕೂ ಮುನ್ನ ಅತಿಥಿಗಳನ್ನು ಪರಿಚಯಿಸಿದ ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ, ಕಳೆದೆರಡು ಶೈಕ್ಷಣಿಕ ಸಾಲಿನ ವಿವಿಯ ಪ್ರಮುಖ ಸಾಧನೆಗಳು, ಕಾರ್ಯ ಚಟುವಟಿಕೆಗಳು ಹಾಗೂ ಮುಂದಿನ ಯೋಜನೆಗಳ ಬಗ್ಗೆ ತಿಳಿಸಿದರು. ಪ್ರಭಾರ ಕುಲಸಚಿವೆ ವಿ.ಆರ್.ಶೈಲಜಾ, ಗೌರವ ಡಾಕ್ಟರೇಟ್ ಪುರಸ್ಕೃತರು ವೇದಿಕೆಯಲ್ಲಿದ್ದರು.

ನಾದಬ್ರಹ್ಮ ಹಂಸಲೇಖರ 18 ವರ್ಷದ ಕನಸು ನನಸು; ಡಿ.ಲಿಟ್ ಪದವಿ ಸ್ವೀಕಾರ

ಮೈಸೂರು: ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಿಂದ ಡಿ.ಲಿಟ್ ಪಡೆದ ಖ್ಯಾತ ಸಿನಿಮಾ ಸಾಹಿತಿ, ಸಂಗೀತ ನಿರ್ದೇಶಕ ಹಾಗೂ ಈ ಬಾರಿಯ ದಸರಾ ಉದ್ಘಾಟಕರೂ ಆದ ನಾದಬ್ರಹ್ಮ ಹಂಸಲೇಖ ಅವರು ಅತೀವ ಸಂತಸ ವ್ಯಕ್ತಪಡಿಸಿದರು.



ಡಿ.ಲಿಟ್ ಪದವಿ ಸ್ವೀಕರಿಸಿದ ಬಳಿಕ ಪತ್ರಿಕಾ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದ ಅವರು, ಇದು ಹದಿನೆಂಟು ವರ್ಷದ ವನವಾಸದ ಬಳಿಕ ಸಿಕ್ಕ ಫಲ. ಒಂದು ಪಿಹೆಚ್.ಡಿ ಮಾಡಬೇಕೆಂದು ಅಷ್ಟು ವರ್ಷದಿಂದ ಕರ್ನಾಟಕದ ಎಲ್ಲಾ ಯೂನಿವರ್ಸಿಟಿಗಳಿಗೂ ಹೋದೆ. ಆದರೆ ಯಾರೂ ನನ್ನನ್ನು ವಿದ್ಯಾರ್ಥಿ ರೀತಿ ನೋಡಲೇ ಇಲ್ಲ. ಏನೇನೋ ಕಾರಣ ಹೇಳುತ್ತಿದ್ದರು. ಕಡೆಗೆ ನಮ್ಮ ಸಂಗೀತ ವಿವಿ ಶುರುವಾಯಿತು. ಆಗಲೂ ನಮಗೆ ಆಶಾದಾಯಕವಾಗಿ ಇರಲಿಲ್ಲ. ಆದರೆ ಸಂಘಟಕ ನಾಗೇಶ್ ಬೆಟ್ಟಕೋಟೆ ಕುಲಸಚಿವರಾಗಿ ಬಂದಾಗ ನನ್ನ ಪ್ರಸ್ತಾವನೆ ಗಮನಿಸಿ ಅವರೇ ಕರೆ ಮಾಡಿ, ಡಿ.ಲಿಟ್ ಮಾಡಲು ಆಹ್ವಾನಿಸಿದರು ಎಂದರು. ನನ್ನ ಡಿ.ಲಿಟ್ ಪದವಿ ಸಾಮಾನ್ಯ ಸಂಶೋಧನೆಯಲ್ಲ, ಇದೊಂದು ದೊಡ್ಡ ಆವಿಷ್ಕಾರ. 750 ವರ್ಷಗಳ ಹಿಂದೆ ಪುರಂದರ ದಾಸರು ಕರ್ನಾಟಕ ಸಂಗೀತಕ್ಕೆ ಒಂದು ಪಠ್ಯ ಬರೆದರು ಎಂಬ ದಾಖಲೆ ಇದೆ. ಆದರೆ ಸಂಗೀತ ಲಿಪಿ, ಸಂಗೀತ ಶಾಸ್ತ್ರಗಳಲ್ಲಿ ಹೆಚ್ಚು ಆವಿಷ್ಕಾರಗಳು ಆಗಲಿಲ್ಲ. ಈ ಬಗ್ಗೆ ತುಂಬಾ ಗಹನವಾಗಿ ಯೋಚನೆ ಮಾಡಿ ಜನಪದ ಸಂಗೀತ ಹಾಗೂ ಜಗತ್ತಿನ ಯಾವುದೇ ಸಂಗೀತ ಕಲಿಯಲು 'ಐದನಿ ಆಧುನಿಕ ಸಂಗೀತ ಶಾಸ್ತ್ರ' ಮಾಡಿದೆವು. ಅದನ್ನು ಬರೆದು ಓದುವುದಕ್ಕೆ ದೇಶಿ ನೊಟೇಷನ್ ಎಂಬ ವಿಶ್ವ ವ್ಯಾಪಕ ಸಂಗೀತ ಲಿಪಿಯನ್ನು ಆವಿಷ್ಕಾರ ಮಾಡಿದ್ದೇವೆ. ಅದು ವಿಶ್ವ ಸಂಗೀತ ಪ್ರಪಂಚಕ್ಕೆ ಕರ್ನಾಟಕದ ಕೊಡುಗೆಯಾಗಿದೆ ಎಂದು ತಿಳಿಸಿದರು.

ಬೆಂಗಳೂರಿನ ಬಹುಮಹಡಿ ಕಟ್ಟಡದ ಪಬ್‌ನಲ್ಲಿ ಬೆಂಕಿ; ಇಬ್ಬರಿಗೆ ಗಂಭೀರ ಗಾಯ

ಬೆಂಗಳೂರು: ಬೆಂಗಳೂರಿನಲ್ಲಿ ಬುಧವಾರ ಕೋರಮಂಗಲ ಸಮೀಪದ ತಾವರಕೆರೆ ಮುಖ್ಯರಸ್ತೆಯಲ್ಲಿರುವ ಪಬ್‌ವೊಂದರಲ್ಲಿ ಸಿಲಿಂಡರ್ ಸ್ಫೋಟದಿಂದ ಅಗ್ನಿ ದುರಂತ ಸಂಭವಿಸಿದೆ. ಕಟ್ಟಡದ 4ನೇ ಮಹಡಿ ಸಂಪೂರ್ಣ ಹೊತ್ತಿ ಉರಿದಿದೆ. ಬೆಂಕಿಯಿಂದ ತಪ್ಪಿಸಿಕೊಳ್ಳಲು ವ್ಯಕ್ತಿಯೊಬ್ಬರು ಟೆರೇಸ್‌ನಿಂದ ಜಿಗಿದಿದ್ದಾರೆ. ಅವರು ಮತ್ತು ಮತ್ತೊಬ್ಬ ವ್ಯಕ್ತಿಗೆ ಗಂಭೀರ ಗಾಯಗಳಾಗಿವೆ. ಇಬ್ಬರೂ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 4 ಅಂತಸ್ತಿನ ಕಟ್ಟಡದ ಮೇಲಿನ ಮಹಡಿಯಲ್ಲಿ ಹಲವಾರು ಎಲ್‌ಪಿಜಿ ಸಿಲಿಂಡರ್‌ಗಳನ್ನು ಸಂಗ್ರಹಿಸಲಾಗಿದ್ದ 'ಹುಕ್ಕಾ ಬಾರ್ ಮತ್ತು ಕೆಫೆ'ಯಲ್ಲಿ ಮಧ್ಯಾಹ್ನದ ಬೆಂಕಿ ಕಾಣಿಸಿಕೊಂಡಿದೆ. ಸುತ್ತಮುತ್ತಲಿನ ಜನರು ಸ್ಫೋಟದಂತಹ ಶಬ್ದಗಳನ್ನು ಕೇಳಿದರು. ನಾವು ಅಗ್ನಿಶಾಮಕ ದಳಗಳನ್ನು ಸ್ಥಳಕ್ಕೆ ಕಳುಹಿಸಿದ್ದೇವೆ ಮತ್ತು ನಮ್ಮ ಹಿರಿಯ ಅಧಿಕಾರಿಗಳು ಘಟನಾ ಸ್ಥಳದಲ್ಲಿದ್ದಾರೆ. ಬೆಂಕಿ ನಂದಿಸಲಾಗಿದೆ. ಇಬ್ಬರಿಗೆ ಗಂಭೀರ ಗಾಯಗಳಾಗಿವೆ.

ಮೈಸೂರು ಕೊಡವ ಸಮಾಜದಲ್ಲಿ ಕಾವೇರಿ ಸಂಕ್ರಮಣ ಹಬ್ಬ...



ಮೈಸೂರಿನ ಕೊಡವ ಸಮಾಜದ ವತಿಯಿಂದ ಬುಧವಾರ ವಿಜಯನಗರ 1ನೇ ಹಂತದಲ್ಲಿರುವ ಸಮಾಜದ ಆವರಣದಲ್ಲಿ ಕಾವೇರಿ ಸಂಕ್ರಮಣ ಹಬ್ಬ ಆಚರಿಸಲಾಯಿತು. ಈ ವೇಳೆ ಕಣಿ ಪೂಜೆ ಸಲ್ಲಿಸಿ ಕಾವೇರಿ ಪವಿತ್ರ ತೀರ್ಥ ವಿನಿಯೋಗಿಸಲಾಯಿತು.

ಬೆಂಗಳೂರಿನ ಶ್ರೀನಿವಾಸ್ 'ದಸರಾ ಶ್ರೀ', ಮಾಧುರಿ 'ದಸರಾ ಕುಮಾರಿ'

ಮೈಸೂರು, ಅ.18(ಎಂಕೆ)– ಮೈಸೂರು ದಸರಾ ಪಂಜ ಕುಸ್ತಿ ಪಂದ್ಯಾವಳಿಯಲ್ಲಿ ಬೆಂಗಳೂರಿನ ಬಿ.ವಿ.ಶ್ರೀನಿವಾಸ್ 'ದಸರಾ ಶ್ರೀ', ಕೆ.ಎನ್.ಮಾಧುರಿ 'ದಸರಾ ಕುಮಾರಿ', ಮಂಜುನಾಥ್ ಪವರ್ 'ವಿಶೇಷಚೇತನ' ಹಾಗೂ ಬೆಳಗಾವಿಯ ರಿಜ್ವಾನಾ ಜಾಮಾದಾರ್ 'ನವಚೇತನ ತಾರೆ' ಪ್ರಶಸ್ತಿ ಮುಡಿಗೇರಿಸಿಕೊಂಡರು.

ನಗರದ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಶ್ರೀ ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಬುಧವಾರ ನಡೆದ ದಸರಾ ನಾಡಕುಸ್ತಿ ಪಂಜ ಕುಸ್ತಿ ಪಂದ್ಯಾವಳಿಯಲ್ಲಿ ತೋಳ್ಬಲ ಪ್ರದರ್ಶಿಸಿದ ಪಟುಗಳು ಬಾಹುಬಲದೊಂದಿಗೆ ವಿಜಯಪತಾಕೆ ಹಾರಿಸಿದರು.



ವಿವಿಧ ವಿಭಾಗಗಳಲ್ಲಿ ನಡೆದ ಪಂದ್ಯಾವಳಿ ಕುಸ್ತಿ ಪಂದ್ಯಾವಳಿಯ ಟೈಟಲ್ ಪ್ರಶಸ್ತಿಯಲ್ಲಿ ಬೆಂಗಳೂರಿನ ಬಿ.ವಿ.ಶ್ರೀನಿವಾಸ್ 'ದಸರಾ ಶ್ರೀ' ಪ್ರಶಸ್ತಿ ಗೆದ್ದುಕೊಂಡರೆ, ಬೆಂಗಳೂರಿನವರೇ ಆದ ಕೆ.ಎನ್.ಮಾಧುರಿ 'ದಸರಾ ಕುಮಾರಿ' ಹಾಗೂ ವಿಶೇಷಚೇತನರ ವಿಭಾಗದಲ್ಲಿ ಮಂಜುನಾಥ್ ಪವರ್ 'ದಸರಾ ವಿಶೇಷ ಚೇತನ' ಹಾಗೂ ಬೆಳಗಾವಿಯ ರಿಜ್ವಾನಾ ಜಾಮಾದಾರ್ 'ದಸರಾ ನವಚೇತನ ತಾರೆ'ಯಾಗಿ ಹೊರಹೊಮ್ಮಿದರು. ಬಳಿಕ ವಿಜೇತರಿಗೆ ದಸರಾ ಕುಸ್ತಿ ಪಂದ್ಯಾವಳಿ ಉಪಸಮಿತಿ ಉಪ ವಿಶೇಷಾಧಿಕಾರಿ ಡಾ.ಬಿ.ಎನ್.ನಂದಿನಿ ಪ್ರಶಸ್ತಿ ಹಾಗೂ ಪ್ರಮಾಣ ಪತ್ರ ನೀಡಿ ಅಭಿನಂದಿಸಿದರು. ಪಂಜಕುಸ್ತಿ ತರಬೇತುದಾರ ವಿಶ್ವನಾಥ್, ಇನ್‌ಸ್ಪೆಕ್ಟರ್ ಶ್ರೀಕಾಂತ್, ದಸರಾ ಉಪಸಮಿತಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮುಂದುವರೆದ ಕುಸ್ತಿ ಪಂದ್ಯಗಳು: ನಾಡಕುಸ್ತಿ ಹಾಗೂ ಸಿಎಂ ಕಪ್ ಪಂದ್ಯಾವಳಿಯ ಫ್ರೀ ಸ್ಟೈಲ್ ಕುಸ್ತಿ ಪಂದ್ಯಗಳು ನಡೆದವು. ನಾಡಕುಸ್ತಿಯಲ್ಲಿ ಬುಧವಾರ ಸೆಣಸಾಡಿದ 38 ಜೋಡಿಗಳು ಅಖಾಡದಲ್ಲಿ ದೂಳೆಬ್ಬಿಸಿದರು. ಹಾಗೆಯೇ ಫ್ರೀ ಸ್ಟೈಲ್ ಪಂದ್ಯಗಳಲ್ಲಿ ಗೆಲುವು ಸಾಧಿಸಿದ ಪೈಲ್ವಾನರು ನಾಳೆ(ಅ.19) ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳನ್ನಾಡಲಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಪಿ.ಇ.ಎಸ್. ಕಾನೂನು ಕಾಲೇಜು

(ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಭಾರತೀಯ ವಕೀಲ ಮಂಡಳಿ ಮತ್ತು ನ್ಯಾಕ್ ಮಾನ್ಯತೆ ಪಡೆದಿದೆ)
ಪಿ.ಇ.ಟಿ. ಕ್ಯಾಂಪಸ್, ಮಂಡ್ಯ-571401.
ಇ-ಮೇಲ್: peslawcollege_mandya@yahoo.com

2023–2024ನೇ ಸಾಲಿನ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕಾನೂನು ಪದವಿ ಪ್ರವೇಶ ಪ್ರಕಟಣೆ

3 ವರ್ಷಗಳ ಕಾನೂನು ಪದವಿ (3 Years LL.B. Degree Course)

ಯಾವುದಾದರು ಅಂಗೀಕೃತ ವಿಶ್ವವಿದ್ಯಾನಿಲಯ, ವಿದೇಶಿ ವಿಶ್ವವಿದ್ಯಾನಿಲಯ ಅಥವಾ ಮುಕ್ತ ವಿಶ್ವವಿದ್ಯಾನಿಲಯದಿಂದ (ದೂರ ಶಿಕ್ಷಣ ಪದವಿಯನ್ನು 10+2 ತರಗತಿಗಳ ಉತ್ತೀರ್ಣತೆ ನಂತರ ಪಡೆದಿರುವವರು ಮಾತ್ರ) ಯಾವುದಾದರು ಪದವಿಯಲ್ಲಿ ಶೇ.45 ಅಂಕಗಳಿಸಿ ಉತ್ತೀರ್ಣತೆ ಹೊಂದಿರಬೇಕು. (ಪರಿಶಿಷ್ಟ ಜಾತಿ/ವರ್ಗದವರಿಗೆ ಶೇ.40 ಅಂಕಗಳು, ಹಿಂದುಳಿದ ವರ್ಗಗಳಿಗೆ (OBC) ಶೇ.42 ಅಂಕಗಳು)

ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.

ದೂರವಾಣಿ: 08232–222294/ 9448282584/ 9916020259

ಸಹಿ/–	ಸಹಿ/–	ಸಹಿ/–
ಡಾ. ಜೆ. ಯೋಗೀಶ್	ಕೆ.ಆರ್. ದಯಾನಂದ	ಕೆ.ಎಸ್. ವಿಜಯ್ ಆನಂದ್
ಪ್ರಾಂಶುಪಾಲರು	ಕಾರ್ಯದರ್ಶಿ	ಅಧ್ಯಕ್ಷರು

3ನೇ ವರ್ಷದ ಸವಿನೆನಪು

ದಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ (ಎನ್‌ಐಇ),

ಮಾನಂದವಾಡಿ ರಸ್ತೆ, ಮೈಸೂರು - 570 008 ಫೋನ್: 0821- 4004900 /2480475

ಬಸ್ ಚಾಲಕರು ಬೇಕಾಗಿದ್ದಾರೆ

ದಿನಾಂಕ: 18-10-2023

ಪರವಾನಗಿ ಮತ್ತು ಬ್ಯಾಡ್ಜ್ ಹೊಂದಿರುವ ಐದು ವರ್ಷಗಳಿಗಿಂತ ಹೆಚ್ಚಿನ ಅನುಭವವುಳ್ಳ ಭಾರೀ ವಾಹನಗಳ ಚಾಲಕರು ಬಸ್‌ಗಳನ್ನು ಚಲಾಯಿಸಲು ಬೇಕಾಗಿದ್ದಾರೆ. ಅರ್ಹ ಅಭ್ಯರ್ಥಿಗಳು ಲಿಖಿತ ಅರ್ಜಿ ಮತ್ತು ಭಾವಚಿತ್ರ ಸಹಿತ ಅಗತ್ಯ ದಾಖಲೆಗಳೊಂದಿಗೆ ಪ್ರಾಂಶುಪಾಲರು, ದಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಮಾನಂದವಾಡಿ ರಸ್ತೆ, ಮೈಸೂರು–570008, ಇವರಿಗೆ ದಿನಾಂಕ 27–10–2023ರೊಳಗಾಗಿ ಅರ್ಜಿ ಸಲ್ಲಿಸಲು ಕೋರಲಾಗಿದೆ.

ಸಹಿ/–	ಸಹಿ/–
ಪ್ರಾಂಶುಪಾಲರು	ಗೌರವ ಕಾರ್ಯದರ್ಶಿ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಂಜನಗೂಡು

ಹುಲ್ಲಹಳ್ಳಿ ರಸ್ತೆ, ನಂಜನಗೂಡು, ಮೈಸೂರು ಜಿಲ್ಲೆ.
apmcnanjangud@gmail.com ದೂ.ಸಂ.08221–226309
ಸಂಖ್ಯೆಃ ಕೃಉಮಾಸ/ನಂ/394/2023–24 ದಿನಾಂಕ: 16.10.2023

ತಿದ್ದುಪಡಿ ಪ್ರಕಟಣೆ

ಈ ಸಮಿತಿಯ ಸಂಕ್ಷಿಪ್ತ ಟೆಂಡರ್ ಪ್ರಕಟಣೆ ಸಂಖ್ಯೆಃಕೃಉಮಾಸ/ನಂ/362/2023–24 ದಿ: 09.10.2023 ರಲ್ಲಿ ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಇ ಪೋರ್ಟಲ್‌ನಲ್ಲಿ ಸ್ವೀಕರಿಸುವ ಕೊನೆಯ ದಿನಾಂಕವನ್ನು ತಾಂತ್ರಿಕ ಕಾರಣಗಳಿಂದ ದಿ: 03.11.2023ರ ಮಧ್ಯಾಹ್ನ 4.30 ಗಂಟೆಯವರೆಗೆ ಹಾಗೂ ಟೆಂಡರ್‌ಗಳನ್ನು ತೆರೆಯುವ ದಿ: 07.11.2023 ಮಧ್ಯಾಹ್ನ 3.00 ಗಂಟೆಗೆ ಎಂದು ತಿದ್ದುಪಡಿ ಮಾಡಲಾಗಿರುತ್ತದೆ.

ಸಹಿ/– ಕಾರ್ಯದರ್ಶಿ	ಸಹಿ/– ಆಡಳಿತಾಧಿಕಾರಿಯವರು
ಕೃ.ಉ.ಮಾ.ಸ., ನಂಜನಗೂಡು	ಕೃ.ಉ.ಮಾ.ಸ., ನಂಜನಗೂಡು

ಮೈಸೂರು ಮಿತ್ರ ಗುರುವಾರ 19 ಅಕ್ಟೋಬರ್ 2023

ಜಿಲ್ಲೆಯ ವಿವಿಧೆಡೆ ಪ್ರೊ. ಭಗವಾನ್ ವಿರುದ್ಧ ಪ್ರತಿಭಟನೆ



ಪಾಂಡವಪುರ ತಹಶೀಲ್ದಾರ್ ಕಚೇರಿ ಮುಂದೆ ಬಿಜೆಪಿ ಕಾರ್ಯಕರ್ತರು ಕೆ.ಎಸ್.ಭಗವಾನ್ ವಿರುದ್ಧ ಪ್ರತಿಭಟನೆ ನಡೆಸಿ, ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು.



ಕೆ.ಎಸ್.ಭಗವಾನ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಮಂಡ್ಯದಲ್ಲಿ ಎಸ್ಪಿ ತಿಮ್ಮಯ್ಯ ಅವರಿಗೆ ಬಿಜೆಪಿ ಮುಖಂಡರು ಮನವಿ ಸಲ್ಲಿಸಿದರು.



ಕೆ.ಆರ್.ಪೇಟೆಯಲ್ಲಿ ಒಕ್ಕಲಿಗ ಸಂಘ-ಸಂಸ್ಥೆಗಳು ಕೆ.ಎಸ್.ಭಗವಾನ್ ವಿರುದ್ಧ ಪ್ರತಿಭಟನೆ ನಡೆಸಿದವು.

ಮಂಡ್ಯ, ಅ.18– ಒಕ್ಕಲಿಗ ಸಮುದಾಯದ ಬಗ್ಗೆ ಹಗುರವಾಗಿ ಮಾತನಾಡಿರುವ ಪ್ರೊ.ಭಗವಾನ್ ವಿರುದ್ಧ ದೂರು ದಾಖಲಿಸುವ ಜೊತೆಗೆ ಇವರು ನಡೆಸುತ್ತಿರುವ ಸಂಘ ಸಂಸ್ಥೆಗಳಿಗೆ ವಿದೇಶಗಳಿಂದ ಹರಿದುಬರುತ್ತಿರುವ ಹಣದ ಬಗ್ಗೆ ತನಿಖೆ ನಡೆಸುವಂತೆ ಬಿಜೆಪಿ ಜಿಲ್ಲಾ ವಕ್ತಾರ ಸಿ.ಟಿ.ಮಂಜುನಾಥ್ ಇತರರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ ಅವರಿಗೆ ದೂರು ಸಲ್ಲಿಸಿದರು.

ಇತ್ತೀಚೆಗೆ ಮೈಸೂರಿನ ಟೌನ್‌ಹಾಲ್ ಬಳಿ ನಡೆದ ಮಹಿಷ ದಸರಾ ಕಾರ್ಯಕ್ರಮದ ವೇದಿಕೆಯಲ್ಲಿ ಸಾರ್ವಜನಿಕವಾಗಿ ಒಕ್ಕಲಿಗರು ಸಂಸ್ಕೃತಿ ಹೀನರು ಹಾಗೂ ಪ್ರಾಣಿಗಳು ಎಂಬ ಮಾತುಗಳನ್ನಾಡಿ ಸಾರ್ವತ್ರಿಕವಾಗಿ ಅಪಮಾನ ಮಾಡಿದ್ದಾರೆ. ಈ ಹಿಂದೆಯೂ ಧರ್ಮದ ಬಗ್ಗೆ ಹಾಗೂ ಇತಿಹಾಸ ಪುಣ್ಯ ಪುರುಷರಾದ ಶ್ರೀರಾಮ, ಸೀತಾದೇವಿ, ಭಗವದ್ಗೀತೆಯ ಬಗ್ಗೆ ತೀರಾ ಹಗುರವಾದ ಮಾತನಾಡಿ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಕೆಲಸ ಮಾಡಿದ್ದಾರೆ ಎಂದು ಆರೋಪಿಸಿದರು.

ಇದರ ಹಿಂದೆ ಅಂತಾರಾಷ್ಟ್ರೀಯ ಹುನ್ನಾರವಿದ್ದು, 'ಡಿಸ್ ಮ್ಯಾಂಟಲಿಂಗ್ ಆಫ್ ಗ್ಲೋಬಲ್ ಹಿಂದುತ್ವ ಎಂಬ ವಿಡಿಯೋ ಸಂವಾದವನ್ನು ವಿದೇಶಿ ವಿದ್ಯಾಲಯಗಳು ಏರ್ಪಡಿಸಿದ್ದು, ಈ ಸಂವಾದದಲ್ಲಿ ಪ್ರೊ.ಭಗವಾನ್, ಪ್ರೊ.ಮಹೇಶ್ ಚಂದ್ರಗುರು, ಜ್ಞಾನಪ್ರಕಾಶ್ ಸ್ವಾಮೀಜಿ ಹೀಗೆ ಹಲವಾರು ಮಂದಿ ಭಾಗವಹಿಸಿ ದೇಶದಲ್ಲಿ ಧರ್ಮ ಧರ್ಮಗಳ ಮಧ್ಯೆ ಜಾತಿ ಜಾತಿಗಳ ನಡುವೆ ವಿಷ ಬೀಜ ಬಿತ್ತುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದ್ದಾರೆ. ಇವರ ಕಾರ್ಯಕ್ಕೆ ವಿದೇಶದಿಂದ ಕೋಟಿಗಟ್ಟಲೆ ಹಣ ಪಡೆದಿದ್ದಾರೆ ಎಂಬ ಅನುಮಾನಗಳಿದ್ದು, ಇವರು ನಡೆಸುತ್ತಿರುವ ಸಂಘ-ಸಂಸ್ಥೆಗಳು, ಟ್ರಸ್ಟ್‌ಗಳ ಹಣದ ಮೂಲದ ಬಗ್ಗೆ ಸಮಗ್ರವಾದ ತನಿಖೆ ನಡೆಸುವಂತೆ ಒತ್ತಾಯಿಸಿದ್ದಾರೆ.

ಬಿಜೆಪಿ ಮುಖಂಡರಾದ ಪ್ರಸನ್ನ, ಮನುಕುಮಾರ್ ಹೊಳಲು, ಶಿವಲಿಂಗಯ್ಯ, ಶಿವಕುಮಾರ್, ವಿನೋಬಾ, ರಾಜೇಶ್ ಇತರರು ಈ ಸಂದರ್ಭದಲ್ಲಿ ಹಾಜರಿದ್ದರು.

ಕೆ.ಆರ್.ಪೇಟೆ ವರದಿ: ಒಕ್ಕಲಿಗ ಸಮುದಾಯದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ ಸಾಹಿತಿ ಪ್ರೊ.ಕೆ.ಎಸ್. ಭಗವಾನ್ ಬಂಧಿಸಿ, ಗಡಿಪಾರು ಮಾಡುವಂತೆ ಒತ್ತಾಯಿಸಿ ಕೆ.ಆರ್. ಪೇಟೆ ತಾಲೂಕು ಯುವ ಒಕ್ಕಲಿಗರ ಹೋರಾಟ ವೇದಿಕೆ ವತಿಯಿಂದ ಪಟ್ಟಣದಲ್ಲಿರುವ ಟಿ.ಬಿ.ವೃತ್ತದಲ್ಲಿ ಮಾನವ ಸರಪಳಿ ರಚಿಸಿ, ರಸ್ತೆ ತಡೆ ಚಳವಳಿ ನಡೆಸುವ ಮೂಲಕ ಸಮಾಜದ ಸ್ವಾಸ್ಥ್ಯ ಕೆಡಿಸುತ್ತಿರುವ ಸಾಹಿತಿ ಕೆ.ಎಸ್.ಭಗವಾನ್ ಭಾವಚಿತ್ರಕ್ಕೆ ಚಪ್ಪಲಿ ಹಾರ ಹಾಕಿ ಪ್ರತಿಭಟನೆ ನಡೆಸಿದರು. ತಾಪಂ ಮಾಜಿ ಅಧ್ಯಕ್ಷ ಎ.ಎನ್. ಜಾನಕೀರಾಮ್, ಯುವ ಮುಖಂಡ ಚಿಕ್ಕೋನಹಳ್ಳಿ ಬಿ.ಸಿ ಚೇತನ್ ಮಾತನಾಡಿದರು.

ಈ ಸಂದರ್ಭದಲ್ಲಿ ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಆರ್.ಎಸ್. ಶಿವರಾಮೇಗೌಡ,ಎಂ.ಡಿ.ಸಿ.ಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ ಅಶೋಕ್, ಹಿರಿಯ ಮುಖಂಡ ಗುಡ್ಡೆಹೊಸಹಳ್ಳಿ ಜವರಾಯಿಗೌಡ,ಕಸಬಾ ಹೋಬಳಿಯ ಜೆಡಿಎಸ್ ಅಧ್ಯಕ್ಷ ಮಾಕವಳ್ಳಿ ವಸಂತ ಕುಮಾರ್, ಅಗ್ರಹಾರ ಬಾಚಹಳ್ಳಿ ಬಿ.ವಿ.ನಾಗೇಶ್, ಅಗ್ರಹಾರ ಬಾಚಹಳ್ಳಿ ಗ್ರಾ.ಪಂ ಅಧ್ಯಕ್ಷ ಎ.ಸಿ ದಿವಿಕುಮಾರ್, ಡಾಬಾ ಮಂಜು, ಶೀಳನೆರೆ ಭರತ್, ದೊಡ್ಡಗಾಡಿಗನಹಳ್ಳಿ ಲೋಕೇಶ್, ಕೆರೆಕೋಡಿ ಆನಂದ್, ಜಗದೀಶ್, ಯುವ ಒಕ್ಕಲಿಗರ ವೇದಿಕೆ ಸದಸ್ಯರಾದ ಮಹೇಂದ್ರ, ಭಾಸ್ಕರ್, ಮಹೇಶ್, ಬೋರೇಗೌಡ, ಜಗದೇಶ್, ಗಿರೀಶ್, ನವೀನ್, ರಮೇಶ್, ಅಗ್ರಹಾರಬಾಚ ಹಳ್ಳಿ ವಾಸು ನಾರಾಯಣಗೌಡ ಸೇರಿದಂತೆ ನೂರಾರು ಮಂದಿ ಪ್ರತಿಭಟನಾಕಾರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪಾಂಡವಪುರ ವರದಿ: ರಾಜ್ಯದ ಕಾಂಗ್ರೆಸ್ ಸರಕಾರ ಮತ್ತು ಒಕ್ಕಲಿಗರ ಬಗ್ಗೆ ಹಗುರವಾಗಿ ಮಾತನಾಡಿದ ಪ್ರೊ.ಭಗವಾನ್ ಹೇಳಿಕೆ ಖಂಡಿಸಿ ಪಟ್ಟಣದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಪಟ್ಟಣದ ಐದು ದೀಪವೃತ್ತದಲ್ಲಿ ಜಮಾವಣೆಯಾದ ಬಿಜೆಪಿ ಕಾರ್ಯಕರ್ತರು ಶ್ರೀರಂಗಪಟ್ಟಣ-ಜೇವರ್ಗಿ ಹೆದ್ದಾರಿ ತಡೆದು ಕಾಂಗ್ರೆಸ್ ಸರಕಾರ, ಪ್ರೊ. ಭಗವಾನ್ ವಿರುದ್ಧ ಘೋಷಣೆ ಮೊಳಗಿಸಿದರು, ಬಳಿಕ ಪ್ರೊ.ಭಗವಾನ್ ಭಾವಚಿತ್ರಕ್ಕೆ ಚಪ್ಪಲಿಯಿಂಡ ಹೊಡೆದು ಭಾವಚಿತ್ರಕ್ಕೆ ಬೆಂಕಿಹಚ್ಚಿ ಆಕ್ರೋಶ ಹೊರಹಾಕಿದರು. ಬಳಿಕ ಪಟ್ಟಣದ ಮಿನಿವಿಧಾನಸೌಧಕ್ಕೆ ಆಗಮಿಸಿ ಬಿಜೆಪಿ ಮುಖಂಡ ಡಾ.ಎನ್.ಎಸ್.ಇಂದ್ರೇಶ್ ನೇತೃತ್ವದಲ್ಲಿ ಶಿರಸ್ತೇದಾರ್ ಮೋಹನ್ ಅವರಿಗೆ ಮನವಿಸಲ್ಲಿಸಿದರು.

ಬಿಜೆಪಿ ಮುಖಂಡ ಡಾ.ಎನ್.ಎಸ್.ಇಂದ್ರೇಶ್ ಮಾತನಾಡಿ, ಒಕ್ಕಲಿಗರ ಬಗ್ಗೆ ಹಗುರವಾಗಿ ಮಾತನಾಡಿರುವ ಭಗವಾನ್ ಒಬ್ಬ ಅನಾಗರಿಕ, ಈ ರೀತಿಯಾದ ಹೇಳಿಕೆಗಳ ಮೂಲಕ ಅಶಾಂತಿ ಸೃಷ್ಟಿಸುವುದೇ ಈತನ ಚಾಳಿಯಾಗಿದೆ ಕೂಡಲೇ ಕ್ಷಮೆಯಾಚಿಸದಿದ್ದರೆ ಈತನ ವಿರುದ್ಧ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಮೈಶುಗರ್ ಮಾಜಿ ಅಧ್ಯಕ್ಷ ಜೆ.ಶಿವಲಿಂಗೇಗೌಡ, ಬಿಜೆಪಿ ಅಧ್ಯಕ್ಷ ಅಶೋಕ್, ರೈಸ್ ಮಿಲ್ ತಮ್ಮಣ್ಣ, ಧನಂಜಯ್, ಎಸ್.ಎನ್.ಟಿ.ಸೋಮಶೇಖರ್, ಚಿಕ್ಕಮರಳಿ ನವೀನ್, ನಿರಂಜನ್‌ಬಾಬು, ರಾಮು, ಶ್ರೀನಿವಾಸ್ ನಾಯ್ಕ, ಚಿಕ್ಕಣ್ಣ ಸೇರಿದಂತೆ ಹಲವರು ಹಾಜರಿದ್ದರು.

ಶ್ರೀ ಶಿವಶೈಲದಲ್ಲಿ ಜಿ.ಟಿ.ದೇವೇಗೌಡ ಕುಟುಂಬ ಸಮೇತ ಸುದರ್ಶನ ಹೋಮ

ಪಾಂಡವಪುರ, ಅ.18– ತಾಲೂಕಿನ ಪಟ್ಟಸೋಮನಹಳ್ಳಿ ಗ್ರಾಮದ ಹೊರವಲಯದಲ್ಲಿರುವ ಶ್ರೀಶಿವಶೈಲ ದೇವಾಲಯದ ಆವರಣದಲ್ಲಿ ಶರನ್ನವರಾತ್ರಿ ಕಾರ್ಯಕ್ರಮಗಳು ಆರಂಭಗೊಂಡಿದ್ದು, ಮೈಸೂರು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಹಾಗೂ ಅವರ ಪುತ್ರರೂ ಆದ ಹುಣಸೂರು ಕ್ಷೇತ್ರದ ಶಾಸಕ ಡಿ.ಹರೀಶ್ ಗೌಡ ಹಾಗೂ ಕುಟುಂಬ ಸಮೇತರಾಗಿ ಪಾಲ್ಗೊಂಡು ಸುದರ್ಶನ ಹೋಮ ನಡೆಸಿದರು.



ಇಲ್ಲಿನ ಕಾಮಾಕ್ಷಿ ಚಂದ್ರಮೌಳೇಶ್ವರ ದೇವಾಲಯದಲ್ಲಿ ನವರಾತ್ರಿ ಮಹೋತ್ಸವದ ಅಂಗವಾಗಿ ಒಂಭತ್ತು ದಿನಗಳ ಕಾಲ ವಿವಿಧ ಹೋಮ-ಹವನಗಳ ಕಾರ್ಯಕ್ರಮವಿದ್ದು, ನವರಾತ್ರಿಯ ನಾಲ್ಕನೆಯ ದಿನವಾದ ಬುಧವಾರ ಸುದರ್ಶನ ಹೋಮದಲ್ಲಿ ಪಾಲ್ಗೊಂಡು ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ಹಲವು ವರ್ಷಗಳಿಂದ ಇಲ್ಲಿ ನಡೆಯುವ ನವರಾತ್ರಿ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದೇವೆ. ದೇವಿಯಲ್ಲಿ ಪ್ರಾರ್ಥಿಸಿ ಸುದರ್ಶನ ಹೋಮ ಸೇರಿದಂತೆ ಇತರೆ ವಿಶೇಷ ಪೂಜೆಗಳನ್ನು ಸಲ್ಲಿಸಲಾಗಿದ್ದು, ಸಂಕಷ್ಟ ನಿವಾರಣೆಯಾಗಬೇಕು ಹಾಗೂ ದೇಶ ಸುಭಿಕ್ಷೆಯಾಗಿರಬೇಕೆಂಬ ಆಶ್ರಯದಿಂದ ಪ್ರಾರ್ಥಿಸಲಾಗಿದೆ ಎಂದರು. ಈ ಬಾರಿಯು ದಸರಾ ಸಾಂಪ್ರದಾಯವಾಗಿ ಸರಳವಾಗಿ ಆಚರಣೆಯಾಗುತ್ತಿದೆ. ಹಾಗಾಗಿ ನಾಡು ಸುಭಿಕ್ಷವಾಗಿರಲಿ, ಕಾಲ ಕಾಲಕ್ಕೆ ಮಳೆ ಬೆಳೆಯಾಗಿ ರೈತರ ಕಲ್ಯಾಣವಾಗಲಿ, ಮೈಸೂರು ದಸರಾ ಯಶಸ್ವಿಯಾಗಲೆಂದು ಪ್ರಾರ್ಥಿಸಿ ಹೋಮದಲ್ಲಿ ಪಾಲ್ಗೊಂಡಿರುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ನಿವೃತ್ತ ನ್ಯಾಯಾಧೀಶ ಶಿವಶೈಲ ದತ್ತಿ ಧಾರ್ಮಿಕ ಸಂಸ್ಥೆಯ ಮುಖ್ಯಸ್ಥ ಶಿವಪ್ಪ, ಪುತ್ರ ಡಾ.ಸಿ.ಎಸ್. ರಾಜೇಶ್, ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳ ಅಧ್ಯಕ್ಷೆ ಲಲಿತಾ ದೇವೇಗೌಡ, ಬಿಜೆಪಿ ಮುಖಂಡ ರೈಸ್‌ಮಿಲ್ ತಮ್ಮಣ್ಣ, ಜಿಟಿಡಿ ಸಹೋದರ ಯದುಕುಮಾರ್, ಜಿಟಿಡಿ ಪುತ್ರಿ ಅನ್ನಪೂರ್ಣ ವಿಶ್ವೇಶ್ವರಯ್ಯ, ಯಶೋಧ, ವಕೀಲ ಪಾಲಾಕ್ಷ ಮಹಾನಗರ ಪಾಲಿಕೆ ಸದಸ್ಯ ಶಿವಣ್ಣ, ರಮೇಶ್, ಮುಡಾ ಮಾಜಿ ಅಧ್ಯಕ್ಷ ವಿಜಯಕುಮಾರ್, ಬ್ರಾಹ್ಮಣರ ಸಂಘದ ಅಧ್ಯಕ್ಷ ಮಂಜುನಾಥ್, ನಾಗರಾಜು, ಸುರೇಶ್‌ಕುಮಾರ್, ಪದ್ಮನಾಭ, ಜಯಕುಮಾರ್, ಮಿಲ್ಲರಾಜು, ಕಾರ್ಯಪ್ಪ, ಬಸವರಾಜು ಹಾಗೂ ಇನ್ನಿತರು ಪಾಲ್ಗೊಂಡಿದ್ದರು.

ಸಾವಯವ ಬೆಲ್ಲ ಬಳಕೆಯಿಂದ ಆರೋಗ್ಯ ವೃದ್ಧಿ: ಡಾ. ಕೇಶವಯ್ಯ

ಶ್ರೀರಂಗಪಟ್ಟಣ, ಅ.18– ಆರೋಗ್ಯದ ಹಿತದೃಷ್ಟಿಯಿಂದ ಸಾವಯವ ಬೆಲ್ಲವನ್ನು ಬಳಸಿ ಆರೋಗ್ಯವನ್ನು ವೃದ್ಧಿಸಿಕೊಳ್ಳಬೇಕೆಂದು ವಿ.ಸಿ ಫಾರಂ ಬೆಲ್ಲದ ಪಾರ್ಕ್‌ನ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥರಾದ ಡಾ. ಕೇಶವಯ್ಯರವರು ತಿಳಿಸಿದರು.



ನಾಡ ಹಬ್ಬ ಶ್ರೀರಂಗಪಟ್ಟಣ ದಸರಾ ಮೂರನೇ ದಿನದ ಅಂಗವಾಗಿ ಪಟ್ಟಣದ ಶ್ರೀರಂಗನಾಥಸ್ವಾಮಿ ದೇವಸ್ಥಾನದ ಆವರಣದ ಶ್ರೀರಂಗ ವೇದಿಕೆಯಲ್ಲಿ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತ್ ಸಹಯೋಗದೊಂದಿಗೆ ರೈತ ದಸರಾ ಕಾರ್ಯಕ್ರಮದ ಅಂಗವಾಗಿ ಕಿಸಾನ್ ಗೋಷ್ಠಿಯಲ್ಲಿ ಅವರು ಮಾತನಾಡಿದರು. ಬೆಲ್ಲವನ್ನು ಔಷಧಿಯಾಗಿ, ಆಹಾರಕ್ಕಾಗಿ ಶತಮಾನಗಳಿಂದಲೂ ಬಳಸಲಾಗುತ್ತಿದೆ. ಬೆಲ್ಲವು ಖಾದ್ಯವನ್ನು ಸಿಹಿಯಾಗಿಸುವುದಲ್ಲದೆ ಆರೋಗ್ಯವನ್ನು ಕೂಡ ಸಿಹಿಯಾಗಿಸುತ್ತದೆ. ಬೆಲ್ಲವು ತೂಕವನ್ನು ಇಳಿಸಿಕೊಳ್ಳಲು, ಹೊಟ್ಟೆಯ ಸಮಸ್ಯೆಯನ್ನು ಶಮನ ಮಾಡಿಕೊಳ್ಳಲು ಬಳಸಲಾಗುತ್ತದೆ. ಇದರಲ್ಲಿರುವ ಪೌಷ್ಟಿಕ ಸತ್ವಗಳು ರೋಗ ನಿರೋಧಕ ಶಕ್ತಿಯನ್ನು ಹೊಂದಿದೆ ಎಂದರು.

ರಕ್ತ ಮತ್ತು ಶ್ವಾಸಕೋಶವನ್ನು ನಿರ್ವಿಷಗೊಳಿಸುವುದಲ್ಲದೆ, ಶ್ವಾಸಕೋಶದ ದಕ್ಷತೆಯನ್ನು ಹೆಚ್ಚಿಸುತ್ತದೆ. ಬೆಲ್ಲ ವಿಶೇಷವಾಗಿ ಉಸಿರಾಟದ ಸಮಸ್ಯೆಗಳ ತಡೆಗಟ್ಟಲು ಸಾಕಷ್ಟು ಪ್ರಯೋಜನಕಾರಿಯಾಗಿದೆ. ರಕ್ತದಲ್ಲಿನ ಸಕ್ಕರೆಯ ಮಟ್ಟವನ್ನು ಕಡಿಮೆ ಮಾಡಲು ಸಹಾಯ ಮಾಡುವುದರಿಂದ ಮಧುಮೇಹ ಹೊಂದಿರುವವರು ಸಕ್ಕರೆಯ ಬದಲಾಗಿ ಬೆಲ್ಲವನ್ನು ಸೇವನೆ ಮಾಡಿದರೆ ಆರೋಗ್ಯ ಉತ್ತಮವಾಗಿರುತ್ತದೆ ಎಂದರು.

ತೋಟಗಾರಿಕೆ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಸಿದ್ದಪ್ಪ ಮಾತನಾಡಿ, ಉತ್ತಮ ಗುಣಮಟ್ಟದ ರೇಷ್ಮೆ ಬೆಳೆ ಬೆಳೆಯಬೇಕಾದರೆ ರೈತರ ಕೃಷಿ ಜಮೀನು ಹೇಗೆ ಅಚ್ಚುಕಟ್ಟಾಗಿ ಇಟ್ಟುಕೊಳ್ಳುವುದು. ಜೊತೆಗೆ ಸಾವಯವ ಗೊಬ್ಬರವನ್ನು ರೈತರೆ ಉತ್ಪಾದನೆ ಮಾಡುವುದರಿಂದ ಇಳುವರಿ ಪಡೆಯಬಹುದು. ಚಂದ್ರಿಕೆಗಳ ಆಧುನೀಕರಣ ಮತ್ತು ರೇಷ್ಮೆಯ ಹಿಪ್ಪುನೇರಳೆ ಬೆಳೆಯುವುದು, ಕೀಟನಾಶಕಗಳ ಸಿಂಪಡಿಕೆ ಎಚ್ಚರಿಕೆಯಿಂದ ಬಳಸುವ ಬಗ್ಗೆ ತಿಳಿಸಿದರು.

ಪಶು ಆಹಾರ ತಜ್ಞ ಹಾಗೂ ಸಲಹೆಗಾರರಾದ ಡಾ.ಚನ್ನೇಗೌಡ ಹೆಚ್.ಕೆ ಮಾತನಾಡಿ, ವಿದೇಶಗಳಿಗೆ ಹೋಲಿಸಿದರೆ ನಮ್ಮ ದೇಶದಲ್ಲಿ ಜಾನುವಾರುಗಳ ಸಂಖ್ಯೆ ಹೆಚ್ಚು ಆದರೆ ಒಂದು ಹಸು ನೀಡುವ ಹಾಲಿನ ಪ್ರಮಾಣ ಬೇರೆ ದೇಶದ ಹಸುಗಳಿಗೆ ಹೋಲಿಸಿದರೆ ಕಡಿಮೆ ಆದ್ದರಿಂದ ಜಾನುವಾರುಗಳಿಗೆ ದೈನಂದಿನ ನೀಡುವ ಆಹಾರ ಪದ್ಧತಿಯ ಬದಲಾವಣೆ ಮಾಡಿ ಗುಣಮಟ್ಟದ ಮೇವನ್ನು ನೀಡಿದರೆ ಹಾಲಿನ ಪ್ರಮಾಣ ಹೆಚ್ಚುತ್ತದೆ ಆದ್ದರಿಂದ ಹಸುಗಳ ಪಾಲನೆ – ಪೋಷಣೆ ಬಹು ಮುಖ್ಯ ಎಂದರು.

ಈ ವೇಳೆ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಅಶೋಕ ವಿ.ಎಸ್, ತೋಟಗಾರಿಕೆ ಇಲಾಖೆಯ ಉಪನಿರ್ದೇಶಕಿ ರೂಪಶ್ರೀ, ಪಶುಸಂಗೋಪನೆ ಇಲಾಖೆಯ ಉಪನಿರ್ದೇಶಕ ಸುರೇಶ್, ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕ ಬಾಬಸಾಬ್ ಬಿ.ಹೆಚ್, ರೇಷ್ಮೆ ಇಲಾಖೆ ಉಪನಿರ್ದೇಶಕ ಪುಟ್ಟಸ್ವಾಮಿ, ಪಾಂಡವಪುರ ಉಪವಿಭಾಗಾಧಿಕಾರಿ ನಂದೀಶ್ ಹಾಗೂ ಸಮಾಜ ಕಲ್ಯಾಣಾಧಿಕಾರಿ ಸಿದ್ದಲಿಂಗೇಶ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಹಾಜರಿದ್ದರು.

ಲಾಲಿ ಹಾಡು ಮರೆತು, ಮೊಬೈಲ್ ತೋರಿಸಿ ಮಗು ಮಲಗಿಸುವ ಕಾಲ ಬಂದಿದೆ

ಖ್ಯಾತ ಮಕ್ಕಳ ಸಾಹಿತಿ ಪ.ಗು.ಸಿದ್ದಾಪುರ ಬೇಸರ

ಮೈಸೂರು, ಅ.18(ಬಿಎಲ್‌ಯು)– ಲಾಲಿ ಹಾಡು ಹಾಡಿ ಮಗುವನ್ನು ಮಲಗಿಸುತ್ತಿದ್ದ ಕಾಲ ದೂರವಾಗಿ, ಈಗ ಮೊಬೈಲ್ ತೋರಿಸಿ ಮಗುವನ್ನು ಮಲಗಿಸುವ ಕಾಲ ಬಂದಿದೆ ಎಂದು ಖ್ಯಾತ ಮಕ್ಕಳ ಸಾಹಿತಿ ಪ.ಗು.ಸಿದ್ದಾಪುರ ಬೇಸರ ವ್ಯಕ್ತಪಡಿಸಿದರು.



ಮೈಸೂರಿನ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಇಂದು ನಡೆದ ಚಿಗುರು ಕವಿಗೋಷ್ಠಿಯಲ್ಲಿ ಮಾತನಾಡಿದ ಅವರು, ತೊಟ್ಟಿಲಲ್ಲಿ ಮಗುವನ್ನು ತೂಗುತ್ತಾ ಲಾಲಿ ಹಾಡು ಹೇಳುತ್ತಾ ತಾಯಿ ಕಂದನನ್ನು ಮಲಗಿಸುತ್ತಿದ್ದಳು. ಈ ಮೂಲಕ ಮಗುವಿನ ಕಿವಿಗೆ ಸಾಹಿತ್ಯದ ಉಸಿರನ್ನು ಊದುತ್ತಿದ್ದಳು. ಆದರೆ ಈಗ ತಾಯಿ ಲಾಲಿ ಹಾಡು ಹಾಡುವುದೇ ಇಲ್ಲ, ಬದಲಿಗೆ ಮೊಬೈಲ್ ತೋರಿಸಿ ಮಗುವನ್ನು ಮಲಗಿಸುತ್ತಾಳೆ ಎಂದು ಹೇಳಿದರು.

ಈ ಮೊದಲು ಮಕ್ಕಳು ಗಿಲ್ಲಿದಾಂಡು, ಲಗೋರಿ ಸೇರಿದಂತೆ ಹಲವು ಗ್ರಾಮೀಣ ಆಟಗಳನ್ನು ಆಡುತ್ತಿದ್ದರು. ಆದರೆ ಈ ಆಟಗಳೆಲ್ಲಾ ಇಂದು ಮರೆಯಾಗಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಕ್ಕಳಿಗೆ ಸಾಹಿತ್ಯ ಕೃಷಿ ಮಾಡುವಾಗ ಪರಕಾಯ ಪ್ರವೇಶಿಸಬೇಕು. ಸಸಿಗೆ ನೀರೆರೆದಂತೆ ಮಕ್ಕಳಿಗೆ ಸಂಸ್ಕಾರ ಕಲಿಸಬೇಕು. ಈ ಮೂಲಕ ಸಾಹಿತ್ಯದ ಅಕ್ಷರಗಳು ಮಕ್ಕಳ ನಾಲಿಗೆ ಮೇಲೆ ಕುಣಿದಾಡಬೇಕು. "ಆಚಾರದಲ್ಲಿ ಅರಸನಾಗು, ನೀತಿಯಲ್ಲಿ ಪ್ರೌಢನಾಗು" ಎಂಬ ಮಾತುಗಳನ್ನು ಹೇಳಿಕೊಡಬೇಕು. ಹೀಗೆ ಬೆಳೆದ ಮಗುವಿನ ಸಾಹಿತ್ಯದ ಮನಸು ಮುದಗೊಳಿಸುತ್ತದೆ, ತಿಳಿಗೊಳಿಸುತ್ತದೆ. ಆದರೆ ಯಾವುದೇ ಕಾರಣಕ್ಕೂ ಕೆರಳಿಸುವುದಿಲ್ಲ. ಆದರೆ ಅದೇ ಪ್ರೌಢ ಸಾಹಿತ್ಯ ಕೆಲವೊಮ್ಮೆ ಕೋಲಾಹಲ ಎಬ್ಬಿಸುತ್ತದೆ ಎಂದು ಸಿದ್ದಾಪುರ ತಿಳಿಸಿದರು.

ಮಕ್ಕಳು ನಮ್ಮ ಸಂಪತ್ತು, ಮಕ್ಕಳಿದ್ದರೆ ಶಾಲೆ, ಮಕ್ಕಳಿದ್ದರೆ ಮನೆ ಎಂದು ಪ್ರತಿಪಾದಿಸಿದ ಸಿದ್ದಾಪುರ, ಮಕ್ಕಳಿಗೆ ಸಾಹಿತ್ಯ ಸಂಸ್ಕಾರ ಮನೆಯಿಂದಲೇ ಆರಂಭವಾಗುತ್ತದೆ. ಮಕ್ಕಳ ಸಾಹಿತ್ಯ ಪರಿಪೂರ್ಣವಾಗಿದ್ದು, ಮಕ್ಕಳ ಸಾಹಿತ್ಯ ಬರೆಯಲು ವಯಸ್ಸು ಮುಖ್ಯವಲ್ಲ ಎಂದು ಹೇಳಿದರು.

ಮಕ್ಕಳ ಸಾಹಿತ್ಯ ಪ್ರೌಢ ಸಾಹಿತ್ಯಕ್ಕಿಂತ ದೊಡ್ಡದು, ಉತ್ತಮ ಪ್ರಜೆಗಳಾಗಬೇಕಾದರೆ ಮಕ್ಕಳು ಮಕ್ಕಳ ಸಾಹಿತ್ಯವನ್ನೆ ಓದಬೇಕು. ಈ ನಿಟ್ಟಿನಲ್ಲಿ ಮಕ್ಕಳ ಸಾಹಿತ್ಯ ಬರೆಯುವಾಗ ಬಾಲ್ಯವನ್ನು ನೆನಪಿಸಿಕೊಂಡು ಬರೆಯಬೇಕು ಎಂದು ಸಿದ್ದಾಪುರ ಸಲಹೆ ನೀಡಿದರು.

ಚಿಗುರು ಕವಿಗೋಷ್ಠಿಯ ಕಾರ್ಯಾಧ್ಯಕ್ಷೆ ಡಾ.ಎಸ್.ವಿಜಯ್ ಕುಮಾರಿ ಕರಿಕಲ್, ಖ್ಯಾತ ಕವಿಯತ್ರಿ ಡಾ.ಎನ್.ಕೆ. ಲೋಲಾಕ್ಷಿ, ಚಿಗುರು ಕವಿಗೋಷ್ಠಿಯ ಉಪ ಸಮಿತಿ ವಿಶೇಷಾಧಿಕಾರಿ ಡಾ.ದಾಸೇಗೌಡ, ಅಧ್ಯಕ್ಷ ಮಹೇಶ್ ಅಂಬಲಾರೆ, ಉಪಾಧ್ಯಕ್ಷ ದಂಡಿನ ಕೆರೆ, ನಾಗರಾಜು, ರವಿಚಂದ್ರನ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದೀಪಾವಳಿ ಹಬ್ಬದಲ್ಲಿ ಪಟಾಕಿ ಮಾರಾಟಕ್ಕೆ ತಾತ್ಕಾಲಿಕ ಪರವಾನಗಿ ನೀಡಲು ಆಹ್ವಾನ

ಮೈಸೂರು, ಅ. 18– 2023ನೇ ಸಾಲಿನ ದೀಪಾವಳಿ ಹಬ್ಬವನ್ನು ನವೆಂಬರ್ 12ರಿಂದ 14 ರವರೆಗೆ ಆಚರಿಸಲಾಗುತ್ತಿದ್ದು, ಮೈಸೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಪಟಾಕಿ ಮಾರಾಟ ಮಾಡಲಿಚ್ಛಿಸುವವರು ತಾತ್ಕಾಲಿಕ ರಹದಾರಿಯನ್ನು ಪಡೆಯುವ ಸಂಬಂಧ ಭರ್ತಿ ಮಾಡಿದ ನಮೂನೆಯ ಫಾರಂ AE-5 ಅನ್ನು ಅ.31ರೊಳಗೆ ಕಚೇರಿಗೆ ಸಲ್ಲಿಸಬೇಕು.

AE-5 ನಮೂನೆಯ ಎಲ್ಲಾ ಕಾಲಂಗಳನ್ನು ಪೂರ್ಣವಾಗಿ ಭರ್ತಿ ಮಾಡಿ, ಫೋಟೋಗಳನ್ನು ಲಗತ್ತಿಸಬೇಕು ಹಾಗೂ AE-5 ಖಾಲಿ ನಮೂನೆಯನ್ನು ಈ ಕಚೇರಿ ಮತ್ತು ಸಂಬಂಧಪಟ್ಟ ತಾಲೂಕು ಕಚೇರಿಗಳಲ್ಲಿ ಪಡೆಯಬಹುದಾಗಿದೆ. ಅಕ್ಟೋಬರ್ 31ರ ನಂತರ ಸ್ವೀಕೃತವಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ದಸರಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಬುಧವಾರ ಮೈಸೂರಿಗೆ ಆಗಮಿಸಿದ್ದ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರನ್ನು ಕೆಪಿಸಿಸಿ ಕಾರ್ಯದರ್ಶಿ ಹಾಗೂ ನಾಗವಾಲ ಗ್ರಾಪಂ ಮಾಜಿ ಅಧ್ಯಕ್ಷ ಸಿ.ನರೇಂದ್ರ ಅವರು ಅಭಿನಂದಿಸಿದರು. ಈ ಸಂದರ್ಭದಲ್ಲಿ ಉದ್ಯಮಿ ಶಶಿಧರ್ ರೆಡ್ಡಿ, ಶ್ರೀಕಾಂತ್, ಐಎನ್‌ಬಿಸಿಡಬ್ಲ್ಯೂಎಸ್ ಘಟಕದ ರಾಜ್ಯ ಕಾರ್ಯದರ್ಶಿ ನಾಗರಾಜು, ತಾಲೂಕು ಅಧ್ಯಕ್ಷ ಪುಟ್ಟರಾಜು ಇತರರು ಇದ್ದರು.

ದೊಣ್ಣೆಯಿಂದ ಹೊಡೆದು ತಂದೆಯನ್ನೇ ಕೊಂದ ಮಗ

ವಿರಾಜಪೇಟೆ, ಅ.18– ಮಗನೊಬ್ಬ ಜನ್ಮ ನೀಡಿದ ತಂದೆಗೆ ದೊಣ್ಣೆಯಿಂದ ಹೊಡೆದು ಕೊಲೆ ಮಾಡಿರುವ ಘಟನೆ ತಾಲೂಕಿನ ಬಿಟ್ಟಂಗಾಲ ಗ್ರಾಮದ ನಾಂಗಾಲದಲ್ಲಿ ಸಂಭವಿಸಿದೆ. ಗ್ರಾಮದ ನಿವಾಸಿ ಚೇಂದ್ರಿಮಾಡ ಚೆಟ್ಟಿಯಪ್ಪ ಅಲಿಯಾಸ್ ರಾಜ (68) ಕೊಲೆಯಾದ ದುರ್ದೈವಿ. ಕೊಲೆ ಮಾಡಿರುವ ಮಗನಾದ ಆರೋಪಿ ದರ್ಶನ್‌ನನ್ನು ವಿರಾಜಪೇಟೆ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ.

ಇಂದು ರಾತ್ರಿ ತಂದೆ-ಮಗನ ನಡುವೆ ಮಾತಿಗೆ ಮಾತು ಬೆಳೆದು ಕುಪಿತನಾದ ದರ್ಶನ್ ದೊಣ್ಣೆಯಿಂದ ತಂದೆಯ ತಲೆಗೆ ಹೊಡೆದು ಕೊಲೆ ಮಾಡಿದ ಎಂದು ಪೊಲೀಸರು ತಿಳಿಸಿದ್ದು, ಕೊಲೆಗೆ ನಿಖರ ಕಾರಣಗಳು ತಿಳಿದುಬಂದಿಲ್ಲ. ಸ್ಥಳಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ವಿರಾಜಪೇಟೆ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

'ಘೋಸ್ಟ್' ಸ್ಟಾರ್‌ಗಳ ಮೆರವಣಿಗೆ



ಮೈಸೂರು, ಅ.18(ಬಿಎಲ್‌ಯು)– ಸಂದೇಶ್ ಪ್ರೊಡಕ್ಷನ್ ನಿರ್ಮಾಣದ, ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಅಭಿನಯದ ಘೋಸ್ಟ್ ಸಿನಿಮಾ ನಾಳೆ (ಅ.19) ತೆರೆ ಕಾಣಲಿರುವ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಇಂದು ಸ್ಟಾರ್ ಮೆರವಣಿಗೆ ನಡೆಯಿತು. ಆಟೋ, ಸಾರೋಟ್ ಹಾಗೂ ಮೋಟಾರು ವಾಹನದ ರಥದಲ್ಲಿ ಶಿವರಾಜ್ ಕುಮಾರ್ ಭಾವಚಿತ್ರ ವಿರುವ ಅತ್ಯಾಕರ್ಷಕ ಸ್ಟಾರ್‌ಗಳು ಜನರ ಗಮನ ಸೆಳೆಯಿತು. ಡೊಳ್ಳು ಕುಣಿತ, ವೀರಗಾಸೆ, ಕಂಸಾಳೆ ಸೇರಿದಂತೆ ಹಲವು ಜಾನಪದ ಕಲಾತಂಡಗಳು ಸ್ಟಾರ್ ಮೆರವಣಿಗೆಗೆ ಮೆರಗು ನೀಡಿತು. ಮೈಸೂರಿನ ಇಟ್ಟಿಗೆಗೂಡಿನ ಜ್ವಾಲಾಮುಖಿ ಸರ್ಕಲ್‌ನಿಂದ ಹೊರಟ ಸ್ಟಾರ್ ಮೆರವಣಿಗೆಯು ಹಾರ್ಡಿಂಗ್ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ, ಡಾ.ರಾಜ್‌ಕುಮಾರ್ ಪಾರ್ಕ್, ಹರ್ಷ ರಸ್ತೆ ಮುಖೇನ ವುಡ್‌ಲ್ಯಾಂಡ್ ಚಿತ್ರಮಂದಿರ ತಲುಪಿತು. ಶಿವರಾಜ್‌ಕುಮಾರ್ ಅಭಿನಯದ ಘೋಸ್ಟ್ ಸಿನಿಮಾ ಮೈಸೂರಿನ ಮಲ್ಟಿ ಪ್ಲೆಕ್ಸ್ ಸೇರಿದಂತೆ ಹಲವು ಥಿಯೇಟರ್‌ಗಳಲ್ಲಿ ತೆರೆ ಕಾಣಲಿದೆ.

ಇಂದಿನಿಂದ ವರಕೋಡು ಗ್ರಾಮದಲ್ಲಿ ಬೀರೇಶ್ವರ, ಬನ್ನಿಮಹಾಕಾಳೇಶ್ವರಿ ಜಾತ್ರಾ ಮಹೋತ್ಸವ

- ದಶಕದ ನಂತರ ಜರುಗುತ್ತಿರುವ ಜಾತ್ರೆ
- ನಾಡಿನಾದ್ಯಂತ ಲಕ್ಷಕ್ಕೂ ಅಧಿಕ ಮಂದಿ ಪಾಲ್ಗೊಳ್ಳುವ ನಿರೀಕ್ಷೆ
- ಸುತ್ತಮುತ್ತಲಿನ ಗ್ರಾಮಗಳಲ್ಲಿ ನಾಟಕ ಪ್ರದರ್ಶನ



ಮೈಸೂರು,ಅ.18(ಎಂಟಿವೈ)– ಮೈಸೂರು ತಾಲೂಕಿನ ವರಕೋಡು ಗ್ರಾಮದಲ್ಲಿ ಅ.19ರಿಂದ 22ರವರೆಗೆ ಶ್ರೀ ಬೀರೇಶ್ವರ ಹಾಗೂ ಶ್ರೀ ಬನ್ನಿ ಮಹಾಕಾಳೇಶ್ವರಿ ಜಾತ್ರಾ ಮಹೋತ್ಸವ ಜರುಗಲಿದ್ದು, ನಾಡಿನಾದ್ಯಂತ ಲಕ್ಷಕ್ಕೂ ಅಧಿಕ ಭಕ್ತರು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ.

ಕುರುಬ ಸಮುದಾಯ ಕುಲದೇವರಾದ ಶ್ರೀ ಬೀರೇಶ್ವರ ಹಾಗೂ ಶ್ರೀ ಬನ್ನಿಮಹಾಕಾಳೇಶ್ವರಿ ದೇವಿಯ ಜಾತ್ರಾ ಮಹೋತ್ಸವ ಪ್ರತಿ ಮೂರು ವರ್ಷಕ್ಕೊಮ್ಮೆ ನಡೆಸುವ ಸಂಪ್ರದಾಯ ವಿದ್ದು, ಬೀರೇಶ್ವರ ದೇವಾಲಯ ಮರು ನಿರ್ಮಾಣ ಕಾಮಗಾರಿಯಿಂದಾಗಿ ಈ ಬಾರಿ 10 ವರ್ಷದ ನಂತರ ಜಾತ್ರಾ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಈ ಜಾತ್ರಾ ಮಹೋತ್ಸವದಲ್ಲಿ ಕುಲದೇವರ ಆರಾಧಕರು ಮಾತ್ರವಲ್ಲದೆ, ವಿವಿಧ ಸಮುದಾಯಗಳ ಜನರು ಪಾಲ್ಗೊಳ್ಳಲಿದ್ದು, ನಾಲ್ಕು ದಿನ ವಿವಿಧ ಧಾರ್ಮಿಕ ಕಾರ್ಯ ಜರುಗಲಿದೆ. ಈ ಜಾತ್ರಾ ಮಹೋತ್ಸವದಲ್ಲಿ ವರಕೋಡು, ಮೂಡಲಹುಂಡಿ, ಬಡಗಲಹುಂಡಿ, ಕೆಂಪೇಗೌಡನಹುಂಡಿ ಹಾಗೂ ಹೊಸಹುಂಡಿ, ಬೊಂತಗಳ್ಳಿಹುಂಡಿ ಹಾಗೂ ಇನ್ನಿತರ ಗ್ರಾಮಗಳ ಗ್ರಾಮಸ್ಥರು, ಒಕ್ಕಲುದಾರರು ಶ್ರದ್ಧಾಭಕ್ತಿಯಿಂದ ಆಚರಿಸಲಿದ್ದು, ಜಾತ್ರೆಗೆ ಬರುವ ಭಕ್ತರಿಗೆ ಆಥಿತ್ಯ ನೀಡಲಿದ್ದಾರೆ. ಕಾಗಿನೆಲೆ ಮಹಾಸಂಸ್ಥಾನದ ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ, ವರಕೋಡು ಗಡಿ ಗುರುಮಠದ ಗುರುಸ್ವಾಮಿ, ಗುರುದೇವ್ ಸಾನಿಧ್ಯದಲ್ಲಿ ಜಾತ್ರಾ ಮಹೋತ್ಸವ ಜರುಗಲಿದ್ದು, ಅ.19ರಂದು ಸಂಜೆ ವೇಳೆಗೆ ದುದ್ದಗೆರೆ ದೇವರ ಗಡಿ ಕೂಟ, ತಾಯೂರು ದೇವರ ಗಡಿ ಕೂಟ, ಸಿದ್ದರಾಮನಹುಂಡಿ ದೇವರ ಗಡಿ ಕೂಟ, ಕಾಳಿಸಿದ್ದನಹುಂಡಿ ದೇವರ ಗಡಿ ಕೂಟ, ಬಿದರಹಳ್ಳಿಹುಂಡಿ ಗ್ರಾಮದ ಗಡಿ ಕೂಟ ಹಾಗೂ ಗಡಿ ಗ್ರಾಮಗಳ ಕೂಟ ವರಕೋಡು ಗ್ರಾಮಕ್ಕೆ ಆಗಮಿಸಲಿದೆ.

ಅ.20ರಂದು ಮಧ್ಯಾಹ್ನ 12.30ಕ್ಕೆ ವರಕೋಡಿನ ಗುರುಮಠದ ಆವರಣದಲ್ಲಿರುವ ಬೀರೇಶ್ವರ ದೇವಾಲಯದಿಂದ ನಂದಿ ಧ್ವಜ, ಪೂಜಾ ಕುಣಿತ, ಬಸವ, ಸತ್ತಿಗೆ, ಸೂರಿಪಾನಿ, ಕಂಸಾಳೆ, ವೀರಗಾಸೆ ಕುಣಿತ, ಮಂಗಳವಾದ್ಯ, ತಮಟೆವಾದ್ಯ, ಬಿರುದು, ಬಾವಲಿ, ವಿವಿಧ ಜಾನಪದ ಕಲಾತಂಡಗಳೊಂದಿಗೆ ಬಾಯಿಗೆ ಬೀಗದಾರಿಗಳೊಂದಿಗೆ ಮೆರವಣಿಗೆಯಲ್ಲಿ ಸಾಗಿ ಬಡಗಲಹುಂಡಿ ಗ್ರಾಮದಲ್ಲಿರುವ ಬನ್ನಿಮಹಾಕಾಳೇಶ್ವರಿ ದೇವಾಲಯ ತಲುಪಲಿದ್ದಾರೆ. ನಂತರ ಬನ್ನಿಮಹಾಕಾಳೇಶ್ವರಿ ದೇವಾಲಯದಲ್ಲಿ ತಾಯಿಗೆ ಘಟ್ಟದ ಪೂಜೆ ನೆರವೇರಿಸಲಾಗುತ್ತದೆ. ಬಳಿಕ ವೀರಮಕ್ಕಳು ಕುಣಿತದ ಮೂಲಕ ದೇವಿಯನ್ನು ಆರಾಧಿಸಲಿದ್ದು, ಮಹಾಮಂಗಳಾರತಿ ನೆರವೇರಿದ ಬಳಿಕ ಭಕ್ತರು ಗ್ರಾಮಗಳಿಗೆ ವಾಪಸ್ಸಾಗಲಿದ್ದಾರೆ.

ಅ.21ರಂದು ಮಧ್ಯಾಹ್ನ 12ಕ್ಕೆ ವರಕೋಡು ಗ್ರಾಮದ ಕಲ್ಯಾಣಿ ಆವರಣದಿಂದ ಮಹಾಮಜ್ಜನದ ಮೆರವಣಿಗೆ ಹೊರಡಲಿದೆ. ಈ ಮೆರವಣಿಗೆಯಲ್ಲಿ ಬೀರೇಶ್ವರ, ಬನ್ನಿಮಹಾಕಾಳೇಶ್ವರಿ, ಬಸವೇಶ್ವರ ದೇವರ ಪೂಜಾ ಕುಣಿತ, ಕಂಸಾಳೆ, ಮಂಗಳವಾದ್ಯ, ತಮಟೆ ವಾದನ ಸೇರಿದಂತೆ ಇನ್ನಿತರ ಜಾನಪದ ಕಲಾತಂಡಗಳು ಪಾಲ್ಗೊಳ್ಳಲಿವೆ. ಪ್ರಮುಖವಾಗಿ ವರಕೋಡು ಗಡಿ ಗ್ರಾಮದ ಬಸವ, ವಿವಿಧ ಗ್ರಾಮಗಳ ಬಸವ ಮೆರವಣಿಗೆಯಲ್ಲಿ ಸಾಗಲಿದ್ದು. ವಿವಿಧ ಹರಕೆ ಹೊತ್ತ ಭಕ್ತರು ಬಸವನನ್ನು ದಾಟಿಸಿಕೊಳ್ಳಲು ದಾರಿಯುದ್ದಕ್ಕೂ ಮಲಗಿ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಲಿದ್ದಾರೆ. ಸಂಜೆ ವೇಳೆ ಮಜ್ಜನದ ಮೆರವಣಿಗೆ ಬೀರೇಶ್ವರ ದೇವಾಲಯ ತಲುಪಲಿದ್ದು, ಮಹಾಮಂಗಳಾರತಿ ಬಳಿಕ ಪ್ರಸಾದ ವಿನಿಯೋಗ ಜರುಗಲಿದೆ.

ಜಾತ್ರೆಯ ಕೊನೆ ದಿನವಾದ ಅ.22 ರಂದು ವರಕೋಡು ಗ್ರಾಮದಲ್ಲಿ ಬನ್ನಿಮಹಾಕಾಳೇಶ್ವರಿ ದೊಡ್ಡ ವಾಹನ ಮೆರವಣಿಗೆ ಜರುಗಲಿದ್ದು, ಮಧ್ಯಾಹ್ನದ ನಂತರ ಗುರು ಮಠದಲ್ಲಿ ಕೂಟ ವಿಸರ್ಜಿಸುವ ಮೂಲಕ ಜಾತ್ರೆಗೆ ತೆರೆ ಬೀಳಲಿದೆ. ಜಾತ್ರಾ ಮಹೋತ್ಸವದ ಅಂಗವಾಗಿ ನಗರ ಬಸ್ ನಿಲ್ದಾಣ ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸಲಾಗಿದ್ದು, ಅಪಾರ ಸಂಖ್ಯೆಯ ಭಕ್ತರು ಆಗಮಿಸಲಿದ್ದಾರೆ.

ಜ್ಞಾನದಿಂದ ಸಾಮಾಜಿಕ, ಆರ್ಥಿಕ ಸ್ವಾವಲಂಬನೆ ಸಾಧ್ಯ

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಭಿಮತ





ಮೈಸೂರು, ಅ. 18(ಆರ್‌ಕೆ)– ಶಿಕ್ಷಣ ಮತ್ತು ಜ್ಞಾನದಿಂದ ಸಮಾನತೆ, ಆರ್ಥಿಕ ಹಾಗೂ ಸಾಮಾಜಿಕ ಸ್ವಾವಲಂಬನೆ ಸಾಧ್ಯ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕ್ರಾಫರ್ಡ್ ಭವನದಲ್ಲಿ ಇಂದು ನಡೆದ ಮೈಸೂರು ವಿಶ್ವವಿದ್ಯಾನಿಲಯದ 103ನೇ ವಾರ್ಷಿಕ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವ್ಯಕ್ತಿಯ ಜೀವನ ಮತ್ತು ದೇಶದ ಅಭಿವೃದ್ಧಿಯಲ್ಲಿ ಶಿಕ್ಷಣ ಪ್ರಮುಖ ಪಾತ್ರ ವಹಿಸಲಿದೆ. ಸಾಂಸ್ಕೃತಿಕ ಪರಂಪರೆ, ನಾಗರಿಕತೆಗೂ ಅದು ಕಾರಣವಾಗಿದೆ ಎಂದು ನುಡಿದರು. 'ವಸುದೈವ ಕುಟುಂಬಕಂ' ತತ್ವದಂತೆ ಸಹಬಾಳ್ವೆ, ವಿಶ್ವ ಶಾಂತಿ, ಸಮೃದ್ಧಿಗೆ ಜ್ಞಾನ ಅತ್ಯಗತ್ಯ. ಶಿಕ್ಷಣ ಕ್ಷೇತ್ರ ಸಬಲವಾಗಿರುವುದರಿಂದಲೇ ನಮ್ಮ ದೇಶ ವಿಶ್ವಗುರು ಖ್ಯಾತಿಗೆ ಪಾತ್ರವಾಗಿದೆ ಎಂದ ರಾಜ್ಯಪಾಲರು, ದೇಶದ ಉಜ್ವಲ ಭವಿಷ್ಯ ನಮ್ಮ ವಿದ್ಯಾವಂತ ಯುವಕರ ಕೈಯ್ಯಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ವಿಶ್ವದಲ್ಲಿ ಭಾರತವನ್ನು ಮೇಲ್ಪಂಕ್ತಿಗೆ ಕೊಂಡೊಯ್ದಿದ್ದಾರೆ. ಆರ್ಥಿಕ ಸ್ಥಿತಿ ಉತ್ತಮಪಡಿಸಿದ್ದಾರೆಂಬ ಹೆಮ್ಮೆ ನಮ್ಮದಾಗಿದೆ ಎಂದು ನುಡಿದರು.

ಶ್ರೇಷ್ಠ ಭಾರತ ನಿರ್ಮಾಣದಲ್ಲಿ ಯುವ ಸಮೂಹದ ಪಾತ್ರ ಪ್ರಧಾನವಾದುದು. ಶಿಕ್ಷಣದ ಜೊತೆಗೆ ಕೌಶಲ್ಯಾಧಾರಿತ ತರಬೇತಿಯಿಂದ ಆರ್ಥಿಕ ಸ್ವಾವಲಂಬನೆಯಾಗಲಿದೆ. ಆದ್ದರಿಂದಲೇ ನಮ್ಮ ದೇಶ ಪ್ರಪಂಚದಲ್ಲಿ ಅಗ್ರಸ್ಥಾನ ಪಡೆದಿದೆ ಎಂದು ರಾಜ್ಯಪಾಲರು ಇದೇ ಸಂದರ್ಭ ತಿಳಿಸಿದರು.

ಮಹಿಳೆಯರದ್ದೇ ಮೇಲುಗೈ: ಮೈಸೂರು ವಿಶ್ವವಿದ್ಯಾನಿಲಯದ ಸಮಕುಲಾಧಿಪತಿಗಳಾದ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಮಾತನಾಡಿ, ಪದವಿ, ಪಿಹೆಚ್.ಡಿ ಪದವಿ, ಚಿನ್ನದ ಪದಕ ಹಾಗೂ ಬಹುಮಾನ ಪಡೆದವರ ಪೈಕಿ ಮಹಿಳಾ ಅಭ್ಯರ್ಥಿಗಳೇ ಹೆಚ್ಚಾಗಿರುವುದನ್ನು ಗಮನಿಸಿದರೆ, ಪುರುಷರಿಗಿಂತ ಮಹಿಳೆಯರೇ ಮೇಲುಗೈ ಸಾಧಿಸಿರುವುದು ಸ್ಪಷ್ಟವಾಗಿದೆ ಎಂದು ಶ್ಲಾಘಿಸಿದರು.

ಇಂದು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದು, ಮುಂದೊಂದು ದಿನ ಪುರುಷರು ಕೇವಲ ಅಡುಗೆ ಮನೆಗೆ ಸೀಮಿತವಾಗುವ ಕಾಲವೂ ಬರಬಹುದು ಎಂದ ಅವರು, ಈ ಹಿನ್ನೆಲೆಯಲ್ಲಿ ಪುರುಷರು ಜಾಗೃತರಾಗುವುದು ಒಳಿತು ಎಂದು ಹಾಸ್ಯಧಾಟಿಯಲ್ಲೇ ಮಾರ್ಮಿಕವಾಗಿ ನುಡಿದರು.

ಮೈಸೂರು ಅರಸರ ಪ್ರಾಂತ್ಯದ ಈ ವಿಶ್ವವಿದ್ಯಾನಿಲಯ ಶತಮಾನ ಪೂರೈಸಿದ್ದು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿ, ಸರ್ ಎಂ. ವಿಶ್ವೇಶ್ವರಯ್ಯರ ಕೊಡುಗೆಯನ್ನು ಮರೆಯುವಂತಿಲ್ಲ. 103ನೇ ಘಟಿಕೋತ್ಸವ ಸಂದರ್ಭ ಪತ್ರಿಕಾ ಕ್ಷೇತ್ರದಲ್ಲಿನ ಸಾಧನೆಗಾಗಿ ಕೆ.ಬಿ. ಗಣಪತಿ, ಆರೋಗ್ಯ ವಿಜ್ಞಾನ ಕ್ಷೇತ್ರದಲ್ಲಿ ಡಾ. ಪಿ.ಎಸ್. ಶಂಕರ್ ಹಾಗೂ ಕ್ರೀಡಾ ವಲಯದ ಸಾಧಕ ಜಾವಗಲ್ ಶ್ರೀನಾಥ್ ಅವರನ್ನು ಗುರ್ತಿಸಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುತ್ತಿರುವುದು ವಿಶ್ವವಿದ್ಯಾನಿಲಯದ ಘನತೆಯನ್ನು ಹೆಚ್ಚಿಸಿದೆ ಎಂದು ಅವರು ನುಡಿದರು.

ಮೈಸೂರು ವಿವಿ ಅಖಂಡತೆ ಚಿಂತನೆ: ಮಹಾರಾಣಿ ಕಲಾ ಮತ್ತು ವಿಜ್ಞಾನ ಕಾಲೇಜಿನ ಪಾರಂಪರಿಕ ಕಟ್ಟಡ ಸಂರಕ್ಷಿಸುವುದು, ಮೂಲ ಸೌಲಭ್ಯ ಒದಗಿಸಿ ಹಾಸ್ಟೆಲ್‌ಗಳಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿನಿಯರಿಗೆ ವಸತಿ ಸೌಲಭ್ಯ ಒದಗಿಸಲು ಸರ್ಕಾರ ನಿರ್ಧರಿಸಿದೆ ಎಂದ ಡಾ. ಸುಧಾಕರ್, ಪ್ರತೀ ಜಿಲ್ಲೆಯಲ್ಲೂ ವಿಶ್ವವಿದ್ಯಾನಿಲಯ ಸ್ಥಾಪಿಸಿರುವ ಕಾರಣ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ ಕಾಲೇಜುಗಳ ಸಂಖ್ಯೆ ಕಡಿತಗೊಂಡಿರುವುದರಿಂದ ಅದರ ಪೂರ್ವ ಸ್ಥಿತಿಯನ್ನೇ ಉಳಿಸಿ ಸದೃಢಗೊಳಿಸಲು ಮುಖ್ಯಮಂತ್ರಿಗಳು ಆಸಕ್ತಿ ತೋರಿದ್ದು, ಈ ಸಂಬಂಧ ಅಗತ್ಯ ಕ್ರಮ ವಹಿಸುತ್ತೇವೆ ಎಂದು ಇದೇ ಸಂದರ್ಭ ಭರವಸೆ ನೀಡಿದರು.

ಅತ್ಯಧಿಕ ಚಿನ್ನದ ಪದಕ ಬಾಚಿಕೊಂಡ ವಿದ್ಯಾರ್ಥಿನಿಯರು!



ಮೈಸೂರು,ಅ.18(ಜಿಎ)–ಮೈಸೂರು ವಿಶ್ವವಿದ್ಯಾನಿಲಯದ 103 ನೇ ಘಟಿಕೋತ್ಸವದಲ್ಲಿ ಅಧಿಕ ಚಿನ್ನದ ಪದಕ ಪಡೆಯುವ ಮೂಲಕ ವಿದ್ಯಾರ್ಥಿನಿಯರೇ ಚಿನ್ನದ ರಾಣಿಯರಾಗಿದ್ದಾರೆ.

ಒಟ್ಟು 32,240 ವಿದ್ಯಾರ್ಥಿಗಳು ನಾನಾ ಪದವಿ, ಪದಕ, ಪುರಸ್ಕಾರ ಪಿಎಚ್.ಡಿ ಪದವಿಗಳನ್ನು ಪಡೆದರು. ಅವರಲ್ಲಿ 20,189 ಮಹಿಳೆಯರು ಮತ್ತು 12,051 ಪುರುಷರು. ಈ ಪದವೀಧರರಲ್ಲಿ 539 ಅಭ್ಯರ್ಥಿಗಳಿಗೆ ಪಿಎಚ್.ಡಿ ಪ್ರದಾನ ಮಾಡಲಾಗಿದೆ. ಅದರಲ್ಲಿ ವಿವಿಧ ವಿಷಯದಲ್ಲಿ 248 ಮಹಿಳಾ ಅಭ್ಯರ್ಥಿಗಳು ಮತ್ತು 291 ಪುರುಷ ಅಭ್ಯರ್ಥಿಗಳು ಪಿಎಚ್.ಡಿ ಪಡೆದುಕೊಂಡರು. ಇವರಲ್ಲಿ 26,074 ಅಭ್ಯರ್ಥಿಗಳು ಸ್ನಾತಕೋತ್ತರ ಪದವಿಗಳನ್ನು ಪಡೆದುಕೊಂಡರು. ಅವರಲ್ಲಿ 16,142 ಮಹಿಳಾ ಅಭ್ಯರ್ಥಿಗಳಿದ್ದರು. 249 ಅಭ್ಯರ್ಥಿಗಳು 420 ಪದಕಗಳು ಮತ್ತು 275 ಬಹುಮಾನಗಳೊಂದಿಗೆ ಪಡೆದುಕೊಂಡರು. ಈ ಪ್ರಶಸ್ತಿ ಪುರಸ್ಕೃತರಲ್ಲಿ 180 ಮಹಿಳಾ ಅಭ್ಯರ್ಥಿಗಳು ಮೇಲುಗೈ ಸಾಧಿಸಿದ್ದಾರೆ.

ಸ್ನಾತಕೋತ್ತರ ಕನ್ನಡ ವಿಭಾಗದಲ್ಲಿ(ಎಂಎ) 15 ಚಿನ್ನದ ಪದಕಗಳು ಮತ್ತು 4 ನಗದು ಬಹುಮಾನಗಳ ಪಡೆದುಕೊಂಡ ಶ್ರೀವಿದ್ಯಾ, ಸ್ನಾತಕೋತ್ತರ ಸಂಸ್ಕೃತ ವಿಭಾಗದಲ್ಲಿ (ಎಂಎ) 10 ಚಿನ್ನದ ಪದಕ ಹಾಗೂ 2 ನಗದು ಬಹುಮಾನ ಪಡೆದಿರುವ ಜ್ಯೋತಿ ರಾಜಶೇಖರ ಹುಲ್ಲೊಳ್ಳಿ, ಸ್ನಾತಕೋತ್ತರ ರಸಾಯನಶಾಸ್ತ್ರ (ಎಂಎಸ್ಸಿ)ದಲ್ಲಿ 16 ಚಿನ್ನದ ಪದಕಗಳು ಮತ್ತು 2 ನಗದು ಬಹುಮಾನಗಳನ್ನು ಪಡೆದಿರುವ ಸ್ನೇಹಾ ಅಬ್ರಹಾಂ ಮತ್ತು ಎಂ.ಟೆಕ್‌ನಲ್ಲಿ (ನಗರ ಮತ್ತು ಪ್ರಾದೇಶಿಕ ಯೋಜನೆ) 16 ಚಿನ್ನದ ಪದಕಗಳನ್ನು ಮುಡಿಗೇರಿಸಿಕೊಂಡ ತನಿಷಾ ಚಂಗಪ್ಪ 'ಮೈಸೂರು ಮಿತ್ರ'ನೊಂದಿಗೆ ಸಂತಸ ಹಂಚಿಕೊಂಡರು.

ಶ್ರೀವಿದ್ಯಾ: ನಾನು ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ನಿವಾಸಿ. ಪಿಯುಸಿ ವ್ಯಾಸಂಗ ಮಾಡುವ ಸಂದರ್ಭದಲ್ಲಿ ತಂದೆಯನ್ನು ಕಳೆದುಕೊಂಡೆ. ನಂತರ ಡಿಗ್ರಿ ವೇಳೆ ತಾಯಿಯನ್ನೂ ಕಳೆದುಕೊಂಡೆ. ಈ ವೇಳೆ ಸಂಬಂಧಿಕರು ನನ್ನ ಕುಟುಂಬಕ್ಕೆ ಆಶ್ರಯ ನೀಡಿದರು. ಪಿರಿಯಾಪಟ್ಟಣದಲ್ಲಿ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಕೆ.ಎಸ್.ಪ್ರದೀಪ್ ಅವರೊಟ್ಟಿಗೆ ನನ್ನ ವಿವಾಹ ಮಾಡಿಕೊಟ್ಟರು. ಆದರೆ, ನಂತರವೂ ನನಗೆ ಓದುವ ಹಂಬಲವಿತ್ತು. ಡಾ. ತ್ರಿವೇಣಿ ಎಂಬುವರು ಸರ್ಕಾರಿ ಕಾಲೇಜಿನಲ್ಲಿ ಎಂ.ಎ ವ್ಯಾಸಂಗ ಮಾಡಲು ಅವಕಾಶ ಮಾಡಿಕೊಟ್ಟರು. ಇದಕ್ಕೆ ಪತಿ ಹಾಗೂ ಇಡೀ ಕುಟುಂಬದವರು ಸಹಕಾರ ನೀಡಿದ್ದರಿಂದ ಉತ್ತಮ ಫಲಿತಾಂಶ ಬಂದಿದೆ. ಈಗ ಶಾಲೆಯಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಸರ್ಕಾರಿ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಪೋಸ್ಟಿಂಗ್‌ಗಾಗಿ ಕಾಯುತ್ತಿದ್ದೇನೆ. ಹಾಗೇ ಪಿಎಚ್.ಡಿ ಮಾಡುವ ಆಸೆ ಇದೆ ಎಂದು ತಿಳಿಸಿದರು.

ಜ್ಯೋತಿ ರಾಜಶೇಖರ ಹುಲ್ಲೊಳ್ಳಿ : ಮೂಲತಃ ನಾನು ಬೆಳಗಾವಿ ಜಿಲ್ಲೆಯವಳು. ಶ್ರೀರಂಗಪಟ್ಟಣದ ಕಾವೇರಿ ಗುರುಕುಲದಲ್ಲಿ ಎಂ.ಎ.(ಸಂಸ್ಕೃತ) ವ್ಯಾಸಂಗ ಪೂರ್ಣಗೊಳಿಸಿ, ಪ್ರಸ್ತುತ ಅಲ್ಲಿನ ವಿದ್ಯಾರ್ಥಿಗಳಿಗೆ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದೇನೆ. ಪಿಎಚ್.ಡಿ ಮಾಡುವ ಆಸೆ ಇದೆ. ಆದರೆ, ಅದಕ್ಕೆ ಮೈಸೂರು ವಿವಿಯಲ್ಲಿ ಮಾರ್ಗದರ್ಶಕರು ಲಭ್ಯವಿಲ್ಲ.

ಸ್ನೇಹಾ ಅಬ್ರಹಾಂ : ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನವರಾಗಿದ್ದು, ಪ್ರಸ್ತುತ ಮೈಸೂರಲ್ಲಿ ವಾಸವಿದ್ದೇವೆ. ಡಾಕ್ಟರೇಟ್ ಪದವಿಯೊಂದಿಗೆ ತಮ್ಮ ಶೈಕ್ಷಣಿಕ ಪಯಣವನ್ನು ಮುಂದುವರಿಸುವ ಹಂಬಲವಿದೆ.

ತನಿಷಾ ಚಂಗಪ್ಪ : ನಾನು ಕೊಡಗಿನ ಗೋಣಿಕೊಪ್ಪ ನಿವಾಸಿಯಾಗಿದ್ದು, ಚೇಮಿರ ಕುಟುಂಬಸ್ಥರು. ತಂದೆ ಮಾಜಿ ಸೈನಿಕರಾಗಿದ್ದು, ಈಗ ಅವರು ಮೈಸೂರಲ್ಲಿ ಬೋರ್‌ವೆಲ್ ಕೊರೆಸುವ ಉದ್ಯಮ ನಡೆಸುತ್ತಿದ್ದಾರೆ. ಈಗ ಗುಜರಾತ್‌ನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಭವಿಷ್ಯದಲ್ಲಿ ಪಿಎಚ್.ಡಿ ಮಾಡುವ ಆಶಯವಿದೆ ಎಂದರು.

ಶಿಕ್ಷಣ, ಜ್ಞಾನದಿಂದ ನಮ್ಮ ಬದುಕಿನಲ್ಲಿ ಉನ್ನತ ಬದಲಾವಣೆ ಸಾಧ್ಯ

ಮೈಸೂರು ವಿವಿ ಘಟಿಕೋತ್ಸವದಲ್ಲಿ ಹಿರಿಯ ಪತ್ರಿಕೋದ್ಯಮಿ ಡಾ.ಕೆ.ಬಿ.ಗಣಪತಿ

ಮೈಸೂರು,ಅ.18(ಪಿಎಂ)– ಜ್ಞಾನಕ್ಕಿಂತ ಮಿಗಿಲಾದುದಿಲ್ಲ. ಅಂತಹ ಜ್ಞಾನವು ನಮ್ಮ ಜೀವನ, ನೆರೆಹೊರೆಯವರೊಂದಿಗೆ ನಮ್ಮ ಒಡನಾಟ ಹಾಗೂ ಪ್ರಕೃತಿ ಜೊತೆಗಿನ ನಮ್ಮ ಸಂಬಂಧದಲ್ಲಿ ಉನ್ನತ ಬದಲಾವಣೆ ತರಲಿದೆ. ಅದೇ ಶಿಕ್ಷಣ ಮತ್ತು ಜ್ಞಾನದ ಮಹತ್ವ ಹಾಗೂ ಪ್ರಾಮುಖ್ಯತೆಯಾಗಿದೆ ಎಂದು ಹಿರಿಯ ಪತ್ರಕರ್ತರೂ ಆದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ವಿವಿಯ 103ನೇ ಘಟಿಕೋತ್ಸವ ಪ್ರಯುಕ್ತ ಬುಧವಾರ ಮಧ್ಯಾಹ್ನದ ಅವಧಿಯಲ್ಲಿ ಹಮ್ಮಿಕೊಂಡಿದ್ದ ಪದವಿ ಪ್ರದಾನ ಸಮಾರಂಭದಲ್ಲಿ ಅತಿಥಿಯಾಗಿ ಪಾಲ್ಗೊಂಡು ಪಿಹೆಚ್.ಡಿ ಪದವಿ, ಚಿನ್ನದ ಪದಕ ಹಾಗೂ ನಗದು ಬಹುಮಾನಗಳನ್ನು ಪದವೀಧರರಿಗೆ ವಿತರಿಸಿ ಅವರು ಮಾತನಾಡಿದರು. ಪತ್ರಿಕಾರಂಗದಲ್ಲಿನ ನನ್ನ ಸೇವೆ ಮತ್ತು ಸಾಧನೆ ಪರಿಗಣಿಸಿ, ಗೌರವ ಡಾಕ್ಟರೇಟ್ ಪ್ರದಾನ ಮಾಡಿದ ಮೈಸೂರು ವಿವಿಗೆ ಧನ್ಯವಾದ ಅರ್ಪಿಸುತ್ತೇನೆ. ಅಲ್ಲದೆ, ಪದವಿ ಸ್ವೀಕರಿಸಿದ ಎಲ್ಲರನ್ನೂ ಅಭಿನಂದಿಸುತ್ತೇನೆ. ಇಂದು ಪದವಿ ಪಡೆದಿರುವ ಪದವೀಧರರಿಗೆ ಈ ದಿನ ಅವರ ಜೀವನದ ಮಹತ್ವದ ಘಟ್ಟ. ನಾನೂ ಇದೇ ಕ್ರಾಫರ್ಡ್ ಭವನದಲ್ಲಿ ಎರಡು ಪದವಿ ಸ್ವೀಕರಿಸಿದ ದಿನಗಳು ಇದೀಗ ನೆನಪಾಗುತ್ತಿದೆ.



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಬುಧವಾರ ನಡೆದ ವಿವಿಯ 103ನೇ ಘಟಿಕೋತ್ಸವದಲ್ಲಿ ಹಿರಿಯ ಪತ್ರಕರ್ತರೂ ಆದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ (ಕೆಬಿಜಿ) ಮಾತನಾಡಿದರು.

ನನ್ನ 'ಬ್ಯಾಚುಲರ್ ಆಫ್ ಆರ್ಟ್ಸ್' ಮತ್ತು 'ಬ್ಯಾಚುಲರ್ ಆಫ್ ಲಾ' ಈ ಎರಡು ಪದವಿ ಸ್ವೀಕರಿಸಿದ ದಿನಗಳಿಗೆ ಹೋಲಿಸಿದರೆ ಇಂದು ಸಾಕಷ್ಟು ಬದಲಾವಣೆಯಾಗಿದೆ ಎಂದು ಅವಿದ್ಯಾವಂತರಂತೆಯೇ ವಿದ್ಯಾವಂತರೂ ವರ್ತಿಸಿದರೆ, ಶಿಕ್ಷಣ ಪಡೆದು ಪ್ರಯೋಜನವೇನು ಎಂದು ವಿದ್ಯಾವಂತರು ಅವಲೋಕಿಸಬೇಕು. ವಿದ್ಯಾವಂತರು ಸಮಾಜ ಮತ್ತು ಪರಿಸರದಲ್ಲಿ ಉನ್ನತ ಬದಲಾವಣೆ ತರುವ ರೀತಿಯಲ್ಲಿ ನಡೆದುಕೊಳ್ಳಬೇಕು. ಆಗಲೇ ಪಡೆದ ಶಿಕ್ಷಣಕ್ಕೆ ಒಂದು ಅರ್ಥ ಬರಲು ಸಾಧ್ಯ ಎಂದು ತಿಳಿಸಿದ ಕೆಬಿಜಿ, ಬುದ್ಧನಿಗೆ ಸಂಬಂಧಿಸಿದ ನೀತಿ ಕಥೆಯೊಂದನ್ನು ಉಲ್ಲೇಖಿಸಿ, ನೆರೆದವರನ್ನು ಚಿಂತನೆಗೆ ಹಚ್ಚಿದರು. ಪ್ರತಿಯೊಬ್ಬರ ಜೀವನದಲ್ಲಿ ಅನೇಕ ತಿರುವುಗಳು ಎದುರಾಗುತ್ತವೆ. ಕೆಲವೊಮ್ಮೆ ಬಯಸಿದ್ದು ಶೀಘ್ರದಲ್ಲಿ ಈಡೇರಬಹುದು. ಮತ್ತೆ ಕೆಲವೊಮ್ಮೆ ತಡವಾಗಬಹುದು. ಅವಕಾಶ ಇಲ್ಲವೆಂದು ಎಂದೂ ಕೈಕಟ್ಟಿ ಕುಳಿತುಕೊಳ್ಳಬಾರದು. ಭರವಸೆಯ ನಾಳೆಯೊಂದು ಇದ್ದೇ ಇರುತ್ತದೆ. ಒಂದು ಬಾಗಿಲು ಮುಚ್ಚಿದರೆ ಅನೇಕ ಬಾಗಿಲುಗಳು ತೆರೆದುಕೊಳ್ಳುತ್ತವೆ ಎಂಬ ಆಶಾಭಾವನೆ ಹೊಂದಿರಬೇಕು. ಹಾಗಾಗಿ ನಿರಾಸೆ ಎಂದಿಗೂ ಆಗಬಾರದು ಎಂದು ಪ್ರೇರಕ ನುಡಿಗಳನ್ನಾಡಿದರು.

ಬ್ರಿಟಿಷ್ ರಾಜಕಾರಣಿ, ಮುತ್ಸದ್ದಿ, ವಾಗ್ಮಿ, ಇತಿಹಾಸಕಾರ ವಿನ್‌ಸ್ಟನ್ ಚರ್ಚಿಲ್ ಶಾಲೆಯೊಂದರಲ್ಲಿ ಮಕ್ಕಳನ್ನು ಉದ್ದೇಶಿಸಿ ಮಾಡಿದ ಪ್ರೇರೇಪಣಾ ಭಾಷಣವನ್ನು ಉಲ್ಲೇಖಿಸಿದ ಅವರು, 'ನನ್ನ ಏಕೈಕ ಸಲಹೆ ಎಂದರೆ, ಎಂದಿಗೂ ಹತಾಶರಾಗಬೇಡಿ, ಎಂದಿಗೂ ಹತಾಶರಾಗಬೇಡಿ' ಎಂದು ಅದನ್ನೇ ಪುನರುಚ್ಚರಿಸುತ್ತಾ ವಿದ್ಯಾರ್ಥಿಗಳ ಉದ್ದೇಶಿಸಿ ಅತ್ಯಂತ ಚುಟುಕು ಭಾಷಣ ಮಾಡಿದ್ದರು. ಇದು ಅವರ ಅತ್ಯಂತ ಪ್ರಸಿದ್ಧ ಭಾಷಣವಾಗಿದೆ. ಅವರ ಈ ಮಾತಿನ ತಾತ್ಪರ್ಯವೆಂದರೆ ಎಷ್ಟೇ ಸಂಕಷ್ಟದ ಸನ್ನಿವೇಶ ಎದುರಾದರೂ ಧೈರ್ಯ ಕಳೆದುಕೊಳ್ಳಬಾರದು, ಪ್ರಯತ್ನಶೀಲರಾಗಬೇಕು ಎಂಬುದಾಗಿದೆ ಎಂದು ಹೇಳಿದರು.

ವಿದ್ಯೆಯ ಸಾರವೇ ವಿಚಾರವಂತಿಕೆ!

ಮೈಸೂರು,ಅ.18(ಪಿಎಂ)– ವಿದ್ಯಾವಂತರು ಸಮಾಜದಲ್ಲಿ ಉನ್ನತ ಬದಲಾವಣೆ ತರುವ ರೀತಿಯಲ್ಲಿ ನಡೆದುಕೊಳ್ಳಬೇಕು. ಇಲ್ಲವಾದರೆ ಮುಗ್ಧರಾದ ಅವಿದ್ಯಾವಂತರಿಗೂ ವಿದ್ಯಾವಂತರಿಗೂ ವ್ಯತ್ಯಾಸವೇ ಇರುವುದಿಲ್ಲ ಎಂದು ತಿಳಿಸಿದ ಕೆಬಿಜಿ, ಇದಕ್ಕೆ ಪೂರಕವಾಗಿ ಬುದ್ಧನಿಗೆ ಸಂಬಂಧಿಸಿದ ನೀತಿ ಕಥೆಯೊಂದನ್ನು ಹೇಳಿ, ಸಭಿಕರ ಗಮನ ಸೆಳೆದರು. ಒಂದು ದಿನ ಬುದ್ಧ ತಾನಿರುವ ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತೆರಳುತ್ತಿದ್ದ. ಜೊತೆಗೆ ಬುದ್ಧನ ಶಿಷ್ಯರೂ ಇದ್ದರು. ಕಮಲದ ಹೂಗಳನ್ನು ಹೊಂದಿರುವ ನೀರಿನ ಕೊಳವೊಂದರಲ್ಲಿ ಮುಗ್ಧ ಬುಡಕಟ್ಟು ಜನರು ನೀರು ಕುಡಿದು, ಬಳಿಕ ಕೊಳದಲ್ಲಿದ್ದ ಕಮಲದ ಹೂಗಳನ್ನು ಕಿತ್ತುಕೊಂಡು, ಅವುಗಳ ಸೌಂದರ್ಯ ಆಸ್ವಾದಿಸುವ ಅರಿವೂ ಇಲ್ಲದೆ ಬಳಿಕ ಅವುಗಳನ್ನು ಕಿವುಚಿ ಬೀಸಾಡಿ ಹೋಗುತ್ತಿದ್ದರು. ಇದೇ ಕೊಳದ ಬಳಿಗೆ ಬಂದ ಬುದ್ಧನು, ಬಾಯಾರಿಕೆಯಿಂದ ನೀರು ಕುಡಿಯಲು ನಿರ್ಧರಿಸಿದನು. ಅದಕ್ಕೂ ಮೊದಲು ಸುಂದರವಾದ ಕಮಲದ ಹೂವುಗಳನ್ನು ನೋಡಿ ಅವುಗಳನ್ನು ಕೀಳಲು ಕೈ ಚಾಚುತ್ತಿದ್ದಂತೆ 'ಹೂ ಕೀಳಬಾರದು' ಎಂದು ಅಶರೀರವಾಣಿಯೊಂದು ಹೇಳಿತು. ಆಗ ಬುದ್ಧ ಪ್ರಶ್ನಿಸಿದ, ಆ ಬುಡಕಟ್ಟು ಜನರು ಹೂಗಳನ್ನು ಕಿತ್ತರೂ ಅವರಿಗೆ ಏನೂ ಹೇಳದೇ ನನಗೇಕೆ ಹೇಳುತ್ತೀರುವೆ ಎಂದು ಪ್ರಶ್ನಿಸಿದ.

ಆ ಮುಗ್ಧ ಜನರಿಗೆ ನಿನ್ನನ್ನು ಹೋಲಿಸಲು ಸಾಧ್ಯವಿಲ್ಲ. ಅವರಿಗೆ ತಾವು ಏನು ಮಾಡುತ್ತಿದ್ದೇವೆ ಎಂಬ ಅರಿವಿಲ್ಲ. ಆದರೆ ನೀನು ಬುದ್ಧ, ಪ್ರಬುದ್ಧ. ನಿನಗೂ, ಅವರಿಗೂ ವ್ಯತ್ಯಾಸವಿದೆ ಎಂದು ಅಶರೀರವಾಣಿ ಹೇಳುತ್ತದೆ. ಆಗ ಬುದ್ಧ ಹೂ ಕೀಳದೇ ನೀರು ಕುಡಿದು ತೆರಳುತ್ತಾನೆ. ಇಲ್ಲಿ ನೀತಿ ಎಂದರೆ ; ವಿದ್ಯಾವಂತರು ವಿಚಾರವಂತರು, ಅರಿವುಳ್ಳವರು ಆಗಿರಬೇಕು. ಇಲ್ಲವಾದರೆ ಪಡೆದ ಶಿಕ್ಷಣ ಸಾರ್ಥಕವಾಗದು ಎಂಬುದಾಗಿದೆ ಎಂದು ಕೆಬಿಜಿ ತಿಳಿಸಿದರು.

ಮಕ್ಕಳಿಗಾಗಿ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ

ಮೈಸೂರು, ಅ. 18– ದಸರಾ ಮಹೋತ್ಸವದ ಪ್ರಯುಕ್ತ ಮಕ್ಕಳಿಗಾಗಿ ಏರ್ಪಡಿಸಿದ್ದ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು. ಈ ವೇಳೆ ಶಾಸಕ ತನ್ವೀರ್ ಸೇಠ್, ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್, ಶಾಸಕ ಕೆ. ಹರೀಶ್ ಗೌಡ, ಮೇಯರ್ ಶಿವಕುಮಾರ್, ಉಪಮೇಯರ್ ಶ್ರೀಮತಿ ರೂಪ, ಉಪ ಸಮಿತಿಯ ಅಧ್ಯಕ್ಷೆ ಹೇಮಲತಾ, ಉಪಾಧ್ಯಕ್ಷರಾದ ಜಯಚಂದ್ರ ಹಾಗೂ ಮಹಮ್ಮದ್ ಅಕ್ಬರ್ ಅಲಿ, ಸದಸ್ಯರು, ಉಪವಿಶೇಷಾಧಿಕಾರಿ ಎ. ದೇವರಾಜು, ಕಾರ್ಯಾಧ್ಯಕ್ಷರಾದ ಕು. ನಾಜಿಯಾ ಸುಲ್ತಾನ ಉಪಸ್ಥಿತರಿದ್ದರು.

ಗೌರವ ಡಾಕ್ಟರೇಟ್ ಪದವಿ ಪ್ರದಾನ

ಮೂರನೇ ಪುಟದಿಂದ

ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿಗೆ ಭಾಜನರಾಗಿರುವ ಮೈಸೂರಿಗರೇ ಆದ ಅಂತರರಾಷ್ಟ್ರೀಯ ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಅವರು ಬೋರ್ಡ್ ಆಫ್ ಕಂಟ್ರೋಲ್ ಫಾರ್ ಕ್ರಿಕೆಟ್ ಇನ್ ಇಂಡಿಯಾ (ಬಿಸಿಸಿಐ)ದ ಪೂರ್ವ ನಿಗದಿತ ಕಾರ್ಯದಲ್ಲಿ ನಿರತರಾಗಿರುವುದರಿಂದ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಲಿಲ್ಲ.

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಓ) ಮಾಜಿ ಮಹಾನಿರ್ದೇಶಕ ಪದ್ಮ ವಿಭೂಷಣ ಡಾ.ವಾಸುದೇವ ಕೆ.ಆತ್ರೆ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಘಟಿಕೋತ್ಸವ ಭಾಷಣ ಮಾಡಿ ಮೈಸೂರು ವಿಶ್ವವಿದ್ಯಾನಿಲಯದ ಕಾರ್ಯವೈಖರಿಯನ್ನು ಪ್ರಶಂಸಿಸಿದರು.

ಸಮಕುಲಾಧಿಪತಿಯಾದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಕುಲಸಚಿವೆ ವಿ.ಆರ್. ಶೈಲಜಾ, ಪರೀಕ್ಷಾಂಗ ಕುಲಸಚಿವ ಪ್ರೊ. ಕೆ.ಎಂ. ಮಹದೇವನ್ ಸಮಾರಂಭದಲ್ಲಿ ಉಪಸ್ಥಿತರಿದ್ದರು.

20,189 ಮಹಿಳೆಯರೂ ಸೇರಿದಂತೆ 32,240 ಅಭ್ಯರ್ಥಿಗಳಿಗೆ ವಿವಿಧ ಪದವಿ, 248 ಮಹಿಳೆಯರು ಸೇರಿದಂತೆ 539 ಅಭ್ಯರ್ಥಿಗಳಿಗೆ ವಿವಿಧ ವಿಷಯಗಳಲ್ಲಿ ಪಿಹೆಚ್.ಡಿ ಪದವಿ, 420 ಪದಕ, 275 ಬಹುಮಾನಗಳನ್ನು ಘಟಿಕೋತ್ಸವದಲ್ಲಿ ಪ್ರದಾನ ಮಾಡಲಾಯಿತು, 3799 ಮಹಿಳೆಯರು ಮತ್ತು 1828 ಪುರುಷರು ಸೇರಿ 5627 ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿ ಹಾಗೂ 16,142 ಮಹಿಳೆಯರು ಸೇರಿ 26,074 ಅಭ್ಯರ್ಥಿಗಳು ಸ್ನಾತಕ ಪದವಿಗಳನ್ನು ಸ್ವೀಕರಿಸಿದರು. ಅತೀ ಹೆಚ್ಚು ಅಂಕ ಗಳಿಸಿದ ಪದವೀಧರರಿಗೆ ಚಿನ್ನದ ಪದಕ, ನಗದು ಬಹುಮಾನಗಳನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಪ್ರದಾನ ಮಾಡಿ, ಶುಭ ಕೋರಿದರು.

ಮೈಸೂರು ವಿಶ್ವವಿದ್ಯಾನಿಲಯ ಹಣಕಾಸು ಅಧಿಕಾರಿ ಕೆ.ಎಸ್.ರೇಖಾ, ವಿಶ್ರಾಂತ ಕುಲಪತಿ ಪ್ರೊ. ಜಿ.ಹೇಮಂತ್‌ಕುಮಾರ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ, ಪ್ರಾಧ್ಯಾಪಕರು, ಗಣ್ಯರು, ಶೈಕ್ಷಣಿಕ ಮಂಡಳಿ ಮತ್ತು ಸಿಂಡಿಕೇಟ್ ಸದಸ್ಯರು ಘಟಿಕೋತ್ಸವದಲ್ಲಿ ಉಪಸ್ಥಿತರಿದ್ದರು.

ಪ್ರೊ.ಎನ್.ಕೆ.ಲೋಕನಾಥ್ ಅವರು ಗಣ್ಯರನ್ನು ಸ್ವಾಗತಿಸಿ, ಗೌರವ ಡಾಕ್ಟರೇಟ್ ಪದವಿ ಸ್ವೀಕರಿಸಿದ ನಾಡೋಜ ಡಾ.ಪಿ.ಎಸ್.ಶಂಕರ್, ಹಿರಿಯ ಪತ್ರಿಕೋದ್ಯಮಿ ಕೆ.ಬಿ.ಗಣಪತಿ ಹಾಗೂ ಡಿ–ಲಿಟ್ ಪದವಿಗೆ ಭಾಜನರಾಗಿರುವ ಅಂತರರಾಷ್ಟ್ರೀಯ ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಅವರ ಪರಿಚಯ ಮಾಡಿಕೊಟ್ಟರು. ವಿಶ್ವವಿದ್ಯಾನಿಲಯದ ಮಾಜಿ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ ಅವರು ಕಾರ್ಯಕ್ರಮ ನಿರೂಪಿಸಿದರು. ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಎಂ.ಮಹದೇವನ್ ಕೊನೆಗೆ ವಂದಿಸಿದರು.

ಕಲಿತ ವಿದ್ಯೆಯಿಂದ ಸಮಾಜಕ್ಕೆ ಕಿಂಚಿತ್ತಾದರೂ ಸೇವೆ ಸಲ್ಲಿಸಿ

ನೂತನ ಪದವೀಧರರಿಗೆ ವಿಶ್ರಾಂತ ವೈದ್ಯಕೀಯ ಪ್ರಾಧ್ಯಾಪಕ ನಾಡೋಜ ಡಾ.ಪಿ.ಎಸ್.ಶಂಕರ್ ಕಿವಿಮಾತು

ಮೈಸೂರು,ಅ.18(ಪಿಎಂ)–ಕಲಿತ ವಿದ್ಯೆಯಿಂದ ದೇಶ ಮತ್ತು ಸಮಾಜಕ್ಕೆ ಕಿಂಚಿತ್ತಾದರೂ ಸೇವೆ ಸಲ್ಲಿಸಬೇಕು ಎಂದು ಮೈಸೂರು ವಿವಿಯ ನೂತನ ಪದವೀಧರರಿಗೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ವಿಶ್ರಾಂತ ವೈದ್ಯಕೀಯ ಪ್ರಾಧ್ಯಾಪಕ ನಾಡೋಜ ಡಾ.ಪಿ.ಎಸ್.ಶಂಕರ್ ಕಿವಿಮಾತು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ವಿವಿಯ 103ನೇ ಘಟಿಕೋತ್ಸವ ಪ್ರಯುಕ್ತ ಬುಧವಾರ ಮಧ್ಯಾಹ್ನದ ಅವಧಿಯಲ್ಲಿ ಹಮ್ಮಿಕೊಂಡಿದ್ದ ಪದವಿ ಪ್ರದಾನ ಸಮಾರಂಭದಲ್ಲಿ ಅತಿಥಿಯಾಗಿ ಪಾಲ್ಗೊಂಡು ಪಿಹೆಚ್.ಡಿ ಪದವಿ, ಚಿನ್ನದ ಪದಕ ಹಾಗೂ ನಗದು ಬಹುಮಾನಗಳನ್ನು ಪದವೀಧರರಿಗೆ ವಿತರಿಸಿ ಅವರು ಮಾತನಾಡಿದರು. ವಿಜ್ಞಾನದ ಬಗ್ಗೆ ವಿಚಾರ ಮಾಡಿದರೆ ಮುಂದೆ ಏನಾಗುತ್ತದೆ ಎಂದು ಕುತೂಹಲದಿಂದ ಚಿಂತನೆ ಮಾಡಿದ ಎಷ್ಟೊ ಪರಿಕಲ್ಪನೆಗಳು ಭವಿಷ್ಯದಲ್ಲಿ ನಿಜರೂಪಕ್ಕೆ ಬಂದಿವೆ. ವಿಜ್ಞಾನಿ ಕಂಡಿದ್ದ ಕನಸು ನನಸಾಗಿವೆ. ಅಸಾಧ್ಯ ಎಂದುಕೊಂಡಿದ್ದವು ಸಾಧ್ಯವಾಗಿವೆ. ಕೇವಲ 10ರಿಂದ 20 ವರ್ಷಗಳ ಹಿಂದೆ ಇದ್ದಂತಹ ಸ್ಥಿತಿಗಳು ಇಂದು ಸಂಪೂರ್ಣವಾಗಿ ಬದಲಾಗಿವೆ. ಇದಕ್ಕೆಲ್ಲಾ ವಿಜ್ಞಾನಗಳು ಕಾರಣ. ಅವರ ಕೊಡುಗೆ ಅಪೂರ್ವವಾದುದು ಎಂದರು.

ಎಷ್ಟೊ ವಿಜ್ಞಾನಿಗಳು ತಮ್ಮ ಭಾಷೆಯಲ್ಲೇ ಸಂಶೋಧನೆ ಮಾಡಿದ್ದಾರೆ. ಉದಾಹರಣೆಗೆ 'ಎಕ್ಸ್ ರೇ' ಅನ್ನು 1890ರ ವೇಳೆಯಲ್ಲಿ ಜರ್ಮನಿಯ ವಿಲ್‌ಹೆಲ್ಮ್ ರಾಂಟ್‌ಜೆನ್ ಕಂಡುಹಿಡಿದು ತನ್ನ ಜರ್ಮನಿ ಭಾಷೆಯಲ್ಲೇ ಅದರ ಕಾರ್ಯವೈಖರಿ ಬಗ್ಗೆ ದಾಖಲು ಮಾಡಿದನು. ಎಕ್ಸ್‌ರೇ ಇಡೀ ಜಗತ್ತಿಗೆ ಅತ್ಯಂತ ಉಪಯುಕ್ತವಾಯಿತು.



ಇದನ್ನು ಕಂಡುಹಿಡಿದ ಎರಡೇ ವರ್ಷಗಳಲ್ಲಿ ಇದರ ಉಪಯುಕ್ತತೆ ಬಗ್ಗೆ ನೂರಾರು ಲೇಖನಗಳು, ಪುಸ್ತಕಗಳು ಪ್ರಕಟಗೊಂಡವು. ಮುಂದೆ ಈ ವಿಜ್ಞಾನಿಯ ಹೆಸರಿನಲ್ಲೇ 'ರಾಜೆನಾಲಜಿ' ಎಂಬ ವಿಜ್ಞಾನ ಬಂದಿತು ಎಂದು ವಿವರಿಸಿದರು.

ವಿಜ್ಞಾನಕ್ಕೆ ಯಾವುದೇ ಗಡಿಯಿಲ್ಲ: ಜರ್ಮನಿಯ ಮತ್ತೊಬ್ಬ ವಿಜ್ಞಾನಿ ಡಾ.ರಾಬರ್ಟ್ ಕೋಚ್ 1882ರಲ್ಲಿ ಕ್ಷಯರೋಗಕ್ಕೆ ಕಾರಣವಾದ ಬ್ಯಾಕ್ಟೀರಿಯಾವನ್ನು ಕಂಡುಹಿಡಿದನು. ಇದು ಈ ರೋಗದ ವಿರುದ್ಧದ ಹೋರಾಟದಲ್ಲಿ ಗಮನಾರ್ಹ ಪ್ರಗತಿಗೆ ಕಾರಣವಾಯಿತು. ತನ್ನ ಜರ್ಮನ್ ಭಾಷೆಯಲ್ಲಿ ಈ ವಿಚಾರ ಮಂಡಿಸಿದನು. ಅಂದರೆ ವಿಜ್ಞಾನಿಯ ಶೋಧಕ್ಕೆ ಭಾಷೆಯೂ ಸೇರಿದಂತೆ ಯಾವುದೇ ಗಡಿ ಇಲ್ಲ ಎಂದು ಹೇಳಿದರು.

ಮಾತೃಭಾಷೆಯಲ್ಲೇ ಮಾಡಿದ ಈ ರೀತಿಯ ಸಂಶೋಧನೆಗಳಿಂದ ನಮ್ಮ ದೇಶದಲ್ಲೂ ಆಯಾಯ ಪ್ರಾದೇಶಿಕ ಭಾಷೆಯಲ್ಲೇ ಸಂಶೋಧನೆ ಏಕೆ ಮಾಡಬಾರದು ಎಂಬ ಕೂಗು ಆಗಾಗ್ಗೆ ಕೇಳಿ ಬರುತ್ತವೆ. ಆದರೆ ಮೊದಲಿನಿಂದಲೂ ಪ್ರಾದೇಶಿಕ ಭಾಷೆಯ ಸಂಶೋಧನೆಗೆ ಪ್ರೋತ್ಸಾಹ ಕೊಟ್ಟಿಲ್ಲ. ಇತ್ತೀಚೆಗೆ ಅಲ್ಲಲ್ಲಿ ಪ್ರೋತ್ಸಾಹ ಒಂದಿಷ್ಟು ದೊರೆಯುತ್ತಿದೆ. ಆದರೆ ಅದು ನಿರೀಕ್ಷಿತ ಮಟ್ಟದಲ್ಲಿ ಇಲ್ಲ. ವೈದ್ಯಕೀಯ ಕ್ಷೇತ್ರದಲ್ಲೇ ಉದಾಹರಣೆ ತೆಗೆದುಕೊಂಡರೂ ವೈದ್ಯಕೀಯ ವಿಷಯವನ್ನು ಕನ್ನಡದಲ್ಲಿ ಕಲಿಸಬೇಕೆಂಬ ಕೂಗು ಕೂಡ ಇದೆ. ಆದರೆ ಈ ವಿಷಯದಲ್ಲಿ ತಳದಲ್ಲೇ ಕನ್ನಡವಿಲ್ಲದೆ, ಉನ್ನತ ಮಟ್ಟದಲ್ಲಿ ಹೇಗೆ ಕಲಿಸಲು ಸಾಧ್ಯ, ಕಲಿಸುವವರಾದರೂ ಯಾರಿದ್ದಾರೆ ಎಂಬ ಪ್ರಶ್ನೆ ಇದೆ. ಹೀಗೆ ನಮ್ಮ ದೇಶದಲ್ಲಿ ಇರುವ ಸಮಸ್ಯೆಗಳು ಅನೇಕ ಎಂದು ವಿಶ್ಲೇಷಿಸಿದರು.

ನೋಬೆಲ್ ಪ್ರಶಸ್ತಿ ಪಡೆದವರು ಹೆಚ್ಚಿನ ಶ್ರಮ ವಹಿಸಿರುತ್ತಾರೆ. ಅವರಿಗೆ ಪ್ರಾರಂಭದಲ್ಲಿ ಯಾವುದೇ ಸಹಾಯ ದೊರೆತಿರುವುದಿಲ್ಲ. ಇನ್ನು ನೋಬೆಲ್ ಪ್ರಶಸ್ತಿ ಪಡೆದ ಮಹಿಳೆಯರ ಪಟ್ಟಿ ನೋಡಿದರೆ ತೀರಾ ವಿರಳ ಎಂಬ ಅಂಶ ತಿಳಿಯುತ್ತದೆ. ಪ್ರಶಸ್ತಿ ಪ್ರಾರಂಭವಾಗಿ 120 ವರ್ಷಗಳಾಗಿದ್ದು, ಭೌತಶಾಸ್ತ್ರದಲ್ಲಿ ಕೇವಲ ನಾಲ್ಕೇ ಮಂದಿ ಮಹಿಳೆಯರಿಗೆ ನೋಬೆಲ್ ಪ್ರಶಸ್ತಿ ಸಂದಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಕೇವಲ 13 ಮಂದಿ ಮಹಿಳೆಯರಿಗೆ ನೋಬೆಲ್ ಸಿಕ್ಕಿದೆ. ನಮ್ಮ ದೇಶದಲ್ಲಿ ಮಾತ್ರವಲ್ಲ ಬೇರೆಡೆಯೂ ಮಹಿಳೆಯರಿಗೆ ಸರಿಯಾದ ಪ್ರೋತ್ಸಾಹ ದೊರೆತಿಲ್ಲ ಎಂದರು.

ನಮ್ಮ ದೇಶದಲ್ಲಿ 10 ಸಾಧಕ ಮಹಿಳೆಯರ ಹೆಸರಿನಲ್ಲಿ ಅವರವರ ಹೆಸರುಗಳಲ್ಲೇ ಸಂಸ್ಥೆಗಳನ್ನು ಸ್ಥಾಪಿಸಬೇಕೆಂದು ಭಾರತ ಸರ್ಕಾರ ಮುಂದಾದಾಗ ವಿರೋಧ ವ್ಯಕ್ತವಾಯಿತು ಎಂದು ಬೇಸರ ವ್ಯಕ್ತಪಡಿಸಿದರಲ್ಲದೆ, ಚಂದ್ರಯಾನ, ಆದಿತ್ಯಯಾನ ಕಾರ್ಯಾಚರಣೆಯಲ್ಲಿ ತೊಡಗಿರುವ ನಮ್ಮ ವಿಜ್ಞಾನಿಗಳು ಸಣ್ಣ ಸಣ್ಣ ವಿದ್ಯಾಸಂಸ್ಥೆಗಳಲ್ಲೇ ಪದವಿ ಪಡೆದವರು. ಅವರು ತಮ್ಮ ಪರಿಶ್ರಮದಿಂದ ಯಶಸ್ಸು ಪಡೆದಿದ್ದಾರೆ ಎಂದು ತಿಳಿಸಿದರು.

ಮೈಸೂರು ಮಿತ್ರ ಗುರುವಾರ 19 ಅಕ್ಟೋಬರ್ 2023



ತೀರ್ಥ ಸ್ವರೂಪಿಣಿಯಾಗಿ ದರ್ಶನ ನೀಡಿದ ಕಾವೇರಿ ಮಾತೆ

ಭಕ್ತರ ಜಯಘೋಷ, ಹರ್ಷೋದ್ಘಾರ, ಬಿಗಿ ಪೊಲೀಸ್ ಬಂದೋಬಸ್ತ್

ಮಡಿಕೇರಿ,ಅ.18– ಕೊಡಗಿನ ಕುಲದೇವಿ, ದಕ್ಷಿಣದ ಗಂಗೆ ಜೀವನದಿ ಕಾವೇರಿಯ ಉಗಮ ಸ್ಥಾನ ತಲಕಾವೇರಿಯಲ್ಲಿ ನಿಗದಿಗಿಂತ ಒಂದು ನಿಮಿಷ ಮುಂಚಿತವಾಗಿ ಬುಧವಾರ ನಸುಕಿನ 1 ಗಂಟೆ 26 ನಿಮಿಷದಲ್ಲಿ ಕರ್ಕಾಟಕ ಲಗ್ನದಲ್ಲಿ ಭಕ್ತರ ಹರ್ಷೋದ್ಗಾರದ ನಡುವೆ ಪವಿತ್ರ ತೀರ್ಥೋದ್ಭವವಾಯಿತು. ಭಕ್ತರ ಜಯಘೋಷ, ವೈದಿಕ ತಂಡದವರಿಂದ ವೇದ ಮಂತ್ರಗಳ ಪಠಣ, ವಿವಿಧ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಪವಿತ್ರ ಕುಂಡಿಕೆಯಲ್ಲಿ ಮಾತೆ ಕಾವೇರಿ ತೀರ್ಥ ಸ್ವರೂಪಿಣಿಯಾಗಿ ದರ್ಶನ ನೀಡುವ ಮೂಲಕ ಭಕ್ತ ಸಮೂಹವನ್ನು ಪಾವನಗೊಳಿಸಿದಳು. ಈ ಸುಂದರ್ಭ ಜೈ ಜೈ ಮಾತಾ ಕಾವೇರಿ ಮಾತಾ, ಕಾವೇರಮ್ಮನ ಪಾದಾರವಿಂದಕ್ಕೆ ಗೋವಿಂದಾ ಎಂಬ ಘೋಷಣೆಗಳು ಮೊಳಗಿದವು.

ತಲಕಾವೇರಿಯ ತೀರ್ಥ ಕುಂಡಿಕೆಯಲ್ಲಿ ಅರ್ಚಕರಾದ ರವಿರಾಜ್ ಮತ್ತು ಗುರುರಾಜ್ ನೇತೃತ್ವದಲ್ಲಿ 7 ಅರ್ಚಕರ ತಂಡ ಅ.17ರ ಬೆಳಗ್ಗಿನಿಂದಲೇ ವಿವಿಧ ಪೂಜಾ ವಿಧಿಗಳನ್ನು ನೆರವೇರಿಸಿದರು. ರಾತ್ರಿ 10 ಗಂಟೆಯಿಂದ ವಿಶೇಷ ಪೂಜೆ ಆರಂಭಿಸಿದ ಅರ್ಚಕ ವೃಂದ ಮಂತ್ರ ಘೋಷಗಳೊಂದಿಗೆ ಕಾವೇರಿ ಮಾತೆಗೆ ಪೂಜೆ ಸಲ್ಲಿಸಿದರು. ತೀರ್ಥೋದ್ಭವದ ಸಂದರ್ಭ ಭಕ್ತರ ಒತ್ತಡವನ್ನು ತಡೆಯುವ ಸಲುವಾಗಿ ಪವಿತ್ರ ಕೊಳ ಮತ್ತು ಕುಂಡಿಕೆಯ ಸುತ್ತಲೂ ಬಿದಿರು ಮತ್ತು ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿತ್ತು. ಮಾತ್ರವಲ್ಲದೇ ಅಗತ್ಯಕ್ಕೆ ತಕ್ಕಂತೆ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ ಭದ್ರತಾ ಕ್ರಮ ಕೈಗೊಳ್ಳಲಾಗಿತ್ತು. ತೀರ್ಥೋದ್ಭವಕ್ಕೆ ಕ್ಷಣಗಣನೆ ಆರಂಭವಾಗುತ್ತಿದ್ದಂತೆಯೇ ಪವಿತ್ರ ಕೊಳದ ಸುತ್ತಲು ಭಕ್ತರ ಸಂಖ್ಯೆ ಏರತೊಡಗಿತು. ಇನ್ನೇನು ತೀರ್ಥೋದ್ಭವ ಸನ್ನಿಹಿತವಾಗುತ್ತಿದ್ದಂತೆಯೇ ಏಕಾಏಕಿ ಭಕ್ತ ಸಮೂಹ ಪೊಲೀಸ್ ಭದ್ರಕೋಟೆಯನ್ನು ಭೇದಿಸಿ ಪವಿತ್ರ ಕೊಳಕ್ಕೆ ಧುಮುಕುವ ಮೂಲಕ ತಮ್ಮ ಭಕ್ತಿ ಪ್ರದರ್ಶಿಸಿದರು.

ಜಿಲ್ಲೆ ಸೇರಿದಂತೆ ಮೈಸೂರು, ಮಂಡ್ಯ, ಮದ್ದೂರು, ಬೆಂಗಳೂರು, ನೆರೆಯ ಕೇರಳ, ತಮಿಳುನಾಡು ಸೇರಿದಂತೆ ವಿವಿಧ ಕಡೆಗಳಿಂದ ಸಹಸ್ರಾರು ಭಕ್ತರು ಪವಿತ್ರ ಕ್ಷೇತ್ರಕ್ಕೆ ಆಗಮಿಸಿದ್ದರು. ವಿವಿಧ ಕೊಡವ ಸಂಘಟನೆಗಳ ಪದಾಧಿಕಾರಿಗಳು ಮತ್ತು ಸದಸ್ಯರು ಭಾಗಮಂಡಲದಿಂದ ತಲಕಾವೇರಿವರೆಗೆ ಪಾದಯಾತ್ರೆ ಮೂಲಕ ಸಾಗಿ ಬಂದರು. ಯುನೈಟೆಡ್ ಕೊಡವ ಆರ್ಗನೈಜೇಷನ್, ಕೊಡವ ರೈಡರ್ಸ್ ಕ್ಲಬ್, ಅಖಿಲ ಕೊಡವ ಸಮಾಜ ಯೂತ್ ವಿಂಗ್ ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿದ್ದ ಕೊಡವ ಸಂಘಟನೆಗಳ ಸದಸ್ಯರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ ಪಿಂಡ ಪ್ರದಾನ, ಕೇಶ ಮುಂಡನ ಮತ್ತಿತರ ಸಾಂಪ್ರದಾಯಿಕ ಪೂಜಾ ವಿಧಿ ವಿಧಾನಗಳು ನಡೆದವು. ಭಾಗಮಂಡಲದಿಂದ ತಲಕಾವೇರಿಗೆ ಕೆಎಸ್‌ಆರ್‌ಟಿಸಿ ಬಸ್ ಸೇವೆ ಒದಗಿಸಲಾಗಿತ್ತು. ತಲಕಾವೇರಿಯಲ್ಲಿ ಕೊಡಗು ಏಕೀಕರಣ ರಂಗದ ವತಿಯಿಂದ ಎಲ್ಲಾ ಭಕ್ತರಿಗೂ ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತು.

ಗಣ್ಯರ ಪಾದಯಾತ್ರೆ: ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್. ಪೊನ್ನಣ್ಣ ದಂಪತಿ ಭಾಗಮಂಡಲ ಕ್ಷೇತ್ರದಲ್ಲಿ ಶ್ರೀ ಭಗಂಡೇಶ್ವರನಿಗೆ ಪೂಜೆ ಸಲ್ಲಿಸಿದರು. ಬಳಿಕ ಶಾಸಕ ಎ.ಎಸ್.ಪೊನ್ನಣ್ಣ ದಂಪತಿ ಕಾಲ್ನಡಿಗೆಯ ಮೂಲಕ ಕಾವೇರಿ ಮಾತೆಯ ಸ್ಮರಣೆಯೊಂದಿಗೆ ತಲಕಾವೇರಿಗೆ ತೆರಳಿದರು. ಚಲನಚಿತ್ರ ತಾರೆಯರಾದ ಭುವನ್ ಪೊನ್ನಣ್ಣ, ಹರ್ಷಿಕಾ ಪೂಣಚ್ಚ ದಂಪತಿ ಭಾಗಮಂಡಲದಿಂದ ತಲಕಾವೇರಿವರೆಗೆ ತಮ್ಮ 2ನೇ ವರ್ಷದ ಪಾದಯಾತ್ರೆಯನ್ನು ಕೈಗೊಂಡಿದ್ದರು. ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ಭಕ್ತರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ, ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂತರ್ ಗೌಡ, ಸಂಸದ ಪ್ರತಾಪ್ ಸಿಂಹ, ಜಿಲ್ಲಾಧಿಕಾರಿ ವೆಂಕಟ್ ರಾಜಾ, ದಕ್ಷಿಣ ವಲಯ ಪೊಲೀಸ್ ಉಪ ಮಹಾನಿರೀಕ್ಷಕ ಡಾ. ಎಂ.ಬಿ.ಬೋರಲಿಂಗಯ್ಯ, ಜಿ.ಪಂ ಸಿಇಓ ವರ್ಣಿತ್ ನೇಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್‌ರಾಜ್, ಅಪರ ಜಿಲ್ಲಾಧಿಕಾರಿ ವೀಣಾ, ಉಪವಿಭಾಗಾಧಿಕಾರಿ ಯತೀಶ್ ಉಲ್ಲಾಳ್, ಮಡಿಕೇರಿ ತಹಶೀಲ್ದಾರ್ ಪ್ರವೀಣ್, ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮೀಜಿ, ಭಾಗಮಂಡಲ ತಕ್ಕ ಮುಖ್ಯಸ್ಥರಾದ ಬಳ್ಳಡ್ಕ ಅಪ್ಪಾಜಿ, ತಲಕಾವೇರಿ ತಕ್ಕ ಮುಖ್ಯಸ್ಥ ಕೋಡಿ ಮೋಟಯ್ಯ, ಕೆಪಿಸಿಸಿ ಮುಖಂಡ, ಹೈಕೋರ್ಟ್‌ನ ಹಿರಿಯ ವಕೀಲ ಹೆಚ್.ಎಸ್.ಚಂದ್ರಮೌಳಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ಪಳೆಯಂಡ ರಾಬಿನ್ ದೇವಯ್ಯ, ಚಲನಚಿತ್ರ ತಾರೆಯರಾದ ಭುವನ್ ಪೊನ್ನಣ್ಣ, ಹರ್ಷಿಕಾ ಪೂಣಚ್ಚ ಸೇರಿದಂತೆ ಮತ್ತಿತರ ಗಣ್ಯರು ತೀರ್ಥೋದ್ಭವದ ಪವಿತ್ರ ಕ್ಷಣಕ್ಕೆ ಸಾಕ್ಷಿಯಾದರು. ಶಾಸಕ ಎ.ಎಸ್. ಪೊನ್ನಣ್ಣ ಕೊಡವ ಸಾಂಪ್ರದಾಯಿಕ ಉಡುಗೆಯಲ್ಲಿ ಪಾಲ್ಗೊಂಡು ಗಮನ ಸೆಳೆದರು.

ಶಾಸಕ ಎ.ಎಸ್.ಪೊನ್ನಣ್ಣ ದಂಪತಿ, ಹರ್ಷಿಕಾ ಪೂಣಚ್ಚ ದಂಪತಿಗಳಿಂದ ತಲಕಾವೇರಿಗೆ ಪಾದಯಾತ್ರೆ



ವಿರಾಜಪೇಟೆಯಲ್ಲಿ ಕಾವೇರಿ ತೀರ್ಥ ವಿತರಣೆ

ವಿರಾಜಪೇಟೆ, ಅ.18– ತಲಕಾವೇರಿ ಸನ್ನಿಧಿಯಲ್ಲಿ ಶ್ರೀ ಕಾವೇರಿ ತೀರ್ಥೋದ್ಭವವಾದ ಹಿನ್ನೆಲೆಯಲ್ಲಿ ವಿರಾಜಪೇಟೆ 'ವಿ' ಫ್ರೆಂಡ್ಸ್ ಸಂಸ್ಥೆ ವತಿಯಿಂದ ಕಾವೇರಿ ತೀರ್ಥವನ್ನು ವಿತರಣೆ ಮಾಡಲಾಯಿತು.



ವಿರಾಜಪೇಟೆ ಅಪ್ಪಯ್ಯಸ್ವಾಮಿ ರಸ್ತೆಯಲ್ಲಿರುವ ಕಾವೇರಿ ಆಶ್ರಮದಲ್ಲಿ ಕಾವೇರಿ ತೀರ್ಥಕ್ಕೆ ಪೂಜೆ ಸಲ್ಲಿಸಿದ ಬಳಿಕ ವಾಹನದಲ್ಲಿ ಮಂಟಪದೊಂದಿಗೆ 'ವಿ'ಫ್ರೆಂಡ್ಸ್ ಸದಸ್ಯರು ದೇವಾಂಗಬೀದಿ, ದಕ್ಕನಿ ಮೊಹಲ್ಲಾ, ತೆಲುಗರ ಬೀದಿ, ಜೈನರ ಬೀದಿ, ದೊಡ್ಡಟ್ಟಿ ಚೌಕಿ ಮಾರ್ಗವಾಗಿ ಗಡಿಯಾರ ಕಂಬದ ಬಳಿಯಿಂದ ಮುಖ್ಯರಸ್ತೆ, ಗಾಂಧಿನಗರ, ತಾಲೂಕು ಮೈದಾನ ರಸ್ತೆಯಿಂದ ಚಿಕ್ಕಪೇಟೆ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಸಾರ್ವಜನಿಕರಿಗೆ ಕಾವೇರಿ ತೀರ್ಥ ವಿತರಿಸಲಾಯಿತು. ಈ ಸಂದರ್ಭ ವಿ ಫ್ರೆಂಡ್ಸ್ ಅಧ್ಯಕ್ಷ ಸಂಪಿ ಪೂಣಚ್ಚ, ಕಾರ್ಯದರ್ಶಿ ಪಟ್ಟಡ ವಿಜೇಯ್, ಸದಸ್ಯರಾದ ಜೀವನ್, ಅಪ್ಪನೆರವಂಡ ವಿಜೇಯ್, ತ್ರಿಶುಗಣಪತಿ ಮತ್ತಿತರರು ಹಾಜರಿದ್ದರು.

ಅದೇ ರೀತಿ ವಿರಾಜಪೇಟೆಯ 'ಹಿಂದೂ ಅಗ್ನಿದಳ' ಸಂಘಟನೆ ವತಿಯಿಂದ ಬುಧವಾರ ಮುಂಜಾನೆಯಿಂದ ಕಾವೇರಿ ತೀರ್ಥವನ್ನು ವಾಹನದಲ್ಲಿರಿಸಿ ನಗರದ ಪ್ರಮುಖ ಬೀದಿಗಳಾದ ಮೂರ್ನಾಡು ರಸ್ತೆ, ಮೀನುಪೇಟೆ, ಖಾಸಗಿ ಬಸ್ ನಿಲ್ದಾಣ, ಪಂಜಾರುಪೇಟೆ, ಗೋಣಿಕೊಪ್ಪ ರಸ್ತೆ ಸೇರಿದಂತೆ ನಗರದ ಇತರೆಡೆಗಳಲ್ಲಿ ಸಂಘಟನೆಯ ಸದಸ್ಯರು ಉತ್ಸಾಹದಿಂದ ಸಾರ್ವಜನಿಕರಿಗೆ ಕಾವೇರಿ ತೀರ್ಥವನ್ನು ವಿತರಿಸಿದರು.

ಕುಶಾಲನಗರದಲ್ಲಿ ವಿಜೃಂಭಣೆಯ ಕಾವೇರಿ ಸಂಕ್ರಮಣ ಹಬ್ಬ, ತೀರ್ಥ ವಿತರಣೆ, ಅನ್ನಸಂತರ್ಪಣೆ

ಕುಶಾಲನಗರ, ಅ.18– ಪಟ್ಟಣದ ಬಾರವಿ ಕಾವೇರಿ ಕನ್ನಡ ಸಂಘದ ವತಿಯಿಂದ ಕೊಪ್ಪ ಗೇಟ್ ಕಾವೇರಿ ಸೇತುವೆ ಬಳಿ ಕಾವೇರಿ ನದಿ ದಂಡೆಯಲ್ಲಿರುವ ಕಾವೇರಿ ಪ್ರತಿಮೆ ಆವರಣದಲ್ಲಿ ಬುಧವಾರ ಏರ್ಪಡಿಸಿದ್ದ 11ನೇ ವರ್ಷದ ಕಾವೇರಿ ಸಂಕ್ರಮಣ ಹಬ್ಬ, ತೀರ್ಥ ವಿತರಣೆ ಮತ್ತು ಅನ್ನಸಂತರ್ಪಣೆ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.



ಕಾವೇರಿ ಸಂಕ್ರಮಣದ ಅಂಗವಾಗಿ ಕಾವೇರಿ ಪ್ರತಿಮೆಗೆ ವಿವಿಧ ಪುಷ್ಪಗಳಿಂದ ವಿಶೇಷವಾಗಿ ಅಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಲಾಯಿತು. ಸಂಕ್ರಮಣ ಹಬ್ಬದ ಅಂಗವಾಗಿ ಕಾವೇರಿ ಪ್ರತಿಮೆಗೆ ಹಾಲು, ತುಪ್ಪ ಅರಿಸಿನ, ಕುಂಕುಮಗಳಿಂದ ಅಭಿಷೇಕ ಮಾಡಲಾಯಿತು. ಮಂಟಪವನ್ನು ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಸಿಂಗರಿಸಲಾಯಿತು.

ಉದ್ಯಮಿ ಎಸ್.ಎಲ್.ಎನ್. ವ್ಯವಸ್ಥಾಪಕ ನಿರ್ದೇಶಕ ಸಾತಪ್ಪನ್ ಕಾವೇರಿ ಮಾತೆಗೆ ಪೂಜೆ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಇದೇ ಸಂದರ್ಭ ನೂತನವಾಗಿ ನಿರ್ಮಿಸಿದ್ದ ಅನ್ನಸಂತರ್ಪಣಾ ಭವನವನ್ನು ಸಾತಪ್ಪನ್ ಉದ್ಘಾಟಿಸಿದರು. ಈ ಸಂದರ್ಭ ಕೂಡ್ಲೂರಿನ ಉದ್ಯಮಿ ಬಿ.ಕೆ.ಸುದೀಪ್ ಕುಮಾರ್ ಮತ್ತು ಎಸ್.ಎಲ್.ಎನ್.ನ ವೆಂಕಟಾಚಲಂ ಅವರು ಮಾತನಾಡಿ, ಬಾರವಿ ಕಾವೇರಿ ಕನ್ನಡ ಸಂಘದ ಕಳೆದ 11 ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ವಿಭಿನ್ನ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಬಾರವಿ ಕಾವೇರಿ ಕನ್ನಡ ಸಂಘದ ಅಧ್ಯಕ್ಷ ಬಬೀಂದ್ರ ಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು. ಬಾರವಿ ಕಾವೇರಿ ಕನ್ನಡ ಸಂಘದ ಪದಾಧಿಕಾರಿಗಳಾದ ರವೀಂದ್ರ ಪ್ರಸಾದ್, ವಿಜೇಂದ್ರ ಪ್ರಸಾದ್, ಪ್ರಮುಖರಾದ ಚಂದ್ರು ಮತ್ತಿತರರು ಇದ್ದರು.

ತೀರ್ಥ ಪ್ರಸಾದ ವಿತರಣೆ : ತಲಕಾವೇರಿ ಸನ್ನಿಧಿಯಿಂದ ಕಾವೇರಿ ತೀರ್ಥವನ್ನು ತಂದು ವಿಶೇಷ ಪೂಜೆ ಸಲ್ಲಿಸಿ ನಂತರ ನೆರೆದಿದ್ದ ಭಕ್ತರಿಗೆ ವಿತರಣೆ ಮಾಡಲಾಯಿತು. ಜೊತೆಗೆ ಸಂಕ್ರಮಣ ಹಬ್ಬದ ಅಂಗವಾಗಿ ಅನ್ನಸಂತರ್ಪಣೆ ನೆರವೇರಿಸಿದರು. ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಮುಳ್ಳುಸೋಗೆ, ಗುಮ್ಮನಕೊಲ್ಲಿ, ಕೊಪ್ಪ ಆವರ್ತಿ, ಚಿಕ್ಕಹೊಸೂರು, ಬೈಲುಕುಪ್ಪೆ ನೂರಾರು ಭಕ್ತರು ಆಗಮಿಸಿ ಕಾವೇರಿ ಮಾತೆಗೆ ಪೂಜೆ ಸಲ್ಲಿಸಿ ಪುನೀತರಾದರು.

ಶಾಸಕ ಭೇಟಿ: ಶಾಸಕ ಡಾ.ಮಂತರ್ ಗೌಡ ಅವರು ಇಲ್ಲಿನ ಕಾವೇರಿ ನದಿ ದಂಡೆ ಮೇಲಿರುವ ಕಾವೇರಿ ಪ್ರತಿಮೆ ಸನ್ನಿಧಿಗೆ ಮಧ್ಯಾಹ್ನ ಭೇಟಿ ನೀಡಿ ಕಾವೇರಿ ಮಾತೆಗೆ ಪೂಜೆ ಸಲ್ಲಿಸಿ ತೀರ್ಥ ಪ್ರಸಾದ ಸ್ವೀಕರಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ. ಶಶಿಧರ್, ಕಾವಲು ಪಡೆ ಅಧ್ಯಕ್ಷ ಎಂ.ಕೃಷ್ಣ ಇದ್ದರು.

ಮಹಿಳಾ ದಸರಾದಲ್ಲಿ ಮಹಿಳೆಯರ ಸಂಭ್ರಮ

ಚಾಮರಾಜನಗರ, ಅ.18– ಚಾಮರಾಜನಗರ ದಸರಾ ಮಹೋತ್ಸವದ ಅಂಗವಾಗಿ ಇಂದು ನಗರದಲ್ಲಿ ನಡೆದ ಮಹಿಳಾ ದಸರಾದಲ್ಲಿ ಏರ್ಪಡಿಸಲಾಗಿದ್ದ ವಿವಿಧ ಸ್ಪರ್ಧೆಗಳಲ್ಲಿ ಮಹಿಳೆಯರು ಉತ್ಸಾಹದಿಂದ ಪಾಲ್ಗೊಂಡು ದಸರಾದ ಸಂಭ್ರಮವನ್ನು ಇಮ್ಮಡಿಗೊಳಿಸಿದರು.



ನಗರದ ಚಾಮರಾಜೇಶ್ವರ ದೇವಾಲಯದ ಪಕ್ಕದ ರಥದ ಬೀದಿಯಲ್ಲಿ ಮಹಿಳೆಯರಿಗಾಗಿ ಏರ್ಪಡಿಸಿದ್ದ ವೈವಿಧ್ಯಮಯ ಸ್ಪರ್ಧೆಗಳಿಗೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದರು.

ಜಿಲ್ಲಾಧಿಕಾರಿ ಶಿಲ್ಪಾನಾಗ್ ಹಾಗೂ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರು ರಂಗೋಲಿ ಬಿಡಿಸುವ ಮೂಲಕ ಸ್ಪರ್ಧಿಗಳಿಗೆ ಉತ್ತೇಜನ ನೀಡಿದರು.

ಬಳಿಕ ಮಹಿಳೆಯರು ಒಲೆ ರಹಿತವಾಗಿ ತಯಾರಿಸುವ ವಿವಿಧ ತಿನಿಸುಗಳ ಸ್ಪರ್ಧೆಗೆ ಜಿಲ್ಲಾಧಿಕಾರಿ ಅವರು ಚಾಲನೆ ನೀಡಿದರು. ಅಲ್ಲದೇ ತಯಾರಿಸಿದ ತಿನಿಸುಗಳನ್ನು ಸೇವಿಸಿ ರುಚಿ ನೋಡಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು, ದಸರೆ ಸಂಭ್ರಮಿಸುವ ಹಬ್ಬವಾಗಿದೆ. ಮಹಿಳೆಯರು ಉತ್ಸುಕ ಹಾಗೂ ಸಂತೋಷದಿಂದ ಪಾಲ್ಗೊಳ್ಳಲಿ ಎಂಬ ಉದ್ದೇಶದಿಂದ ಅವರ ಅಭಿರುಚಿ, ಆಸಕ್ತಿಗೆ ಅನುಗುಣವಾಗಿ ನಾನಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಮಹಿಳೆಯರು ಸಂತಸದಿಂದ ಭಾಗವಹಿಸಬೇಕು. ಮುಂದಿನ ಸಂದರ್ಭದಲ್ಲಿ ಮಹಿಳೆಯರಿಗಾಗಿಯೇ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಬೇಕು ಎಂದರು. ವಿಶೇಷಚೇತನರಿಗೆ ಬಕೆಟ್ ಮತ್ತು ಬಾಲ್ ಸ್ಪರ್ಧೆ ನಡೆಯಿತು. ಲೆಮನ್ ಇನ್ ದಿ ಸ್ಪೂನ್, ಮ್ಯೂಸಿಕಲ್ ಚೇರ್, ಮಡಕೆ ಒಡೆಯುವ ಸ್ಪರ್ಧೆಗಳನ್ನು ಮಹಿಳೆಯರಿಗೆ ಏರ್ಪಡಿಸಲಾಗಿತ್ತು.

ಸ್ಪರ್ಧೆಯ ಬಳಿಕ ಚಾಮರಾಜೇಶ್ವರ ದೇವಾಲಯದ ದಸರಾ ಪ್ರಧಾನ ವೇದಿಕೆಯಲ್ಲಿ ಮಹಿಳೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಅರಣ್ಯವಾಸಿಗಳ ನೃತ್ಯ ಗಮನ ಸೆಳೆಯಿತು. ಜನಪದ ಹಾಡುಗಳಿಗೆ ಮಹಿಳೆಯರು ಹೆಜ್ಜೆ ಹಾಕಿದರು. ಸಿನಿಮಾ ಹಾಡುಗಳಿಗೂ ನೃತ್ಯ ಮಾಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಗೀತಾ ಲಕ್ಷ್ಮಿ, ಜಿಲ್ಲಾ ಕಾರ್ಮಿಕ ಅಧಿಕಾರಿ ಎಂ. ಸವಿತಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಗುರುಲಿಂಗಯ್ಯ, ಇತರೆ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಇದ್ದರು.

ದಸರಾ ಮ್ಯಾರಥಾನ್‌ನಲ್ಲಿ ಡಿಸಿಯೊಂದಿಗೆ ವಿದ್ಯಾರ್ಥಿಗಳು, ಅಧಿಕಾರಿಗಳು ಭಾಗಿ

ಚಾಮರಾಜನಗರ, ಅ.18– ಚಾಮರಾಜನಗರ ದಸರಾ ಮಹೋತ್ಸವದ ಅಂಗವಾಗಿ ನಗರದಲ್ಲಿ ದಸರಾ ಮ್ಯಾರಥಾನ್ ನಡೆಯಿತು.



ಇಂದು ಬೆಳಿಗ್ಗೆಯೇ ನಗರದ ಚಾಮರಾಜೇಶ್ವರ ದೇವಾಲಯದ ಮುಂಭಾಗದಲ್ಲಿಂದು ಸಮಾವೇಶಗೊಂಡಿದ್ದ ಪಟ್ಟಣದ ನಾಗರಿಕರು, ಅಧಿಕಾರಿಗಳು, ಸಿಬ್ಬಂದಿ, ವಿವಿಧ ಶಾಲಾ–ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದ ಮ್ಯಾರಥಾನ್‌ಗೆ ಜಿಲ್ಲಾಧಿಕಾರಿ ಶಿಲ್ಪಾನಾಗ್, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರು ಹಸಿರು ನಿಶಾನೆ ತೋರಿದರು. ಚಾಮರಾಜೇಶ್ವರ ದೇವಸ್ಥಾನದಿಂದ ಆರಂಭಗೊಂಡ ಮ್ಯಾರಥಾನ್ ನಗರದ ಜೋಡಿರಸ್ತೆಯಲ್ಲಿ ಸಾಗಿ ಕೋರ್ಟ್ ರಸ್ತೆ, ಕರಿನಂಜನಪುರ ರಸ್ತೆ ಮೂಲಕ ಪ್ರವಾಸಿ ಮಂದಿರದಲ್ಲಿ ಅಂತ್ಯಗೊಂಡಿತು.

ಇದೇ ವೇಳೆ ಪ್ರವಾಸಿ ಮಂದಿರದ ಆವರಣದಲ್ಲಿ ದಸರಾ ಮ್ಯಾರಥಾನ್ ಕುರಿತು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿಯವರು ಜಿಲ್ಲಾ ಕೇಂದ್ರದಲ್ಲಿ ನಾಲ್ಕು ದಿನಗಳ ಕಾಲ ನಡೆಯುವ ಚಾಮರಾಜನಗರ ದಸರಾ ಮಹೋತ್ಸವದಲ್ಲಿ ಆಚರಿಸುವ ಸಂಭ್ರಮಗಳಲ್ಲಿ ದಸರಾ ಮ್ಯಾರಥಾನ್ ಕೂಡ ಒಂದಾಗಿದೆ. ಮ್ಯಾರಥಾನ್‌ನಲ್ಲಿ 4ರಿಂದ 5 ಕಿ.ಮೀ ದೂರ ಕ್ರಮಿಸಲಾಗಿದೆ. ಎಲ್ಲರೂ ಸಹ ಉತ್ಸಾಹದಿಂದ ಮ್ಯಾರಥಾನ್‌ನಲ್ಲಿ ಭಾಗವಹಿಸಿದ್ದಾರೆ ಎಂದು ತಿಳಿಸಿದರು.

ಆರೋಗ್ಯ ಪ್ರತಿಯೊಬ್ಬರಿಗೂ ಮುಖ್ಯವಾಗಿದೆ. ದೈಹಿಕ ಹಾಗೂ ಮಾನಸಿಕ ಸದೃಢತೆಗೆ ಮ್ಯಾರಥಾನ್ ಓಟ ಸಹಕಾರಿಯಾಗಲಿದೆ. ಸಕಾರಾತ್ಮಕ ಚಿಂತನೆಗಳು ನಮ್ಮಲ್ಲಿ ಜಾಗೃತಗೊಳ್ಳಲಿವೆ. ದಿನನಿತ್ಯದ ಜೀವನದ ಒತ್ತಡಗಳಿಗೆ ಪರಿಹಾರ ಕಂಡುಕೊಳ್ಳಲು ಮ್ಯಾರಥಾನ್ ನೆರವಾಗಲಿದೆ. ಪ್ರಸ್ತುತ ದಿನಗಳಲ್ಲಿ ಮಕ್ಕಳು ಹೊರಗಡೆ ಆಟ ಆಡುವುದೇ ಕಡಿಮೆಯಾಗಿದೆ. ಆ ಸಂಸ್ಕೃತಿಯನ್ನು ಮಕ್ಕಳಲ್ಲಿ ಮತ್ತೆ ಬೆಳೆಸಬೇಕು. ಯುವಜನತೆಯಲ್ಲಿ ಆರೋಗ್ಯದ ಅರಿವು ಮೂಡಿಸುವುದು ಅನಿವಾರ್ಯವಾಗಿದೆ. ಎಲ್ಲರಿಗೂ ಸ್ಫೂರ್ತಿಯಾಗಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ತಿಳಿಸಿದರು. ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ರಾಮಚಂದ್ರ ರಾಜೇಅರಸ್, ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಮಂಜುನಾಥ ಪ್ರಸನ್ನ, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಶಿವಸ್ವಾಮಿ, ಇತರೆ ಅಧಿಕಾರಿಗಳು ಪಾಲ್ಗೊಂಡಿದ್ದರು.

ಇಂದು ರೈತ ದಸರಾ

ಚಾಮರಾಜನಗರ, ಅ.18– ದಸರಾ ಮಹೋತ್ಸವದ ಅಂಗವಾಗಿ ನಗರದಲ್ಲಿ ಅ.19ರಂದು ರೈತ ದಸರಾ ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 10 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಕಾರ್ಯಕ್ರಮದ ಮೆರವಣಿಗೆಗೆ ಚಾಲನೆ ನೀಡಲಾಗುವುದು. ಬೆಳಗ್ಗೆ 11 ಗಂಟೆಗೆ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಸ್ತೆ ಮಧ್ಯದಲ್ಲಿ ಕುಳಿತು ಕುಡಿತ: ಪ್ರಶ್ನಿಸಿದ ಮೂವರಿಗೆ ಚಾಕುವಿನಿಂದ ಇರಿತ

ಗುಂಡ್ಲುಪೇಟೆ, ಅ.18– ಸಾರ್ವಜನಿಕ ಸ್ಥಳದಲ್ಲಿ ಮದ್ಯ ಸೇವಿಸುತ್ತಿದ್ದುದರ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಮೂವರು ಯುವಕರನ್ನು ಚಾಕುವಿನಿಂದ ಇರಿದು ಗಾಯಗೊಳಿಸಿರುವ ಘಟನೆ ಪಟ್ಟಣದ ದರ್ಶನ್ ಬಡಾವಣೆ ನಡೆದಿದೆ.



ಮಂಗಳವಾರ ರಾತ್ರಿ ಪಟ್ಟಣದ ದರ್ಶನ್ ಬಡಾವಣೆಯ ರಸ್ತೆಯ ಮಧ್ಯದಲ್ಲಿ ಕುಳಿತು ಯುವಕರು ಮದ್ಯ ಸೇವಿಸುತ್ತಿದ್ದರು. ಅಲ್ಲಿ ವಾಕಿಂಗ್ ಮಾಡುತ್ತಿದ್ದ ಕೆಲವು ಯುವಕರು ಇದನ್ನು ಪ್ರಶ್ನಿಸಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಮಾತಿಗೆ ಮಾತು ಬೆಳೆದು ಬೀರ್ ಬಾಟಲ್ ಹಾಗೂ ಚಾಕುವಿನಿಂದ ಇರಿದಿದ್ದಾರೆ. ಇದರಿಂದ ದುಂದಾಸನಪುರ ಬಡಾವಣೆಯ ಸುನಿಲ್(22), ಪ್ರಜ್ವಲ್(21) ಹಾಗೂ ಸಂಜಯ್(23) ಎಂಬುವವರ ಕೈ ಹಾಗೂ ತಲೆಗಳಿಗೆ ತೀವ್ರ ಪೆಟ್ಟು ಬಿದ್ದಿದೆ.

ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ಆಗಮಿಸಿದ ಪೊಲೀಸರು ಗಾಯಾಳುಗಳನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದರು. ಆಸ್ಪತ್ರೆಗೆ ಭೇಟಿ ನೀಡಿದ ಸರ್ಕಲ್ ಇನ್ಸ್‌ಪೆಕ್ಟರ್ ಪರಶಿವಮೂರ್ತಿ ಗಾಯಾಳುಗಳಿಂದ ಮಾಹಿತಿ ಪಡೆದರು. ಹೆಚ್ಚಿನ ಚಿಕಿತ್ಸೆಗಾಗಿ ಚಾಮರಾಜನಗರ ಜಿಲ್ಲಾಸ್ಪತ್ರೆಗೆ ದಾಖಲಿಸಲಾಯಿತು. ಘಟನೆ ಸಂಬಂಧ ಪಟ್ಟಣದ ನಿವಾಸಿಗಳಾದ ಜಾವೇದ್, ಸುಫಿಯಾನ್ ಹಾಗೂ ಪೀರ್ ಎಂಬುವರನ್ನು ವಶಕ್ಕೆ ಪಡೆಯಲಾಗಿದೆ. ಮತ್ತೊಬ್ಬ ಆರೋಪಿ ಸುಹೇಲ್‌ನನ್ನು ಸಹಾ ಬಂಧಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಮತ್ತೆ ಹೆಚ್ಚಿದ ಪುಡಿ ರೌಡಿಗಳ ಅಟ್ಟಹಾಸ

ಪಟ್ಟಣದ ಪುಡಿ ರೌಡಿಗಳ ಅಟ್ಟಹಾಸ ಎಲ್ಲೆ ಮೀರಿದ್ದು, ಕ್ರಮ ಜರುಗಿಸುವಲ್ಲಿ ಪೊಲೀಸರು ವಿಫಲರಾಗಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬೈಕ್ ವ್ಹೀಲಿಂಗ್ ಮಾಡುವುದು, ಚನ್ನಪ್ಪ ಬಡಾವಣೆ, ಬಿಟಿಎ ಬಡಾವಣೆ ಸೇರಿದಂತೆ ಹಲವು ಬಡಾವಣೆಯಲ್ಲಿ ಎಲ್ಲೆಂದರಲ್ಲಿ ರಸ್ತೆ ಪಕ್ಕದಲ್ಲಿ ನಡುರಾತ್ರಿಯವರೆವಿಗೂ ಗುಂಪು ಗುಂಪಾಗಿ ಕುಳಿತು ಮದ್ಯಸೇವನೆ ಮಾಡುವುದು, ಗಲಾಟೆ ಮಾಡುವುದು, ಬಿಯರ್ ಬಾಟಲ್‌ಗಳನ್ನು ಒಡೆದು ಹಾಕುವುದು ಸೇರಿದಂತೆ ಅಕ್ಕಪಕ್ಕದ ಅಂಗಡಿಗಳಲ್ಲಿ ಜಗಳ ತೆಗೆದು ಗ್ಲಾಸ್‌ಗಳನ್ನು ಒಡೆದು ಹಾಕುತ್ತಿರುವುದು ನಡೆಯುತ್ತಿದೆ. ಈ ಹಿಂದೆ ಪೊಲೀಸರು ಕ್ರಮ ತೆಗೆದುಕೊಂಡು ಮಟ್ಟಹಾಕಿದ್ದರು. ಆದರೆ ಮತ್ತೆ ಬಾಲ ಬಿಚ್ಚಿರುವ ಪುಂಡರು ಪ್ರತಿನಿತ್ಯ ಬಡಾವಣೆಯಲ್ಲಿ ಅಶಾಂತಿಯ ವಾತಾವರಣ ಮೂಡಿಸುತ್ತಿದ್ದಾರೆ.

ಹಲವು ಭಾಗಗಳಲ್ಲಿ ಗಾಂಜಾ ಸೇವನೆ ಮಾಡಿ ಬರುವ ಯುವಕರು ಸಾರ್ವಜನಿಕರನ್ನು ಮನಬಂದಂತೆ ನಿಂದಿಸುತ್ತಿರುವುದು ಹೆಚ್ಚುತ್ತಿದೆ. ಇದಕ್ಕೆ ತಕ್ಷಣ ಪೊಲೀಸ್ ಇಲಾಖೆ ಕಡಿವಾಣ ಹಾಕುವುದರೊಂದಿಗೆ ರೌಡಿಗಳ ಪರೇಡ್ ಮಾಡಿ ಎಚ್ಚರಿಕೆ ನೀಡಿದರೆ ಸ್ವಲ್ಪ ಪ್ರಮಾಣದಲ್ಲಿ ಪಟ್ಟಣದಲ್ಲಿರುವ ಅಶಾಂತಿಯ ವಾತಾವರಣ ಕಡಿಮೆಯಾಗಬಹುದೆಂದು ನಾಗರಿಕರು ಅಭಿಪ್ರಾಯಪಟ್ಟಿದ್ದಾರೆ. ಇನ್ನಾದರೂ ಈ ಬಡಾವಣೆಯಲ್ಲಿ ಪೊಲೀಸ್ ಬೀಟ್ ಹೆಚ್ಚಿಸುವುದರೊಂದಿಗೆ ಪಾರ್ಕ್ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮದ್ಯಪಾನ ಮಾಡುವವರ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳುವಂತೆ ಸಾರ್ವಜನಿಕರು ಮನವಿ ಮಾಡಿದ್ದಾರೆ.

ದಸರಾ ಅಂಗವಾಗಿ ಹಾಲು ಕರೆಯುವ ಸ್ಪರ್ಧೆ

13.200 ಕೆಜಿ ಹಾಲು ಕರೆದ ಹಸುವಿಗೆ ಪ್ರಥಮ ಸ್ಥಾನ

8.300 ಕೆಜಿ ಹಾಲು ಕರೆದ ಹಸು ದ್ವಿತೀಯ, 7,850 ಹಾಲು ಕರೆದ ಹಸುವಿಗೆ 3ನೇ ಬಹುಮಾನ



ಚಾಮರಾಜನಗರ, ಅ.18– ಚಾಮರಾಜನಗರ ದಸರಾ ಅಂಗವಾಗಿ ಇಂದು ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಅಧಿಕ ಹಾಲು ಕರೆಯುವ ಸ್ಪರ್ಧೆ ವಿಶೇಷ ಗಮನ ಸೆಳೆಯಿತು.

ನಗರದ ಪಶು ಆಸ್ಪತ್ರೆ ಆವರಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪಶುಪಾಲನಾ ಹಾಗೂ ಪಶು ವೈದ್ಯಕೀಯ ಸೇವಾ ಇಲಾಖೆ, ಜಿಲ್ಲಾ ಹಾಲು ಒಕ್ಕೂಟ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿದ್ದ ಹಾಲು ಕರೆಯುವ ಸ್ಪರ್ಧೆಯನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರು ಹಾಲು ಕರೆಯುವ ಮೂಲಕ ಚಾಲನೆ ನೀಡಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರು ಮಾತನಾಡಿ, ಭಾರತವು ಕೃಷಿ ಪ್ರಧಾನ ದೇಶವಾಗಿದ್ದು, ಹೈನುಗಾರಿಕೆಯು ವಿಶೇಷ ಸ್ಥಾನಮಾನ ಹೊಂದಿದೆ. ಹೀಗಾಗಿ ಇಂತಹ ಕಾರ್ಯಕ್ರಮಗಳಿಂದ ರೈತರನ್ನು ಪ್ರೋತ್ಸಾಹಿಸಬೇಕು ಎಂದರು. ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ರೈತ ಸ್ಪರ್ಧಿಗಳಿಗೆ ಶುಭಾಶಯ ಕೋರಿದರು.

ಪಶುಪಾಲನೆ ಹಾಗೂ ಪಶು ವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕರಾದ ಡಾ. ಎಲ್. ಹನುಮೇಗೌಡ ಅವರು ಮಾತನಾಡಿ, ಜಿಲ್ಲೆಯಲ್ಲಿ ಪ್ರಥಮವಾಗಿ ಜಿಲ್ಲಾ ಮಟ್ಟದ ಅಧಿಕ ಹಾಲು ಕರೆಯುವ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಇಂತಹ ಕಾರ್ಯಕ್ರಮದಿಂದ ರೈತರಿಗೆ ಹೈನುಗಾರಿಕೆಯಲ್ಲಿ ಉತ್ಸಾಹ ಹೆಚ್ಚಾಗುವುದು. ಹೀಗಾಗಿ ಮುಂದಿನ ದಿನಗಳಲ್ಲಿ ತಾಲೂಕು ಮಟ್ಟದಲ್ಲೂ ಸಹ ಇಂತಹ ಸ್ಪರ್ಧೆ ಆಯೋಜಿಸುವ ಆಸಕ್ತಿ ಹೊಂದಿದ್ದೇವೆ ಎಂದರು.

ಸ್ಪರ್ಧೆಯಲ್ಲಿ 12 ವಿವಿಧ ತಳಿಗಳ ರಾಸುಗಳು ಭಾಗಿಯಾಗಿದ್ದವು. ಮೇಲಾಜಿಪುರದ ನವೀನ್ ಅವರು 13.200 ಕೆ.ಜಿ ಹಾಲು ಕರೆಯುವ ಮೂಲಕ ಪ್ರಥಮ ಸ್ಥಾನ ಪಡೆದರು. ಕಾಗಲವಾಡಿಯ ಮುರುಗೇಶ್ 8.300 ಕೆ.ಜಿ ಹಾಲು ಕರೆಯುವ ಮೂಲಕ ಎರಡನೇ ಸ್ಥಾನವನ್ನು ಪಡೆದುಕೊಂಡರು. ಮೂಡಲಪುರದ ಬಸವರಾಜು 7.850 ಕೆ.ಜಿ ಹಾಲು ಕರೆಯುವ ಮೂಲಕ ಮೂರನೇ ಬಹುಮಾನ ಪಡೆದರು. ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ರೈತರಿಗೆ ಪ್ರಮಾಣ ಪತ್ರ ಹಾಗೂ ರಾಸುಗಳಿಗೆ ಪೌಷ್ಟಿಕ ಪೌಡರ್ ನೀಡಿದರು. ಪಶು ವೈದ್ಯಾಧಿಕಾರಿಗಳಾದ ಡಾ. ಶಿವಣ್ಣ, ಗುಂಡ್ಲುಪೇಟೆಯ ಡಾ. ಮೋಹನ್ ಕುಮಾರ್, ಕೊಳ್ಳೇಗಾಲ ತಾಲೂಕಿನ ಡಾ. ಮುತ್ತುರಾಜ್, ಹನೂರು ತಾಲೂಕಿನ ಡಾ. ಸಿದ್ದರಾಜು, ಯಳಂದೂರು ತಾಲೂಕಿನ ಡಾ. ಶಿವರಾಜ್ ಇದ್ದರು.

ಬ್ಯಾಂಕ್ ಸಿಬ್ಬಂದಿಯಂತೆ ಬಂದು ಬ್ಯಾಂಕ್‌ನಲ್ಲಿ 5 ಲಕ್ಷ ಕಳ್ಳತನ

ಚಾಮರಾಜನಗರ, ಅ.18– ನಗರದ ಭುವನೇಶ್ವರಿ ವೃತ್ತದ ಬಳಿ ಇರುವ ಕೆನರಾ ಬ್ಯಾಂಕ್ ಶಾಖೆಯಲ್ಲಿ ನಗದು ಕೌಂಟರ್‌ನಿಂದ 5 ಲಕ್ಷ ರೂ.ಗಳನ್ನು ಕಳ್ಳತನ ಮಾಡಿರುವ ಘಟನೆ ಬುಧವಾರ ಬೆಳಗ್ಗೆ ನಡೆದಿದೆ.

ಬೆಳಗ್ಗೆ 11 ಗಂಟೆ ವೇಳೆಯಲ್ಲಿ ಬ್ಯಾಂಕ್ ಸಿಬ್ಬಂದಿಯಂತೆ ಕ್ಯಾಶ್ ಕೌಂಟರ್ ವಿಭಾಗಕ್ಕೆ ತೆರಳಿರುವ ವ್ಯಕ್ತಿ, ಅಲ್ಲಿದ್ದ ಹಣವನ್ನು ಕವರ್‌ಗೆ ಹಾಕಿಕೊಂಡು ಹೊರಬರುತ್ತಿರುವ ದೃಶ್ಯ ಬ್ಯಾಂಕಿನ ಸಿಸಿ ಟಿವಿಯಲ್ಲಿ ಸೆರೆಯಾಗಿದೆ. ನಂತರ ನಾಲ್ಕು ಜನರು

ಬ್ಯಾಂಕ್‌ನ ಸಿಸಿ ಟಿವಿಯಲ್ಲಿ ಕಳ್ಳನ ಕರಾಮತ್ತು ಸೆರೆ



ಬ್ಯಾಂಕ್‌ನಿಂದ ಹೊರ ಹೋಗಿರುವ ದೃಶ್ಯವೂ ಸಹ ಕ್ಯಾಮರಾದಲ್ಲಿ ಸೆರೆಯಾಗಿದೆ. ಹೀಗಾಗಿ ಆ ನಾಲ್ವರು ಸೇರಿ ಕಳ್ಳತನ ನಡೆಸಿದ್ದಾರೆ ಎಂದು ಪೊಲೀಸರು ಶಂಕಿಸಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಪಟ್ಟಣದ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ರಾಜೇಶ್ ಹಾಗೂ ಅವರ ತಂಡ ಬ್ಯಾಂಕ್‌ಗೆ ಆಗಮಿಸಿ ಪರಿಶೀಲಿಸಿದರು. ಬ್ಯಾಂಕ್‌ನ ಅಧಿಕಾರಿಗಳು ಈ ಬಗ್ಗೆ ಪಟ್ಟಣ ಠಾಣೆಗೆ ದೂರು ನೀಡಿದ್ದಾರೆ. ಕಳ್ಳರ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ
0821–2496522/23

WANTED PHARMACIST
Qualification : D Pharma/B Pharma with Morethan 2 Years Experience male candidate Preferred. Address:
M K Medical & General Store
Opp KEB, Near Private Bustand
T.Narasipura Taluk-571124
8197120474

(30X40) SALE
@ "OLIVE ENCLAVE"
Mys - B'Lore High Way 3km from Columbia Hospital.
28 Lakhs
9538839926

ಬೇಕಾಗಿದ್ದಾರೆ
ಟೆಲಿಮಾರ್ಕೆಟಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
Salary : 10,000/- to 15,000/-
ಸಂಪರ್ಕಿಸಿ:
9591233303
7676841708

ಬೇಕಾಗಿದ್ದಾರೆ
Mosquito Nets, Curtains ಇನ್ಸ್ಟಾಲ್ ಕೆಲಸ ಮಾಡಲು ಅನುಭವವಿರುವ ಹುಡುಗರು ಬೇಕಾಗಿದ್ದಾರೆ.
ಸ್ಥಳ: ವಿ.ವಿ.ಮೊಹಲ್ಲಾ, ಮೈಸೂರು.
ಸಂಪರ್ಕಿಸಿ: ಸಂತೋಷ್
9448750455

ತಕ್ಷಣ ಬೇಕಾಗಿದ್ದಾರೆ
ಚಿಕ್ಕಮಂಗಳೂರಿನ ಹೆಸರಾಂತ ರೆಸಾರ್ಟ್‌ವೊಂದರಲ್ಲಿ ಹೌಸ್‌ಕೀಪಿಂಗ್ ಕೆಲಸ ಮಾಡಲು ಅನುಭವವುಳ್ಳ ಪುರುಷರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. (ಊಟ, ವಸತಿ ಸೌಲಭ್ಯವಿರುತ್ತದೆ) ಮತ್ತು ಮೈಸೂರಿನ ಹೆಬ್ಬಾಳ, ವಿಜಯನಗರ 4ನೇ ಹಂತ ಹಾಗೂ ಅಕ್ಕ ಪಕ್ಕ ಏರಿಯಾಗಳಲ್ಲಿ ಹೌಸ್‌ಕೀಪಿಂಗ್ ಹಾಗೂ ಸೆಕ್ಯೂರಿಟಿಗಳು ಬೇಕಾಗಿದ್ದಾರೆ.
9035050653
9035050656



ಸ್ಕೂಲ್ ಯೂನಿಫಾರಂ ಹೋಲ್‌ಸೇಲ್ ಬೆಲೆಯಲ್ಲಿ
JSS
CKC
CFTRI
DMS
ಭಾವಸಾರ್ ಶ್ರೀಗಣೇಶ್
ಅಗ್ರಹಾರ, ಬಸವೇಶ್ವರ ರಸ್ತೆ 5ನೇ ಕ್ರಾಸ್, ಮೈಸೂರು

ಬೇಕಾಗಿದ್ದಾರೆ
ಮಂಡ್ಯ, ಚಾಮರಾಜನಗರ, ಮೈಸೂರು ನಗರ ಹಾಗೂ ತಾಲ್ಲೂಕುಗಳಲ್ಲಿ ದ್ವಿಚಕ್ರ ವಾಹನದ ಸಾಲ ವಸೂಲಾತಿ ಕೆಲಸ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ.
6364891413

WANTED
FEMALE RECEPTIONIST
for Natural Hair Fixing Centre, Mysuru.
Mob: 7625026662

FOR RENT
2BHK Flat on 1st Floor, D.Subbaiah Road, Ramaswamy Circle, Near Krishna Bakery, Mysuru.
Nirmala: 9845443073
Shantha: 8792838309

ತಕ್ಷಣ ಬೇಕಾಗಿದ್ದಾರೆ
ಬೇಗೂರು, ತೊಂಡವಾಡಿ, ಸಿಂಧುವಳ್ಳಿಪುರ ಏರಿಯಾದಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಅನುಭವವುಳ್ಳ, ಸೆಕ್ಯೂರಿಟಿ ಸೂಪರ್‌ವೈಸರ್‌ಗಳು ಮತ್ತು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ: S/Su: 20000/-
S/G: 16000/-
ವಯೋಮಿತಿ : S/Su:40 ವರ್ಷದೊಳಗೆ
S/G: 50 ವರ್ಷದ ಒಳಗೆ
ESI ಮತ್ತು PF ಸೌಲಭ್ಯವಿರುತ್ತದೆ
9620667819,9538567819

FESTIVAL COLLECTION
- Readymade Shirts Rs. 300/-*
- Formal Pants Rs. 375/-*
- Jeans Rs. 450/-*
- T.Shirts Rs. 250/-*

THE PRESIDENT
38/B, D.D. Urs Road, Mysore.
Ph: 8073849959

HOUSE FOR RENT
40X60 North Face Brindavan Extension 1st Stage, Mysore
(Broker Excuse)
9480169252

ಆಫೀಸ್ ರೂಮ್ ಬಾಡಿಗೆಗೆ ಇದೆ
2ನೇ ಮೇನ್, 11ನೇ ಕ್ರಾಸ್, ಜಯನಗರ, ಮೈಸೂರು
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9448087409

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ/ಹುಡುಗಿಯರು ಬೇಕಾಗಿದ್ದಾರೆ.
ಅನುಭವವುಳ್ಳವರಿಗೆ ಆದ್ಯತೆ.
HBR ಸಿಲ್ಕ್
9008931527,9845112221

ಭೋಗ್ಯಕ್ಕೆ/ಬಾಡಿಗೆಗೆ/ ಕ್ರಯಕ್ಕೆ, ಖಾಲಿ ಜಾಗ ಇದೆ
1) 28 ಗುಂಟೆ ಕೃಷಿ ಭೂಮಿ (ಕೋಳಿ ಫಾರಂ ಹಾಗೂ ಇನ್ನಿತರ ಕೆಲಸಕ್ಕೆ ಸೂಕ್ತವಾಗಿದೆ)
2) 50x30 ಖಾಲಿ ಜಾಗ
3) 20x30 ಖಾಲಿ ಜಾಗ ಮೈಸೂರು ಅರಮನೆಯಿಂದ ಸುಮಾರು 15 ಕಿ.ಮೀ ವ್ಯಾಪ್ತಿಯಲ್ಲಿವೆ. (ವಾಟ್ಸ್‌ಅಪ್/ಕಾಲ್ ಮಾಡಿ)
8105792419,8296165023

WANTED
Ex Servicemen, Para Military and civil Security Supervisor guards and lady Guard
Location - Leading IT Company
Qualification: 10th, 12th, Diploma, and Degree Pass/Fail
Age: 22 to 45 Years
Salary for 8 Hrs 26 Days-17000/-
9741300222,8050587611

DTCP SITES FOR SALE
DTCP Sites
Rs. 699 per sq.ft., Near Jayapura,
H.D. Kote Road, Mysore.
9590491194,9606783264

ಹೋಲ್‌ಸೇಲ್ ದರದಲ್ಲಿ
ಜೀವಂತ ನಾಟಿ ಕೋಳಿ ಕೆ.ಜಿ.
ರೂ. 260, ರೂ. 350, ರೂ. 580



ಗೌಡ್ರು ನಾಟಿಕೋಳಿ ಅಂಗಡಿ
ನಂ. 198/1, ಪಿ&ಟಿ ಕ್ವಾಟ್ರಸ್ ಮೇನ್ ರೋಡ್, ದೊಡ್ಡಮ್ಮ ತಾಯಿ ಕಲ್ಯಾಣ ಮಂಟಪ ಪಕ್ಕ, ಎನ್.ಆರ್. ಮೊಹಲ್ಲಾ, ಮೈಸೂರು-570 007
9448048576, 9632378020

ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
Famous Astrologer
ಪಂ॥ ಎಸ್.ಮಣಿಕಂಠನ್
Mob: 7975124805
ಪ್ರೀತಿಯಲ್ಲಿ ನಂಬಿ ಮೋಸ, ಹಣಕಾಸು, ಶತ್ರುಕಾಟ, ಸ್ತ್ರೀಪುರುಷ, ಪ್ರೇಮ, ಗುಪ್ತ ಸಮಸ್ಯೆ, ಗಂಡ–ಹೆಂಡತಿ ಕಿರಿಕಿರಿ, ಸಾಲಬಾಧೆ, ಅನಾರೋಗ್ಯ, ಮದುವೆ, ಸಂತಾನ, ವ್ಯಾಪಾರ, ವಿ.ಸೂ.: ಅಘೋರಿ, ಕೊಲ್ಲತ್ತ, ಕೇರಳ, ಕೊಳ್ಳೇಗಾಲ, ಪೂಜಾ ಶಕ್ತಿಯಿಂದ ನಿಮ್ಮ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ, ನಿಮ್ಮ ಯಾವುದೇ ಗುಪ್ತಕಠಿಣ ಸಮಸ್ಯೆಗಳಿಗೆ 600 ವರ್ಷಗಳ ಕೇರಳಿ ವಿದ್ಯೆಯಿಂದ 100% ಪರಿಹಾರ
ಸೂಚನೆ: ಸರಿಯಾದ ವಿಳಾಸ ತಿಳಿದುಕೊಂಡು ಬನ್ನಿ (ಖಾಯಂ ಮನೆ ವಿಳಾಸ ಅಶೋಕ ರಸ್ತೆ, ಈಟ್ಟೊ ಕ್ವಾರ್, 3ನೇ ಯೂನಿಯನ್ ಬ್ಯಾಂಕ್ ಹತ್ತಿರ, ಮೈಸೂರು)

ಉದ್ಯೋಗವಕಾಶ
ಮೈಸೂರಿನ ಹೆಸರಾಂತ ವೈದ್ಯಕೀಯ ಸೇವಾ ಸಂಸ್ಥೆಯಲ್ಲಿ ವಯೋವೃದ್ಧರು, ರೋಗಿಗಳು ಮತ್ತು ವಿಶೇಷ ಚೇತನರನ್ನು ನೋಡಿಕೊಳ್ಳಲು ಶ್ರದ್ಧೆ, ನಿಷ್ಠೆ ಹಾಗೂ ಸೇವಾ ಮನೋಭಾವದಿಂದ ಕೆಲಸ ನಿರ್ವಹಿಸಲು ಯುವಕ, ಯುವತಿಯರು ಮತ್ತು ಮಹಿಳೆಯರು ತಕ್ಷಣ ಬೇಕಾಗಿದ್ದಾರೆ.
ವಿದ್ಯಾರ್ಹತೆ: 7/10/PUC, Degree, ANM, GNM Pass/Fail
ತಿಂಗಳ ಸಂಬಳ: 10000 ರಿಂದ 18000
9606714441,08214242351
739278501

ಮೂಲೆ ನಿವೇಶನ ಮಾರಾಟಕ್ಕಿದೆ
ಸಪ್ತಮಾತ್ರಿಕೆ ಲೇಔಟ್–3
ನಿವೇಶನ ಸಂಖ್ಯೆ 41E
ಅಳತೆ 60x40 (58 ಲಕ್ಷ)
(ಸರ್ದಾರ್ ವಲ್ಲಭಾಯನಗರ)
9611854273
7411179893

RV CONSTRUCTIONS
Sanction Plans, Sanction Plans Upload (E-submission)
Construction Plans (As per Vastu), Estimations
REASONABLE RATES
Office : 0821-2002063
7975110915
D.Subbaiah Road, Mysore-04

ಸಂಪು ಟ್ಯಾಂಕ್ ಕ್ಲೀನಿಂಗ್
ಸಂಪರ್ಕಿಸಿ:
7975101020

ಕೊಳ್ಳೇಗಾಲದ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಮೋಡಿ ಮಾಂತ್ರಿಕ
ಪಂ॥ ಎಸ್.ಕೆ. ಪ್ರಶಾಂತ್ ಆಚಾರ್ಯ
ಮೊ: 9740947045
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ನಾಗದೋಷ, ಕುಜದೋಷ, ದುಷ್ಟಶಕ್ತಿ, ಪ್ರೇತಬಾಧೆ, ಸಾಲಬಾಧೆ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ, ಡಾ॥ ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೊಸ ಸುಮಂಗಲಿ ಸಿಲ್ಕ್ಸ್ ಹತ್ತಿರ), ಮೈಸೂರು.

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಕಾರ್ನರ್ ಸೈಟ್ ಸೇಲ್
30x40 ಈಸ್ಟ್, ಫೇಸಿಂಗ್ ಏರ್‌ಪೋರ್ಟ್ ಹತ್ತಿರ ಮುಡಾ ಖಾತೆ, 32 ಲಕ್ಷ
ಡೈರೆಕ್ಟ್ ಓನರ್
9342123373

ಹೆಸರು ಬದಲಾವಣೆ
ಶೀಲ ಆದ ನಾನು, ನಂ.3964, ಅಣ್ಣಮ್ಮ ಸ್ಟ್ರೀಟ್, ಮೈಸೂರಿನಲ್ಲಿ ವಾಸವಾಗಿರುವ ನಾನು ನನ್ನ ಹೆಸರು ಹಳೆಯ ದಾಖಲೆಯಲ್ಲಿ ರಾಗಿಣಿ ಎಂದು ದಾಖಲಾಗಿದೆ. ಆದ್ದರಿಂದ ನನ್ನ ಹೆಸರು ಶೀಲ ಎಂದು ನೋಟರಿ ಅವರ ಮುಂದೆ ಪ್ರಮಾಣೀಕರಿಸುತ್ತೇನೆ. ಮೂಲ ಹೆಸರುಗಳು ಶೀಲ, ರಾಕಿಣಿ, ರಾಕಿಣಿ ಶೀಲಾ ಒಂದೇ ವ್ಯಕ್ತಿಯಾದ ನನಗೆ ಸೇರಿದ್ದು ಆದಾಗಿ ನನ್ನ ಬದಲಾವಣೆಯ ಹೆಸರು ಶೀಲ ಎಂದು ಆಗಿದ್ದು ನೋಟರಿ ಮುಂದೆ ಪ್ರಮಾಣೀಕರಿಸಿದ್ದೇನೆ.
ಸಹಿ/– ಶೀಲ

HOUSE FOR RENT
(Vegetarians Only) 2BHK House First Floor available for Rent at Krishnamurthipuram, Mysore Near Krishnamurthipuram Post Office. Contact:
9448939404
9353561720

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಮನೆಯಲ್ಲಿಯೇ ಕೆಲಸ
WORK @ HOME
JOB
ಟೈಪಿಂಗ್ ಕೆಲಸ — ವಾರದ ಸಂಬಳ 3,000 ರಿಂದ 18,000
ಬೆಂಗಳೂರು ಹಾಗೂ ಮೈಸೂರಿನ MNC ಕಂಪನಿಗಳಲ್ಲಿ ಕೆಲಸ — ತಿಂಗಳಿಗೆ ಸಂಬಳ 16,000 ರಿಂದ 45,000 ಉಚಿತ ವಸತಿ/ ಊಟದೊಂದಿಗೆ esi pf
8749098879

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಬಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಬಾಧೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಲೇಡೀಸ್ ಟೈಲರ್
ಗಾರ್ಮೆಂಟ್ ಮತ್ತು ಮನೆಯಿಂದಲೂ ಟೈಲರ್ ಮಾಡುವಂತಹ ಲೇಡೀಸ್ ಬೇಕಾಗಿದ್ದಾರೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
9901080314

HOUSE FOR RENT
229 Gundurao Nagar (Ground Floor)
2BHK with Solar
Ooty-Road Near Ganapathi Ashrama
(Broker Excuse)
9483185518

WANTED
Mysore / Mandya / Wanted / Health Care / Sales
At Mysore / Mandya need Sales Executive / Delivery Boys / Fresh or having Sales & Supply experience in Health Care Products / Medical Devices. part time person can also apply.Contact:
888-464-5218
Send CV to: myfamilycustomercare@gmail.com

Star Solar
Renewable Energy



JUST Easy EMI
19,499/-
200 Ltr
5/15 Years Guaranty
ಎಲ್ಲಾ ಕಂಪನಿಯ ಹಳೆಯ ಸೋಲಾರನ್ನು ಸರ್ವಿಸ್ ಮಾಡಿಕೊಡಲಾಗುವುದು.
Old system Exchange offer available
Manufacturing : Belawadi Industrial Sub,Mysore
9945616293 / 9449966293

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗ ದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

V-GUARD



10 ವರ್ಷಗಳ ವ್ಯಾರಂಟಿ
ದಸರಾ ಹಬ್ಬದ ಶುಭಾಶಯಗಳು
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಬಸವ ಮಾರ್ಗ ಫೌಂಡೇಷನ್
33ನೇ 21 ದಿನಗಳ ಉಚಿತ ಕುಡಿತ ಬಿಡಿಸುವ ಶಿಬಿರ
ದಿನಾಂಕ: 27–10–2023 ರಿಂದ 16–11–2023 ರವರೆಗೆ.
8803344999, 9742010101, 9742919191
ಶ್ರೀಮತಿ ಬಸಮ್ಮ ಶ್ರೀ ಎಂ. ಸೋನಿ ಕರೀಗೌಡರ ಫಾರಂ, ನಂ. 86/1ಬಿ ಶ್ರೀರಾಂಪುರ ರಿಂಗ್ ರಸ್ತೆ (ಜಂಕ್ಷನ್ ಹತ್ತಿರ) ಕಸಬಾ ಹೋಬಳಿ, ಮೈಸೂರು

40x73
East Face Site
MUDA Approved
Ready to Construction
11 kms from City Center Next to Vijayanagar 4th Stage
9538583377

40x52
North West Corner Site
@Rs.40 Lakhs
MUDA Approved
3 kms from Ring Road behind Chamundi Hill
9538583377

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160, 6361056646

ಪ್ರಮಾಣ ಪತ್ರ
ಮೈಸೂರು ನಗರ, ಸಿದ್ಧಾರ್ಥನಗರ, ಸತ್ಯಮಾರ್ಗ, 2ನೇ ಹಂತ, 2ನೇ ಕ್ರಾಸ್, ಮನೆ ನಂ. 37ರಲ್ಲಿ ವಾಸವಾಗಿರುವ ಶ್ರೀ ರಮೇಶ್ ಜುಮಾನಿ ಆದ ನಾನು ಪ್ರಮಾಣೀಕರಿಸುವುದೇನೆಂದರೆ, ನನ್ನ ಆಧಾರ್ ಕಾರ್ಡ್‌ನಲ್ಲಿ (8904 6845 3764) ನನ್ನ ಹೆಸರು ರಮೇಶ್ ಜುಮಾನಿ ಹಾಗೂ ನನ್ನ ತಂದೆಯ ಹೆಸರು ಮುರಳೀಧರ್ ಜುಮಾನಿ ಎಂದು ಸರಿಯಾಗಿ ನಮೂದಾಗಿರುತ್ತದೆ. ಆದರೆ ಮೈಸೂರು ಆರ್.ಟಿ.ಓ. ಕಛೇರಿಯಿಂದ ಪಡೆದ ಚಾಲನಾ ಪತ್ರ ನಂ. ಟಿಎಸ್–23 19670000686ರಲ್ಲಿ ನನ್ನ ಹೆಸರು ತಿರು ರಮೇಶ್ ಎಂ. ಎಂದು ಮತ್ತು ನನ್ನ ತಂದೆಯವರ ಹೆಸರು ತಿರು ಮುರ್‌ಳೀದರ್ ಗುಮಾನಿ ಎಂದು ನನ್ನ ತಪ್ಪು ತಿಳುವಳಿಕೆಯಿಂದ ನೀಡಿದಂತೆ ನಮೂದಿಸಿರುತ್ತದೆ. ನೋಟರಿ ಸಿ.ಆರ್. ಸೀತಾರಾಮನ್ ರವರ ಮುಂದೆ ದಿನಾಂಕ 13–10–2023ರಂದು ಪ್ರಮಾಣೀಕರಿಸಿರುತ್ತೇನೆ.
ಸಹಿ/– ರಮೇಶ್ ಜುಮಾನಿ

Change of Name
I, Somashekar Nayak B.V., residing at #77, Kumaravysya Road, 'N' Block, Aishwarya-nagara, Kuvemunagar, Mysuru-570 023, my real and correct name is Somashekar Nayak B.V., but in my election ID Card my name mentioned as Somanayaka B.V. Hence it is to be rectified and amended to Election I.D. as Somashekar Nayaka B.V. In future I transact in the name of Somashekar Nayak B.V. I declared this in front of Notary Kusuma R. on 18-10-2023.
Sd/- Somashekar Nayak B.V.

SITES FOR SALE
MUDA Approved Sites
30x40 - 40 Lakhs
30x50 - 50 Lakhs
Bank loan upto 75%.
Near Police / JSS Layout, T. Narasipura Road, Mysuru.
9900363084, 8660105902

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
24–11–23: ರಾಯಲ್ ರಾಜಸ್ಥಾನ್, ಜೈಪುರ, ಬಿಕನೇರ್, ಜೈಸಲ್ಮಾರ್, ಜೋದ್‌ಪುರ್, ಉದಯ್ ಪುರ್, ಚಿತ್ತೋರ್‌ಗರ್, ಪುಷ್ಕರ್.
21–12–2023: ಗುಜರಾತ್, ನಾಗನಾಥ್, ಸೋಮ್ ನಾಥ್, ಸರ್ದಾರ್ ವಲ್ಲಭ್‌ಭಾಯ್ ಪಟೇಲ್ ಸ್ಟ್ಯಾಚ್ಯು.
10–11–2023: ಶಿರಡಿ, ಪಂಡರಾಪುರ, ಭೀಮಾ ಶಂಕರ, ಕೊಲ್ಹಾಪುರ ಮಹಾಲಕ್ಷ್ಮಿ.
2–11–2023: ರಾಮೇಶ್ವರಂ, ಕನ್ಯಾಕುಮಾರಿ, ಮಧುರೈ.
9591017782, 9964527782

AVAILABLE FOR RENT
5bhk House with attached bathroom with Car parking
30x40 Triplex House
@ anandnagar,
Near Niveditha Nagar Park
9448270609

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧುವರರ, ವಿಧುರರು, ವಿಧವೆಯರು, ವಿಚ್ಛೇದಿತರರು ನೇರ ಸಂಪರ್ಕಿಸಿ ಪ್ರತಿದಿನ ವಧುವರರ ನೇರ ಸಂದರ್ಶನ ಇರುತ್ತದೆ.
ಡಾ.ಗುರೂಜಿ
9448229184
7899625268

CHANGE OF NAME
I, MARIA PRIYA aged 43 yrs, W/o P Ravi resident of No.218, 2nd Main Road, 8th Cross, Near Gas Godown, B.M.Sree Nagar Metagalli, Mysore, in my Bank Account My Name, is mentiond as Priya Now i have changed my name as Maria Priya, in Adhar and all records on my own free will vide affidavit sworn before Notary C.R. Seetharam on 16.10.2023
Sd/- Maria Priya

ಬೇಕಾಗಿದ್ದಾರೆ
ಹೆಲ್ಪರ್ ಕೆಲಸಕ್ಕೆ.
ಸಂಬಳ: 12,000
ರೂಂ ಸೌಲಭ್ಯವಿರುತ್ತದೆ.
ವಯಸ್ಸು: 18–22.
Mob: 6361186317

DOCUMENT LOST
Harry Martin X., No. 152/90, RBI Post, Belavatha Grama, Pushpagiri, Mysore-570 023, I lost my mother's Sale DD - Irudiya Mary, Site No. E-153, S.No. 451/2, Kesare Village, Kasaba Hobli, Mysore.
Finders please contact:
9845845621, 9620822154

SITE FOR SALE
30x40, South face Railway Layout, Bogadi
(Prime location)
Mob: 94480 54390

SITE FOR SALE
40x60 site with clear titles, near Varuna Lake and JSS Layout, T. Narasipura Road, Mysore.
Buyers contact:
Mob: 9483295181

ಹೊಸ ಮನೆ ಮಾರಾಟಕ್ಕಿದೆ
ಪೂರ್ವದಿಕ್ಕು ಹಾಗೂ ಸೈಟುಗಳು ಮಾರಾಟಕ್ಕಿವೆ ಶ್ರೀರಾಂಪುರ ರಿಂಗ್ ರಸ್ತೆ, ಶ್ರೀನಗರ ಹಿಂಭಾಗ, ಮೈಸೂರು
8050345574

ಹೋಟೆಲ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಸಪ್ಲೈಯರ್, ನಾಟಿ ಸ್ಟೈಲ್ ಅಡುಗೆಯವರು ಬೇಕಾಗಿದ್ದಾರೆ
ವಯಸ್ಸು : 20–40
9845467730
8746960108

ಬೇಕಾಗಿದ್ದಾರೆ
1) ಲೇಡಿ ಸೆಕ್ಯೂರಿಟಿ– 2ಹುದ್ದೆ
2) ಹೌಸ್ ಕೀಪರ್ (ಮಹಿಳೆಯರು)
ಸ್ಥಳ: ಅರಸು ರಸ್ತೆ, ಹಿನಕಲ್
3) ಸೆಕ್ಯೂರಿಟಿ ಗಾರ್ಡುಗಳು (ಪುರುಷರು) ವಿದ್ಯಾವಂತರು
4) ಫೀಲ್ಡ್ ಆಪೀಸರ್ – 2 ಹುದ್ದೆ ಸೆಕ್ಯೂರಿಟಿ ಅನುಭವವಿರಬೇಕು
9611236261

GOWRI-GANGA FARM PLOTS
Buy a farm plot in Mysore
Ready to Registration
Starts From 6 Guntas*
MUDA Limits
Just -15 Min Drive From Bogadi-HD Kote Ring Road
For More Details
6363082326

For Sale
1) 30x40 16 lakhs Hd Kote Road
2) 30x40 Preethi layout srirampura
3) 20x30 G+2 House Dattagalli
4) 14x100 near Ramavilas Road
5) 40x60 old house Jayanagar
6) 40x60 ksfc layout Satagalli
7) 40x60 N ring road facing uttanahalli near
8) 30x40 Hunsur road yelwala skytop

Prakruthi Properties
9538690359,9035990359

ಸಪ್ತಗಿರಿ ರಿಯಲ್ ಎಸ್ಟೇಟ್ ಪತ್ರ ಬರಹಗಾರರು
ನುರಿತ ಕನ್ನಡ ನುಡಿ & ಇಂಗ್ಲೀಷ್ ಬೆರಳಚ್ಚುಗಾರರು ಕೆಲಸಕ್ಕೆ ಬೇಕಾಗಿದ್ದಾರೆ.
ವಿಳಾಸ: ಉಪನೊಂದಣಾಧಿಕಾರಿಗಳ ಕಛೇರಿ ಪೂರ್ವ ರಾಜಕುಮಾರ್ ರಸ್ತೆ, ತ್ರಿವೇಣಿ ಸರ್ಕಲ್ ಶಕ್ತಿನಗರ, ಮೈಸೂರು
ಸಂಬಳ: 10000 ರಿಂದ 15000
ಜಗನ್ನಾಥ್
9980731333,9844442456

ಬೇಕಾಗಿದ್ದಾರೆ
ಹೆಬ್ಬಾಳು, ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ Diploma E&E, & Mech, ITI, 8th to 2nd PUC ವರೆಗೆ ಮತ್ತು ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ.
ಊಟ ವಸತಿ ESI & PF ಸೌಲಭ್ಯವಿರುತ್ತದೆ.
ಸಂಬಳ 11400 to 18000 ಇರುತ್ತದೆ.
8951869646
9902645646

ಹೋಟೆಲ್ ಕೆಲಸಕ್ಕೆ ಹುಡುಗರು/ಹುಡುಗಿಯರು ಬೇಕಾಗಿದ್ದಾರೆ
Hotel Rajesh, KSRTC Bus Stand
1) ಕಾಫೀ ಟೀ ಮಾಸ್ಟರ್
2) ಕೌಂಟರ್ ಕೆಲಸಕ್ಕೆ
3) ವೇಟರ್ಸ್
4) ಪೂರಿ/ ಚಪಾತಿ ಮಾಸ್ಟರ್
8971500516

ಜಮೀನು ಮಾರಾಟಕ್ಕಿದೆ
ಮೈಸೂರು ತಾ. ಜಯಪುರ ಹೋಬಳಿಯಲ್ಲಿ ಮತ್ತು ಹಂಪಾಪುರ ಹೋಬಳಿಯಲ್ಲಿ ತೆಂಗಿನ ತೋಟ ಹಾಗೂ ಮಾವಿನ ತೋಟಗಳುಳ್ಳ 1 ಎಕರೆ, 2 ಎಕರೆ, 1 ಎಕರೆ 30 ಗುಂಟೆ, ಇತರೆ ಜಮೀನುಗಳು ಮಾರಾಟಕ್ಕಿವೆ. ಸಂಪರ್ಕಿಸಿ:
9945661696,8618848886

ಸೈಟು ಬೇಕಾಗಿದೆ
ಲಾಲ್‌ಬಹದ್ದೂರ್ ಶಾಸ್ತ್ರಿನಗರ ವಸಂತನಗರ, ಶಾಂತವೇರಿ ಗೋಪಾಲಗೌಡ ನಗರ, ಸಪ್ತಮಾತೃಕ ಲೇಔಟ್ ಪೊಲೀಸ್ ಲೇಔಟ್ ಜೆ.ಎಸ್.ಎಸ್.ಲೇಔಟ್
9844436672

REQUIRED FIELD EXECUTIVES
Collection Job, Salary 8000 to 12000 per Month and Commission Basis 2 Wheelers Must with Driving License
Mysore, Mandya, Nanjangud, Kushal Nagar and Holenarasipura
Vinay-9845080508
Surya-9902479707

HOUSE & OFFICE SPACE FOR RENT
@ SARASWATHIPURAM, KUVEMPUNAGAR & SURROUNDINGS
S.S Property Services
(Opp. Kuvempu School), S.S.Puram
9342125252

ಮಾರಾಟಕ್ಕಿದೆ
ಮಾನಂದವಾಡಿ ರಸ್ತೆ, ಎನ್‌ಐಇ ಕಾಲೇಜ್ ಹತ್ತಿರ $1^1/_2$ ಎಕರೆ & ದಟ್ಟಗಳ್ಳಿ ಹತ್ತಿರ 2 ಎಕರೆ, ಶೆಟ್ಟಿ ನಾಯಕನಹಳ್ಳಿ & ಬೊಮ್ಮನಹಳ್ಳಿ ಮುಖ್ಯ ರಸ್ತೆಯಲ್ಲಿ 2 ಎಕರೆ, ಜಯನಗರ 40x60 E&S ಕಮರ್ಷಿಯಲ್ ಕಾರ್ನರ್ ಸೈಟ್, ವಿಜಯನಗರ 3ನೇ ಹಂತ ಕಮರ್ಷಿಯಲ್ ಸೈಟ್ 50x80 ಉತ್ತರ ದಿಕ್ಕು, ಕುವೆಂಪುನಗರ ಎಂ.ಬ್ಲಾಕ್ 30x40 ಉತ್ತರ & ಪೂರ್ವ ಕಾರ್ನರ್ ದಟ್ಟಗಳ್ಳಿ ಪೂರ್ವ ದಿಕ್ಕು 30x40
9606231909

ಮನೆ ಮಾರಾಟಕ್ಕಿದೆ
25x30
ಅಳತೆಯ ಡ್ಯೂಪ್ಲೆಕ್ಸ್ (3 ರೂಮ್ಸ್) ಮನೆ ಮೈಸೂರಿನ ಗಂಗೋತ್ರಿ ಬಡಾವಣೆಯಲ್ಲಿ 68 ಲಕ್ಷಗಳಿಗೆ ಮಾರಾಟಕ್ಕಿದೆ
7411110087

SITE FOR SALE
MUDA APPROVED
30X40 East Face
2200/- Sq.ft
Near Yadahalli, Attached to KHB Kenchalagud
9916503184

ಮನೆ ಬಾಡಿಗೆಗೆ ಇದೆ
ಚಾಮರಾಜನಗರದ ಗಾಳೀಪುರದಲ್ಲಿ ರಮಾನಿಯ ಮಸೀದಿ ಪಕ್ಕದಲ್ಲಿ ಮನೆ ಬಾಡಿಗೆಗೆ ಇದೆ
9972970449

ಹುಡುಗರು ಬೇಕಾಗಿದ್ದಾರೆ
ಕಾರ್ ವಾಶ್ ಮಾಡಲು ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ.
9663099050

ಜಮೀನು ಮಾರಾಟಕ್ಕಿದೆ
ಟಿ.ನರಸಿಪುರ ರಸ್ತೆ ಮೇಗಳಾಪುರ ಸಮೀಪ 1 ಎಕರೆ 10 ಗುಂಟೆ ವಿಸ್ತೀರ್ಣವಿದ್ದು, ಡಾಂಬರ್ ರಸ್ತೆಗೆ ಹೊಂದಿಕೊಂಡಿದ್ದು ಫಾರ್ಮ್ ಹೌಸ್‌ಗೆ ಸೂಕ್ತವಾಗಿದೆ. ರಿಂಗ್ ರಸ್ತೆಯಿಂದ 14 ಕಿ.ಮೀ ದೂರವಿದ್ದು (ಕ್ಲಿಯರ್ ಡಾಕ್ಯುಮೆಂಟ್ಸ್ ಇದೆ)
ಬೆಲೆ ಎಕರೆಗೆ 65 ಲಕ್ಷ
9606375060

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ
ಗುರುವಾರ
ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ಮೂರನೇ ಪುಟದಿಂದ

ನಾವು ದೂರ ಸರಿದಿದ್ದೇವೆ...

ಕಣಗಳ ಪ್ರಮಾಣ ಹೆಚ್ಚುತ್ತಿದೆ. ಇದರಿಂದಾಗಿ ಅರಣ್ಯ ನಾಶ, ಜೀವರಾಶಿಯ ಮೇಲೆ ಪರಿಣಾಮ ಬೀರಬಹುದು. ಹಲವು ಶತಮಾನಗಳ ಅವಧಿಯಲ್ಲಿ ನಾವು ಸಾಧಿಸಿರುವ ಪ್ರಗತಿಯ ಹೊರತಾಗಿಯೂ ಪ್ರಸ್ತುತದಲ್ಲಿ ಮಾನವಕೋಟಿ ಹಲವು ಸಂಕಷ್ಟಗಳನ್ನು ಎದುರಿಸುತ್ತಿದೆ ಎಂದರು. ನಾವು ಎದುರಿಸುತ್ತಿರುವ ಸಂಕಷ್ಟಗಳಲ್ಲಿ ನೀರು ಬಹು ಮುಖ್ಯವಾದದ್ದು. ಸುಮಾರು 3 ಬಿಲಿಯನ್ ಜನರು ಅಸಮರ್ಪಕ ನೀರಿನಿಂದ ಸಂಕಷ್ಟಕ್ಕೊಳಗಾಗಿದ್ದಾರೆ. ವಿಶ್ವ ಬ್ಯಾಂಕ್‌ನ ಅಂದಾಜಿನ ಪ್ರಕಾರ ಜಲ ಸಂಪನ್ಮೂಲಗಳು ಕಡಿಮೆಯಾಗುತ್ತಿರುವ ಕಾರಣ ಆರ್ಥಿಕತೆಯ ಮೇಲೆ ಪ್ರಭಾವ ಬೀರುತ್ತದೆ. ನೀರಿನ ಕಾರಣಕ್ಕಾಗಿಯೇ ಮುಂದಿನ ಸಂಘರ್ಷಗಳು ತಲೆದೋರಬಹುದು ಎಂದು ವಿಶ್ವಸಂಸ್ಥೆ ಎಚ್ಚರಿಸಿದೆ ಎಂದ ಅವರು, ಈ ಕಾರಣದಿಂದಾಗಿ ಜಲ ಸಂಪನ್ಮೂಲವನ್ನು ಸಂರಕ್ಷಿಸಬೇಕಾಗಿದೆ. ನೀರು ಸರಬರಾಜಿನಲ್ಲಿ ನಿಗಾ ವಹಿಸಬೇಕು. ಅದರಲ್ಲಿ ಲವಣಾಂಶ ಕಡಿಮೆ ಮಾಡಬೇಕು ಹಾಗೂ ಒಣ ವಲಯದಿಂದ ತೇವವನ್ನು ಸಂಗ್ರಹಿಸುವ ವ್ಯವಸ್ಥೆಯಾಗಬೇಕು. ಈ ಎಲ್ಲಾ ಸಮಸ್ಯೆಗಳ ನಿವಾರಣೆಗೆ ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಅನ್ವೇಷಿಸಬೇಕಾದ ಅಗತ್ಯವಿದೆ ಎಂದರು.

ತಾಪಮಾನ ಹೆಚ್ಚಳದಿಂದ ಸಮುದ್ರದ ಮೇಲ್ಮೈ ತಾಪಮಾನ ಅಧಿಕವಾಗಿ ಅಲ್ಲಿ ವಾಸಿಸುವ ಜೀವಿಗಳ ಮೇಲೆ ಪರಿಣಾಮ ಉಂಟಾಗುತ್ತದೆ. ಹೀಗಾಗಿ ಸಮುದ್ರ ಮಟ್ಟ ಹೆಚ್ಚುತ್ತದೆ. ಕರಾವಳಿ ಪ್ರದೇಶದಲ್ಲಿ ಪ್ರವಾಹ ಉಂಟಾಗುತ್ತದೆ. ಹಿಮ ಕರಗುವ ಪ್ರಮಾಣ ಹೆಚ್ಚಾಗುತ್ತದೆ. ಹಿಮನದಿಗಳ ವ್ಯವಸ್ಥೆಯಲ್ಲಿ ವ್ಯತ್ಯಯ ಉಂಟಾಗಿ ಹವಾಮಾನ ವಿನ್ಯಾಸದಲ್ಲಿ ಬದಲಾವಣೆ ಆಗಲಿದ್ದು, ಇದರಿಂದ ಕೃಷಿ ಇತ್ಯಾದಿಗಳ ಮೇಲೆ ಪರಿಣಾಮ ಬೀರುತ್ತದೆ. ಜಾಗತಿಕ ತಾಪಮಾನವನ್ನು ತಗ್ಗಿಸುವುದು ಮತ್ತು ಭೂಮಿಯನ್ನು ತಂಪು ಮಾಡುವ ಒಂದು ವಿಶೇಷವೂ, ವಿಚಿತ್ರವೂ ಆದ ಇಂಜಿನಿಯರಿಂಗ್ ಅಸ್ತಿತ್ವಕ್ಕೆ ಬಂದಿದೆ. ಅದೇ ಜೀವ ಎಂಜಿನಿಯರಿಂಗ್. ಆಕಾಶದಿಂದ ಇಂಗಾಲದ ಡೈಆಕ್ಸೈಡ್ ಅನ್ನು ಹೀರಿಕೊಳ್ಳುವುದರ ಜೊತೆಗೆ ಭೂ ಮಂಡಲವನ್ನು ತಂಪು ಮಾಡಲು ಪ್ರಯತ್ನಿಸುವುದು ಇದರ ವಿಶೇಷ ಎಂದರು.

ಇಂದಿನ ತಂತ್ರಜ್ಞಾನ ಯುಗದಲ್ಲಿ ಮೇಲಿಂದ ಮೇಲೆ ಕೇಳಿಬರುವ ಸಂಗತಿಯೆಂದರೆ ಸುಸ್ಥಿರತೆ. ಇದರರ್ಥ ತಂತ್ರಜ್ಞಾನ ಮತ್ತು ಅದರ ಬಳಕೆಯಿಂದ ಪರಿಸರದ ಮೇಲೆ ಒತ್ತಡ ಉಂಟಾಗಬಾರದು. ಅಥವಾ ಆ ಒತ್ತಡ ಕಡಿಮೆಯಾಗಿರಬೇಕು. ಇಲ್ಲಿ ಮನುಷ್ಯನ ಅಗತ್ಯಗಳನ್ನು, ಕರ್ತವ್ಯಗಳನ್ನು ಪೂರೈಸುವಾಗ ಅಖಂಡ ವೃದ್ಧಿಯ ಆಗತ್ಯತೆಗಳನ್ನು ಕಡೆಗಣಿಸಬಾರದು. ಮಾನವಕೋಟಿ ಹುಟ್ಟಿದಾಗಿನಿಂದ ಈ ಹಿಂದೆ ಎಂದೂ ಇಂತಹ ಕಠಿಣ ಪರಿಸ್ಥಿತಿ ಪರಿಸರದ ವಿಷಯದಲ್ಲಿ ಇರಲಿಲ್ಲ. ಇಂತಹ ವ್ಯವಸ್ಥೆಯನ್ನು ಎದುರಿಸಲು ನಾವು ಸಜ್ಜುಗೊಂಡಿರಲಿಲ್ಲ. ಆದರೆ ಇದನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಸಾಧ್ಯಗೊಳಿಸುತ್ತದೆ ಎಂದರು. ವಿಜ್ಞಾನ ಮತ್ತು ತಂತ್ರಜ್ಞಾನ ಕಳೆದ 200 ವರ್ಷದಲ್ಲಿ ಪ್ರಪಂಚವನ್ನು ಇನ್ನಿಲ್ಲದಂತೆ ಬದಲಿಸಿದೆ. ನಾವು ಸಂವಹನ ಕಲೆ ಕಲಿತಿದ್ದೇವೆ. ನಮ್ಮ ಸಂಪರ್ಕದಲ್ಲಿ ಸುಧಾರಣೆಯಾಗಿದೆ. ಟೆಲಿವಿಷನ್, ಗಣಕಯಂತ್ರಗಳು, ವಿದ್ಯುದ್ದೀಪಗಳು, ಕಾರುಗಳು, ಸೆಲ್ ಫೋನ್ ಇತ್ಯಾದಿಗಳನ್ನು ಒಂದು ಶತಮಾನದ ಹಿಂದೆ ಕಲ್ಪಿಸಿಕೊಳ್ಳಲೂ ಕೂಡ ಸಾಧ್ಯವಿರಲಿಲ್ಲ. ಆದರೆ ವಿಜ್ಞಾನ ಮತ್ತು ತಂತ್ರಜ್ಞಾನ ಅದನ್ನು ಸಾಧ್ಯವಾಗಿಸಿದೆ ಎಂದು ಹೇಳಿದರು.

ಕಲ್ಪನೆಯಲ್ಲಿ ಕಂಡ ಉತ್ಪನ್ನಗಳನ್ನು ವಾಸ್ತವ ಜಗತ್ತಿನಲ್ಲಿ ನಮಗೆ ದಕ್ಕಿಸುವಂತಹ ಕೌಶಲವನ್ನು ಇಂಜಿನಿಯರ್‌ಗಳು ಹೊಂದಿದ್ದಾರೆ. ಪ್ರಪಂಚದಲ್ಲಿ ಮನುಷ್ಯ ಜ್ಞಾನದ ಆಗತ್ಯತೆ ಜಾಸ್ತಿಯಾದಂತೆ ಇಂಜಿನಿಯರಿಂಗ್‌ನ ಬೇಡಿಕೆ ಹೆಚ್ಚಾಗತೊಡಗಿದೆ. ಮುಂದಿನ ಮೂರು ದಶಕದಲ್ಲಿ ವಿಜ್ಞಾನ ತಂತ್ರಜ್ಞಾನ ಹಾಗೂ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಹಿಂದೆಂದೂ ಕಾಣದ ಅಭಿವೃದ್ಧಿ ಹಾಗೂ ಬದಲಾವಣೆಗಳು ಕಾಣಿಸಿಕೊಳ್ಳಲಿದ್ದು, ಮಾನವಕೋಟಿ ಹಲವಾರು ಸವಾಲುಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಇದಕ್ಕೆ ಪರಿಹಾರವೆಂದರೆ ಸುಸ್ಥಿರತೆಯನ್ನು ಸ್ಥಾಪಿಸಿ ಇಂಗಾಲದ ಪ್ರಮಾಣ ಕಡಿಮೆ ಮಾಡಲು ಹಸಿರು ಶಕ್ತಿಯನ್ನು ಪ್ರೋತ್ಸಾಹಿಸುವುದು. ಪರ್ಯಾಯ ಶಕ್ತಿಮೂಲಗಳನ್ನು ಗುರುತಿಸುವುದು. ಇಂಜಿನಿಯರಿಂಗ್‌ನ ನಾವೀನ್ಯತೆಗಳ ಮೂಲಕ ಹವಾಮಾನ ಬದಲಾವಣೆಯನ್ನು ಎದುರುಗೊಳ್ಳುವುದು. ನಗರಗಳನ್ನು ಹೊಸದಾಗಿ ವಿನ್ಯಾಸಗೊಳಿಸುವ ಮೂಲಕ ಉನ್ನತ ಮಟ್ಟದ ಜೀವನವನ್ನು ನಡೆಸಲು ಜನತೆಗೆ ಅನುವು ಮಾಡಿಕೊಡುವುದು. ಅತ್ಯಾಧುನಿಕ ಜೈವಿಕ ತಂತ್ರಜ್ಞಾನ ಮತ್ತು ಕೃಷಿ ಕ್ಷೇತ್ರದ ನಾವೀನ್ಯತೆಗಳಿಂದ ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರವನ್ನು ಒದಗಿಸುವುದು. ಜೀವ ವಿಜ್ಞಾನಗಳು ನ್ಯಾನೋ ತಂತ್ರಜ್ಞಾನ ಮತ್ತು ಬಯೋ ಎಂಜಿನಿಯರಿಂಗ್ ಮೂಲಕ ಜನರ ಆರೋಗ್ಯವನ್ನು ಉತ್ತಮಪಡಿಸಬೇಕು ಎಂದರು.

ಡಾ. ವಾಸುದೇವ ಕೆ.ಆತ್ರೆ ಅವರು ತಮ್ಮ ಭಾಷಣದ ಪ್ರಾರಂಭದಲ್ಲಿ ಮೈಸೂರು ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಯಾದ ತಾವು ಈ ಬಾರಿಯ ಘಟಿಕೋತ್ಸವ ಭಾಷಣ ಮಾಡುತ್ತಿರುವುದು ತಮ್ಮ ಸೌಭಾಗ್ಯ. ತಮಗೆ ಈ ವಿವಿಯೇ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದ್ದನ್ನು ಸ್ಮರಿಸುವುದಾಗಿ ಹೇಳಿದರು. ಮೈಸೂರು ವಿಶ್ವವಿದ್ಯಾನಿಲಯ ನ್ಯಾಕ್ ಮೌಲ್ಯಮಾಪನದಲ್ಲಿ ಎ-ಗ್ರೇಡ್ ಪಡೆದಿರುವುದು ಸಂತಸದ ವಿಷಯ ಎಂದ ಅವರು, ಮುಂದಿನ ವರ್ಷಗಳಲ್ಲಿ ಈ ವಿಶ್ವವಿದ್ಯಾಲಯಕ್ಕೆ ಇನ್ನೂ ಹೆಚ್ಚಿನ ಯಶಸ್ಸು ದೊರೆಯಲಿ. ಇಂದು ಪದವಿ ಪಡೆದವರಿಗೆ ಮುಂದಿನ ದಶಕಗಳಲ್ಲಿ ಶುಭವಾಗಲಿ. ಈ ಭೂಮಿಯ ಪರಿಸರವನ್ನು ಕಾಪಾಡುವಲ್ಲಿ ಹಲವಾರು ಸವಾಲುಗಳು ನಿಮಗೆ (ಪದವೀಧರರು) ಎದುರಾಗಲಿವೆ. ಅವು ಅವಕಾಶಗಳೂ ಕೂಡ ಆಗಿರುವುದರಿಂದ ಅದನ್ನು ನಿಮ್ಮದಾಗಿಸಿಕೊಳ್ಳಿ ಎಂದು ಶುಭ ಹಾರೈಸಿದರು.

ಮನರಂಜನೆ 'ಯುವ ದಸರಾ' ಆರಂಭ

'ಗೀತಾ' ಚಿತ್ರದ ಜೊತೆಯಲಿ ಜೊತೆ ಜೊತೆಯಲಿ', 'ಅಧ್ಯಕ್ಷ' ಚಿತ್ರದ ಟೈಟಲ್ ಟ್ರ್ಯಾಕ್ ಹಾಗೂ 'ರ್‍ಯಾಂಬೊ-2' ಚಿತ್ರದ 'ಚುಟು ಚುಟು' ಹಾಡನ್ನು ಹಾಡುವ ಮೂಲಕ ಮೋಡಿ ಮಾಡಿದರು. ಇದೇ ವೇಳೆ ಮಾತನಾಡಿದ ಅವರು, ಮೈಸೂರು ಅಂದರೆ ದಸರಾ, ದಸರಾ ಅಂದರೆ ಯುವ ದಸರಾ. ಯುವ ದಸರಾ ಅಂದರೆ ಯುವ ಮನಸ್ಸುಗಳ ಹಬ್ಬ. ದಸರಾ ನಾಡಿನ ಹಬ್ಬ. ನಾನು ಇಲ್ಲಿಗೆ ಬಂದು ನಿಲ್ಲಲು ನೀವೆ ಕಾರಣ. ದಸರಾ ಸಮಯಕ್ಕೆ ಬರುವ ನನ್ನ ಸಿನಿಮಾಗಳು ಹಿಟ್ ಆಗಲು ನೀವೇ ಕಾರಣ. ಈ ಬಾರಿಯು ನನ್ನ ಸಿನಿಮಾ 'ಚೂ ಮಂತರ್' ಚಿತ್ರ ಬರುತ್ತಿದೆ. ಅದನ್ನು ಪ್ರೋತ್ಸಾಹಿಸಿ ಬೆಳೆಸಬೇಕು ಎಂದು ತಮ್ಮ ಮನವಿ ಮಾಡಿದರು.



ಅಜಯ್‌ರಾವ್ ಅಭಿಮಾನ: ಯುವ ದಸರಾ ವೇದಿಕೆಗೆ ತಾರ ಮೆರಗು ನೀಡಿದ ನಟ ಅಜಯ್‌ರಾವ್, ದಸರಾ ಹಬ್ಬದ ಶುಭಾಷಯ ತಿಳಿಸಿದರಲ್ಲದೆ ಮೈಸೂರು ತುಂಬಾ ಸುಂದರ ತಾಣವಾಗಿದೆ. ನಮ್ಮ ದೇಶದ ಭವಿಷ್ಯ ರೂಪಿಸುವುದು ಯುವ ಸಮೂಹದ ಕೈಯಲ್ಲಿದೆ. ಪ್ರತಿಯೊಬ್ಬರು ಜವಾಬ್ದಾರಿ ತೆಗೆದುಕೊಳ್ಳಬೇಕು. ಅದಕ್ಕೆ ಬೇಕಾದ ಸಂಸ್ಕೃತಿ, ಸಂಪ್ರದಾಯವನ್ನು ಅಳವಡಿಸಿಕೊಳುವುದುರ ಜೊತೆಗೆ ಬೆಳೆಸಿ. ತಮ್ಮಲ್ಲಿರುವ ಕೆಟ್ಟ ಚಟಗಳನ್ನು ಸೋಲಿಸಿ ಎಂದು ಕರೆ ನೀಡಿದರು.

ಹ್ಯಾಟ್ರಿಕ್ ಹೀರೋ ಖಡಕ್ ಡೈಲಾಗ್: 'ಘೋಸ್ಟ್' ಚಿತ್ರದ ಒಜಿ(ಒರಿಜಿನಲ್ ಗ್ಯಾಂಗ್‌ಸ್ಟಾರ್)ಬ್ಯಾಗ್‌ರೌಂಡ್ ಮ್ಯೂಸಿಕ್‌ನೊಂದಿಗೆ ವರ್ಣರಂಜಿತ ಯುವ ದಸರಾ ವೇದಿಕೆಗೆ ಆಗಮಿಸಿದ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್, ಪ್ರತಿಯೊಬ್ಬರು ಯುವ ದಸರಾದಲ್ಲಿ ಸಂಭ್ರಮಿಸಿ. ಆದರೆ ಓದುವ ಸಮಯದಲ್ಲಿ ಓದಬೇಕು. ತಂದೆ-ತಾಯಿಗಳಿಗೆ ಗೌರವ ಕೊಡಬೇಕು. ಲೈಫ್‌ನಲ್ಲಿ ಎಂಜಾಯ್ ಮಾಡಿ, ಆದರೆ ಎಂಜಾಯ್‌ಮೆಂಟ್ ಮಾಡುವುದೇ ಜೀವನವಾಗಬಾರದು ಎಂದು ಯುವ ಸಮೂಹಕ್ಕೆ ಕಿವಿ ಮಾತು ಹೇಳಿದರಲ್ಲದೆ 'ಘೋಸ್ಟ್' ಚಿತ್ರದ 'ನೀವ್ ಗನ್‌ನಿಂದ ಎಷ್ಟು ಜನರನ್ನು ಎದುರಿಸಿದ್ದಿರೋ ಅದಕ್ಕಿಂತ ಜಾಸ್ತಿ ಜನನಾ ನಾನ್ ಬರೀ ಕಣ್‌ನಿಂದ ಎದುರಿಸಿದ್ದೀನಿ ದೇ ಕೌನ್ ಒಜಿ.. ಒರಜಿನಲ್ ಗ್ಯಾಂಗ್‌ಸ್ಟಾರ್' ಎಂದು ಖಡಕ್ ಡೈಲಾಗ್ ಹೊಡೆದರು. ಬಳಿಕ 'ನ್ಯಾಯವೇ ದೇವರು' ಚಿತ್ರದ 'ಆಕಾಶವೇ ಬೀಳಲಿ ಮೇಲೆ ನಾನೆಂದು ನಿನ್ನವನು', 'ಆನಂದ್' ಚಿತ್ರದ 'ಟುವ್ವಿ ಟುವ್ವಿ ಎಂದು ಹಾಡುವ ಹೊಸ ಹಕ್ಕಿಯ ನೋಡಿದೆ', 'ಮುತ್ತಣ್ಣ' ಚಿತ್ರದ 'ಮುತ್ತಣ್ಣ ಪೀಪಿ ಊದುವ' ಹಾಡನ್ನು ಸುಮಧುರವಾಗಿ ಹಾಡುವುದರ ಜೊತೆಗೆ ಕುಣಿದು ಎಲ್ಲರನ್ನು ರಂಜಿಸಿದರು.

ಡ್ಯಾನ್ಸ್‌ಕಿಂಗ್ ವಿನೋದ್‌ರಾಜ್: ಯುವ ದಸರಾ ಸಂದರ್ಭದಲ್ಲಿ ಎಲ್ಲರಿಗೂ ತಾಯಿ ಚಾಮುಂಡೇಶ್ವರಿ ಆಶೀರ್ವಾದ ಮಾಡಲಿ ಎಂದ ಕನ್ನಡ ಚಿತ್ರರಂಗದ ಡ್ಯಾನ್ಸ್‌ಕಿಂಗ್ ವಿನೋದ್ ರಾಜ್‌ಕುಮಾರ್, ನನ್ನ ತಾಯಿ ಬಿಟ್ಟು ಮೊದಲ ಬಾರಿಗೆ ವೇದಿಕೆ ಕಾರ್ಯಕ್ರಮಕ್ಕೆ ಬಂದಿದ್ದೇನೆ. ನಿಮ್ಮೆಲ್ಲರ ಪ್ರೀತಿಗೆ ಋಣಿಯಾಗಿದ್ದೇನೆ ಎಂದರು. ನಂತರ 'ಡ್ಯಾನ್ಸ್ ಡ್ಯಾನ್ಸ್ ರಾಜ ಡ್ಯಾನ್ಸ್' ಹಾಡಿಗೆ ನೃತ್ಯ ಮಾಡುವ ಮೂಲಕ ಯುವ ಸಮೂಹದ ಮನಗೆದ್ದರು. ಇದಕ್ಕೂ ಮುನ್ನ ಗಾಯಕಿ ಐಶ್ವರ್ಯ ರಂಗರಾಜನ್ 'ಅಣ್ಣಬಾಂಡ್' ಚಿತ್ರದ 'ಕಾಣದಂತೆ ಮಾಯವಾದನು ನಮ್ಮ ಶಿವ', ಹಾಡು ಹಾಡಿದರೆ ಡ್ಯಾನ್ಸರ್ ನಿಮಿತಾ 'ಷೇಕ್ ಇನ್ ಪುಷ್ಪವತಿ' ಹಾಡಿಗೆ ನೃತ್ಯ ಪ್ರದರ್ಶನದ ಮಾಡುವ ಮೂಲಕ ಕುಣಿದು ಕುಪ್ಪಳಿಸುವಂತೆ ಮಾಡಿದರು.

ರಕ್ಷಿತ್ ಮಿಂಚು: '777 ಚಾರ್ಲಿ' ಸಿನಿಮಾ ಮೂಲಕ ಸಂಚಲನ ಸೃಷ್ಟಿಸಿದ ನಟ ರಕ್ಷಿತ್ ಶೆಟ್ಟಿ, 'ಸಪ್ತ ಸಾಗರದಾಚೆ ಎಲ್ಲೋ' ಚಿತ್ರದ ಯಶಸ್ಸಿನ ಕುರಿತು ಮಾತನಾಡಿದರು. ಕಡೆಯಲ್ಲಿ 'ಕೈ ತಟ್ರೋ ಲೇ...' ಎನ್ನುತ್ತಲೇ ಹಾಸ್ಯ ಚಟಾಕಿಯೊಂದಿಗೆ ವೇದಿಕೆ ಬಂದ ಸಾಧುಕೋಕಿಲ ಎಲ್ಲರನ್ನು ನಕ್ಕುನಲಿಸಿದರು. ಕಡೆಯಲ್ಲಿ ವೇದಿಕೆಗೆ ಆಗಮಿಸಿದ ಖ್ಯಾತ ನಟಿ ಪ್ರಿಯಾಂಕ ಉಪೇಂದ್ರ, ಮೈಸೂರಿಗರಿಗೆ ದಸರಾ ಶುಭಾಷಯ ತಿಳಿಸಿದರಲ್ಲದೆ ತಮ್ಮ ಮುಂದಿನ ಸಿನಿಮಾ ಕುರಿತು ಮಾತನಾಡಿದರು. ಹಾಗೆಯೇ ನಟ ವಿರಾಟ್ ಸೇರಿದಂತೆ ತಾರಾಬಳಗ ಯುವ ದಸರಾ ವೇದಿಕೆಗೆ ಅಪಾರ ಮೆರುಗು ತಂದರು.

ಜನಸ್ತೋಮ: ಯುವದಸರಾ ಮೊದಲ ದಿನ ಇಡೀ ಮಹರಾಜ ಕಾಲೇಜು ಮೈದಾನವೇ ಯುವ ಸಮೂಹದಿಂದ ತುಂಬಿ ತುಳುಕುತ್ತಿತ್ತು. ಸಂಜೆ 7 ಗಂಟೆಯವೆರಗೂ ಖಾಲಿಯಿದ್ದ ಚೇರ್‌ಗಳು 7 ಗಂಟೆ ನಂತರ ಸಂಪೂರ್ಣ ಭರ್ತಿಯಾಯಿತಲ್ಲದೆ ಕುಳಿತವರಿಗಿಂತ ನಿಂತು ಕುಣಿದು ಕುಪ್ಪಳಿಸುವವರೇ ಹೆಚ್ಚಾಗಿದ್ದರು.

ಮೈಸೂರಿನ ಪುರಭವನದ ಮಲ್ಟಿ ಲೆವೆಲ್ ಪಾರ್ಕಿಂಗ್ ಲೋಕಾರ್ಪಣೆ

ಕಾರುಗಳಿಗೆ ಮಾತ್ರ ಇಲ್ಲಿ ನಿಲುಗಡೆ ಅವಕಾಶ

● ಮೊದಲ ಒಂದು ಗಂಟೆಗೆ 30 ರೂ., ನಂತರ ಪ್ರತಿ ಗಂಟೆಗೆ 10 ರೂ.; ಇಡೀ ದಿನಕ್ಕೆ 60 ರೂ. ● ಪುರಭವನ ಆವರಣದಲ್ಲಿ ದ್ವಿಚಕ್ರ ವಾಹನಗಳ ನಿಲುಗಡೆಗೆ ಅವಕಾಶ ● ಸದ್ಯಕ್ಕೆ ಎರಡು ತಿಂಗಳ ಮಟ್ಟಿಗೆ 7 ಲಕ್ಷಕ್ಕೆ ಪಾರ್ಕಿಂಗ್ ಗುತ್ತಿಗೆ



ಮೈಸೂರು, ಅ.18(ಬಿಎಲ್‌ಯು)- ಮೈಸೂರಿನ ಪುರಭವನ ಆವರಣದಲ್ಲಿ ನಗರಪಾಲಿಕೆಯಿಂದ ನಿರ್ಮಾಣ ಮಾಡಿರುವ ಮಲ್ಟಿ ಲೆವೆಲ್ ಪಾರ್ಕಿಂಗ್ (ತಳ ಮಹಡಿ ವಾಹನ ನಿಲ್ದಾಣ) ಪ್ರದೇಶವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬುಧವಾರ ಲೋಕಾರ್ಪಣೆಗೊಳಿಸಿದರು.

ಮಲ್ಟಿ ಲೆವೆಲ್ ಪಾರ್ಕಿಂಗ್‌ನಲ್ಲಿ ಕಾರುಗಳ ನಿಲುಗಡೆಗೆ ಮಾತ್ರ ಅವಕಾಶ ನೀಡಲಾಗಿದ್ದು, ಗರಿಷ್ಠ 400 ಕಾರುಗಳನ್ನು ನಿಲ್ಲಿಸಬಹುದಾಗಿದೆ. ಸದ್ಯಕ್ಕೆ ಎರಡು ತಿಂಗಳ ಅವಧಿಗೆ ಈ ಮಲ್ಟಿ ಲೆವೆಲ್ ಪಾರ್ಕಿಂಗ್ ಪ್ರದೇಶವನ್ನು 7 ಲಕ್ಷ ರೂ.ಗೆ ಗುತ್ತಿಗೆ ನೀಡಲಾಗಿದೆ. ಇದೇ ವೇಳೆ ಕಾರ್ ಪಾರ್ಕಿಂಗ್ ದರ ಕೂಡ ನಿಗದಿ ಮಾಡಲಾಗಿದೆ. ಇಡೀ ದಿನ ಕಾರ್ ನಿಲುಗಡೆಗೆ 60 ರೂ. ನಿಗದಿ ಮಾಡಲಾಗಿದ್ದು, ಮೊದಲ ಒಂದು ಗಂಟೆಗೆ 30 ರೂ., ನಂತರ ಪ್ರತಿ ಗಂಟೆಗೆ 10 ರೂ. ಶುಲ್ಕ ವಿಧಿಸಲಾಗುತ್ತದೆ.

ಪುರಭವನದ ಆವರಣದಲ್ಲಿ ದ್ವಿಚಕ್ರ ವಾಹನಗಳ ನಿಲ್ದಾಣಕ್ಕೆ ಅವಕಾಶ ನೀಡಲಾಗಿದ್ದು, ದಿನಕ್ಕೆ 30 ರೂ. ನಿಗದಿ ಮಾಡಲಾಗಿದೆ. ಮೊದಲ ಒಂದು ಗಂಟೆಗೆ 10 ರೂ., ನಂತರದ ಪ್ರತಿ ಗಂಟೆಗೆ 5 ರೂ. ನಿಗದಿ ಮಾಡಲಾಗುತ್ತದೆ. ಕಳೆದ 13 ವರ್ಷಗಳಿಂದ ಕುಂಟುತ್ತಾ ಸಾಗಿದ್ದ ಮಲ್ಟಿ ಲೆವೆಲ್ ಪಾರ್ಕಿಂಗ್ ಕೊನೆಗೂ ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗಿದೆ. 2011ರಲ್ಲಿ ಮಲ್ಟಿ ಲೆವೆಲ್ ಪಾರ್ಕಿಂಗ್ ನಿರ್ಮಾಣ ಕಾಮಗಾರಿಯನ್ನು 18.02 ಕೋಟಿ ರೂ.ಗೆ ಗುತ್ತಿಗೆ ನೀಡಲಾಗಿತ್ತು. ಆದರೆ ಗುಣಮಟ್ಟದ ಕಾಮಗಾರಿ ನಡೆಯದಿರುವುದು ಸೇರಿದಂತೆ ಹಲವು ಕಾರಣಗಳಿಂದ 2016ರವರೆಗೆ ನಿರ್ಮಾಣ ಕಾರ್ಯ ಕುಂಟುತ್ತಾ ಸಾಗಿತ್ತು. 11 ಕೋಟಿ ವೆಚ್ಚದ ಕಾಮಗಾರಿ ನಡೆಸಿದ್ದ ಗುತ್ತಿಗೆದಾರ ಕೆಲಸ ಕೈಬಿಟ್ಟು ಹೋಗಿದ್ದ. ಆದರೆ ಆತನಿಗೆ 10 ಕೋಟಿ ರೂ.ವರೆಗೂ ಬಿಲ್ ಪಾವತಿಸಲಾಗಿತ್ತು ತರುವಾಯ 2021ರಲ್ಲಿ ಮತ್ತೆ 4.97 ಕೋಟಿ ರೂ.ಗೆ ಮರು ಗುತ್ತಿಗೆ ನೀಡಿ ಮಲ್ಟಿ ಲೆವೆಲ್ ಪಾರ್ಕಿಂಗ್ ಕಾಮಗಾರಿ ಪೂರ್ಣಗೊಳಿಸಲಾಗಿದೆ.

ಮಲ್ಟಿ ಲೆವೆಲ್ ಪಾರ್ಕಿಂಗ್ ಪ್ರದೇಶ ಉದ್ಘಾಟಿಸಿ ಮಾತನಾಡಿದ ಡಾ.ಮಹದೇವಪ್ಪ, ಪ್ರವಾಸಿಗರು ಹಾಗೂ ಸ್ಥಳೀಯರಿಗೆ ವಾಹನ ನಿಲುಗಡೆಗೆ ಬಹಳ ತೊಂದರೆಯಾಗಿತ್ತು. ಆದರೆ ಈಗ ವ್ಯವಸ್ಥಿತವಾಗಿ ಮಲ್ಟಿ ಲೆವೆಲ್ ಪಾರ್ಕಿಂಗ್ ನಿರ್ಮಾಣ ಮಾಡಿರುವ ಕಾರಣ ಪ್ರತಿಯೊಬ್ಬರಿಗೂ ಉಪಯೋಗವಾಗಲಿದೆ. ಜನರು ಇಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡಿ ಯಾವುದೇ ಕಿರಿಕಿರಿ ಇಲ್ಲದೆ ನಿರಾಳವಾಗಿ ನಗರ ವೀಕ್ಷಿಸಬಹುದು. ಇದರಿಂದ ಪ್ರವಾಸಿಗರಿಗೂ ಅನುಕೂಲವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಈಗ ಸದ್ಯಕ್ಕೆ ಇಲ್ಲಿ 400 ನಾಲ್ಕು ಚಕ್ರದ ವಾಹನಗಳು ನಿಲ್ಲಲು ಅವಕಾಶವಿದೆ. ಭವಿಷ್ಯದ ದಿನಗಳಲ್ಲಿ 2 ಸಾವಿರ ವಾಹನಗಳು ನಿಲ್ಲುವ ಮಲ್ಟಿ ಲೆವೆಲ್ ಪಾರ್ಕಿಂಗ್ ಪ್ರದೇಶ ಕಲ್ಪಿಸಿದರೆ ಜನರಿಗೆ ಮತ್ತಷ್ಟು ಅನುಕೂಲವಾಗಲಿದೆ ಎಂದರು. ನಗರದ ಸ್ವಚ್ಛತೆಗೆ ಪಾಲಿಕೆ ಹೆಚ್ಚು ಗಮನ ನೀಡಬೇಕು. ವಾಯುಮಾಲಿನ್ಯ ತಪ್ಪಿಸಿ ಕಡ್ಡಾಯವಾಗಿ ಪ್ಲಾಸ್ಟಿಕ್ ಬಳಕೆ ಮಾಡದಂತೆ ನಿಗಾವಹಿಸಬೇಕು. ಈ ಕಾರ್ಯ ಅನುಷ್ಠಾನ ಮಾಡಲು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಕಾರ್ಯೋನ್ಮುಖರಾಗಬೇಕು ಎಂದು ಸಲಹೆ ನೀಡಿದರು. ಶಾಸಕ ಕೆ.ಹರೀಶ್‌ಗೌಡ, ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ರೂಪ, ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್, ಉಪಆಯುಕ್ತ ಜಿ. ಸೋಮಶೇಖರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರಿನ ಮಹಾರಾಣಿ ಕಾಲೇಜಿನ ದುರಸ್ತಿ; ಹೊಸ ಕಟ್ಟಡ 140 ಕೋಟಿ ವೆಚ್ಚದಲ್ಲಿ ನಿರ್ಮಾಣ

ಜನವರಿ ನಂತರ ಕಾಮಗಾರಿ ಆರಂಭ: ಉನ್ನತ ಶಿಕ್ಷಣ ಸಚಿವ ಡಾ.ಸುಧಾಕರ್ ಮಾಹಿತಿ



ಮೈಸೂರು, ಅ.18(ಬಿಎಲ್‌ಯು)- ಮೈಸೂರಿನ ಮಹಾರಾಣಿ ಕಲಾ, ವಿಜ್ಞಾನ ಮಹಿಳಾ ಕಾಲೇಜು ಹಾಗೂ ವಿದ್ಯಾರ್ಥಿ ನಿಲಯ ಕಟ್ಟಡದ ದುರಸ್ತಿಯೂ ಸೇರಿದಂತೆ ಹೊಸ ಕಟ್ಟಡ ನಿರ್ಮಾಣವನ್ನು 140 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದ್ದು, ಜನವರಿ ನಂತರ ಕಾಮಗಾರಿ ಆರಂಭಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದರು.

ಮಹಾರಾಣಿ ಕಾಲೇಜಿಗೆ ಇಂದು ಭೇಟಿ ನೀಡಿ, ಕುಸಿದಿರುವ ಕಟ್ಟಡ ಪರಿಶೀಲಿಸಿದ ಅವರು, ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳ ಕುಂದು-ಕೊರತೆ ಆಲಿಸಿದರು.

ಶಿಥಿಲಾವಸ್ಥೆಗೊಂಡು ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡದ ಒಂದು ಭಾಗ ಕುಸಿದು ಬಿದ್ದಿದೆ. ಆದರೆ ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯವಾಗಿಲ್ಲ. ಕಾಲೇಜಿನ ಕಟ್ಟಡದ ಬಹಳಷ್ಟು ಭಾಗ ಇದೇ ರೀತಿ ಶಿಥಿಲಾವಸ್ಥೆಯಲ್ಲಿದೆ ಎಂದು ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಸಚಿವರಿಗೆ ದೂರು ನೀಡಿದರು.

ಮಹಾರಾಣಿ ಕಾಲೇಜು ಪಾರಂಪರಿಕ ಕಟ್ಟಡವಾಗಿದ್ದು, ಇದರ ಸಂರಕ್ಷಣೆಗೆ ಈಗಾಗಲೇ ಜಿಲ್ಲಾಧಿಕಾರಿ ಹಾಗೂ ಪುರಾತತ್ವ ಇಲಾಖೆ ಅಧಿಕಾರಿಗಳ ಜೊತೆ ಮಾತುಕತೆ ನಡೆಸಲಾಗಿದೆ. ಪಾರಂಪರಿಕ ಶೈಲಿಯಲ್ಲಿರುವ ಕಟ್ಟಡವನ್ನು ಸಂರಕ್ಷಿಸುವ ನಿಟ್ಟಿನಲ್ಲಿ ನವೀಕರಿಸಲಾಗುವುದು. ಜೊತೆಗೆ ಪಾರಂಪರಿಕ ಶೈಲಿಯಲ್ಲಿ 5 ಅಂತಸ್ತಿನ ಹೊಸ ಕಟ್ಟಡ ನಿರ್ಮಾಣಕ್ಕೆ ತೀರ್ಮಾನ ಮಾಡಲಾಗಿದೆ. ಇದರ ನಿರ್ಮಾಣಕ್ಕೆ 140 ಕೋಟಿ ಆಗಬಹುದೆಂದು ಅಂದಾಜಿಸಿದ್ದು, ಜನವರಿ ನಂತರ ಕಾಮಗಾರಿ ಆರಂಭಿಸಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ, ಮಹಾರಾಣಿ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ 7 ಸಾವಿರ ವಿದ್ಯಾರ್ಥಿಗಳಿದ್ದಾರೆ. ಆದರೆ ಹಾಸ್ಟೆಲ್‌ನಲ್ಲಿ ಕೇವಲ 600 ವಿದ್ಯಾರ್ಥಿಗಳಿಗೆ ಅವಕಾಶವಿದೆ. ಉಳಿದ ಸಾವಿರಾರು ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯವಿಲ್ಲ. ಈಗಿರುವ ಕಟ್ಟಡ ಕೂಡ ಹಲವು ಅವ್ಯವಸ್ಥೆಯಿಂದ ಕೂಡಿದೆ. ಈ ನಿಟ್ಟಿನಲ್ಲಿ 2 ಸಾವಿರ ವಿದ್ಯಾರ್ಥಿಗಳ ವಾಸ್ತವ್ಯಕ್ಕೆ ಹೊಸ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ ಎಂದರು.

ಪಾರಂಪರಿಕ ಶೈಲಿಯಲ್ಲಿರುವ ಕಟ್ಟಡವನ್ನು ನವೀಕರಿಸಿ ಅದನ್ನು ಸಂರಕ್ಷಿಸಲಾಗುವುದು. ಆದರೆ 70 ವರ್ಷ ಹಳೆಯದಾದ ಶಿಥಿಲಾವಸ್ಥೆಯಲ್ಲಿರುವ ಕಟ್ಟಡವನ್ನು ನೆಲಸಮಗೊಳಿಸಿ ಅಲ್ಲಿ ಹೊಸ ಕಟ್ಟಡ ನಿರ್ಮಿಸಲಾಗುತ್ತಿದೆ. ಇದರ ಜೊತೆಗೆ ಕಲಾ ಕಾಲೇಜಿನ ನವೀಕರಣಕ್ಕೆ ಈಗಾಗಲೇ 17 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಮರಿತಿಬ್ಬೇಗೌಡರು ತಿಳಿಸಿದರು. ಶಾಸಕ ಕೆ.ಹರೀಶ್‌ಗೌಡ ಸೇರಿದಂತೆ ಹಲವು ಅಧಿಕಾರಿಗಳು ಈ ವೇಳೆ ಹಾಜರಿದ್ದರು.

ಮೋದಿ ಟೀಕಿಸುತ್ತಿದ್ದ ಕುಮಾರಸ್ವಾಮಿ ಈಗ ಪದೇ ಪದೆ ಮೋದಿ ಭೇಟಿ ಮಾಡುತ್ತಿದ್ದಾರೆ!

ಸಚಿವ ಡಾ.ಎಂ.ಸಿ.ಸುಧಾಕರ್ ಗೇಲಿ

ಮೈಸೂರು, ಅ.18(ಬಿಎಲ್‌ಯು)- ನರೇಂದ್ರ ಮೋದಿ ಪ್ರಧಾನಿಯಾದ್ರೆ ದೇಶ ಬಿಟ್ಟು ಹೋಗುತ್ತೇನೆ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹೇಳಿದ್ದರು. ಅವರ ಪುತ್ರ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರು ಸಹ ಮೋದಿ ವಿರುದ್ಧ ಟೀಕಾಪ್ರಹಾರ ನಡೆಸುತ್ತಲೇ ಇದ್ದರು. ಆದರೆ ಈಗ ಪದೇ ಪದೆ ಮೋದಿ ಭೇಟಿ ಮಾಡುತ್ತಿದ್ದಾರೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಗೇಲಿ ಮಾಡಿದರು.

ಮೈಸೂರಿನಲ್ಲಿ ಮಾತನಾಡಿದ ಅವರು, ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಕೈಬಿಟ್ಟು ಕುಟುಂಬ ರಾಜಕಾರಣ ಮಾಡುತ್ತಿದ್ದಾರೆ. ಇಂತಹವರು ಕಾಂಗ್ರೆಸ್ ಬಗ್ಗೆ ಆರೋಪ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಬೆಂಗಳೂರಿನಲ್ಲಿ ಐಟಿ ದಾಳಿ ವೇಳೆ ಸಿಕ್ಕಹಣ ಎಸ್‌ಎಸ್‌ಟಿ ಹಾಗೂ ವೈಎಸ್‌ಟಿ ಟ್ಯಾಕ್ಸ್ ಅಂತ ಆರೋಪಿಸಿದ್ದಾರೆ. ನಾವು ಕೂಡ ಹೆಚ್‌ಡಿಕೆ ಟ್ಯಾಕ್ಸ್ ಅಂತ ಹೇಳಬಹುದಲ್ಲವೇ? ಎಂದು ಪ್ರಶ್ನಿಸಿದ ಡಾ.ಸುಧಾಕರ್, ಇವರ ಅವಕಾಶವಾದಿ ರಾಜಕಾರಣ ಎಲ್ಲರಿಗೂ ಗೊತ್ತಿದೆ ಎಂದರು.

ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ಜನ್ನಮನ್ನಣೆ ಗಳಿಸಿವೆ. ಇದು ಬಿಜೆಪಿಯವರ ನಿದ್ದೆಗೆಡಿಸಿದೆ. ಈ ಕಾರಣದಿಂದ ಕಾಂಗ್ರೆಸ್ ಸರ್ಕಾರದ ವಿರುದ್ಧ ಆಧಾರರಹಿತ ಆರೋಪ ಮಾಡುತ್ತಿದೆ ಎಂದು ತಿರುಗೇಟು ಕೊಟ್ಟರು.

ಕೇಂದ್ರದ ಬಿಜೆಪಿ ಸರ್ಕಾರ ಐಟಿ, ಇಡಿ ಮೂಲಕ ಪ್ರತಿಪಕ್ಷಗಳನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದೆ. ಕೇಂದ್ರ ಸರ್ಕಾರದ ಏಜೆನ್ಸಿಗಳನ್ನು ಸ್ವಾರ್ಥಕ್ಕೆ ಬಳಸಿಕೊಂಡು ಗೊಂದಲ ಸೃಷ್ಟಿಸುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸುಧಾಕರ್ ಆರೋಪಿಸಿದರು.

ಗಜಪಡೆ ಮಾವುತ, ಕಾವಾಡಿಗರ ಮಕ್ಕಳ ತಾತ್ಕಾಲಿಕ ಶಾಲೆಗೆ ಮಧು ಬಂಗಾರಪ್ಪ ಭೇಟಿ



ಮೈಸೂರು,ಅ.18(ಎಂಟಿವೈ)- ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ದಸರಾ ಗಜಪಡೆಯ ಮಾವುತ, ಕಾವಾಡಿಗಳ ಮಕ್ಕಳಿಗಾಗಿ ತೆರೆದಿರುವ ತಾತ್ಕಾಲಿಕ ಶಾಲೆಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಭೇಟಿ ನೀಡಿ ಮಕ್ಕಳೊಂದಿಗೆ ಬೆರೆತು, ಯೋಗಕ್ಷೇಮ ವಿಚಾರಿಸಿದರು.

ಮಕ್ಕಳ ದಸರಾ ಉದ್ಘಾಟಿಸಲು ಮೈಸೂರಿನ ಆಗಮಿಸಿದ ಸಚಿವ ಮಧು ಬಂಗಾರಪ್ಪ, ಡಿಡಿಪಿಐ ಹೆಚ್.ಕೆ.ಪಾಂಡು ಸೇರಿದಂತೆ ಇನ್ನಿತರ ಅಧಿಕಾರಿಗಳೊಂದಿಗೆ ಅರಮನೆಯ ಆವರಣದಲ್ಲಿರುವ ತಾತ್ಕಾಲಿಕ ಶಾಲೆಗೆ ಆಗಮಿಸಿದರು. ಈ ವೇಳೆ ಶಾಲೆಯಲಿ ಕಲಿಯುತ್ತಿರುವ ಮಾವುತ, ಕಾವಾಡಿಗಳ ಮಕ್ಕಳೊಂದಿಗೆ ಮಾತಿಗಿಳಿದರು. ಶಾಲೆಯಲ್ಲಿ ಕಲಿಯುತ್ತಿರುವ ವಿಷಯಗಳು, ಆನೆಗಳೊಂದಿಗಿನ ಒಡನಾಟ ಸೇರಿದಂತೆ ಇನ್ನಿತರ ವಿಷಯಗಳ ಬಗ್ಗೆ ಮಕ್ಕಳಿಂದಲೇ ಮಾಹಿತಿ ಪಡೆದರು.

ಈ ವೇಳೆ ತಾತ್ಕಾಲಿಕ ಶಾಲೆಯ ಶಿಕ್ಷಕರಿಂದ ಮಕ್ಕಳ ಕಲಿಕಾ ಆಸಕ್ತಿ ಬಗ್ಗೆ ಮಾಹಿತಿ ಪಡೆದರು. ಹಾಡಿ ಮಕ್ಕಳಲ್ಲಿರುವ ಪ್ರತಿಭೆ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳುವಿಕೆ. ಅಕ್ಷರಾಭ್ಯಾಸ ಸೇರಿದಂತೆ ಇನ್ನಿತರ ವಿಚಾರಗಳ ಬಗ್ಗೆ ಮಾಹಿತಿ ಪಡೆದು, ಮಕ್ಕಳನ್ನು ಪಠ್ಯೇತರ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವಂತೆ ಸಲಹೆ ನೀಡಿದರು.

ಕೇಂಧ್ರ ನೌಕರರಿಗೆ ದೀಪಾವಳಿ ಉಡುಗೊರೆ: ಶೇ.4ರಷ್ಟು ಡಿಎ ಹೆಚ್ಚಳ

ರೈಲ್ವೆ ನೌಕರರಿಗೆ 78 ದಿನಗಳ ಬೋನಸ್ ಘೋಷಣೆ!

ನವದೆಹಲಿ: ದೀಪಾವಳಿಗೂ ಮುನ್ನ ಕೇಂದ್ರ ಸರ್ಕಾರಿ ನೌಕರರು ಮತ್ತು ಪಿಂಚಣಿದಾರರಿಗೆ ಮೋದಿ ಸರ್ಕಾರ ಭರ್ಜರಿ ಗಿಫ್ಟ್ ನೀಡಿದೆ. ಕೇಂದ್ರ ಸಚಿವ ಸಂಪುಟವು ನೌಕರರ ತುಟ್ಟಿಭತ್ಯೆ (ಡಿಎ)ಯಲ್ಲಿ 4 ಪ್ರತಿಶತ ಹೆಚ್ಚಳಕ್ಕೆ ಅನುಮೋದನೆ ನೀಡಿದೆ. ಭತ್ಯೆ ಹೆಚ್ಚಳದ ನಂತರ ನೌಕರರ ಡಿಎ ಶೇ.42ರಿಂದ 46ಕ್ಕೆ ಏರಿಕೆಯಾಗಿದೆ.

ಪ್ರಧಾನಿ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ಸಂಬಂಧ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆ. ಹೆಚ್ಚಿದ ಡಿಎ ಜುಲೈ 1ರಿಂದ ಅನ್ವಯವಾಗಲಿದೆ. ಇದರಿಂದ ಒಂದು ಕೋಟಿಗೂ ಹೆಚ್ಚು ಕೇಂದ್ರ ಸರ್ಕಾರಿ ನೌಕರರು ಮತ್ತು ಪಿಂಚಣಿದಾರರಿಗೆ ಅನುಕೂಲವಾಗಲಿದೆ. ಕೇಂದ್ರವು ತನ್ನ ಉದ್ಯೋಗಿಗಳ ಡಿಎಯನ್ನು ವರ್ಷಕ್ಕೆ 2 ಬಾರಿ ಬದಲಾಯಿಸುತ್ತದೆ. ಇದಕ್ಕೂ ಮುನ್ನ ಜನವರಿಯಿಂದ ಡಿಎಯನ್ನು ಶೇ.4ರಷ್ಟು ಹೆಚ್ಚಿಸಲಾಗಿತ್ತು. ಅಲ್ಲದೆ, ರೈಲ್ವೆ ಉದ್ಯೋಗಿಗಳಿಗೆ 78 ದಿನಗಳ ಕಾರ್ಯಕ್ಷಮತೆ ಸಂಬಂಧಿತ ಬೋನಸ್ ನೀಡಲು ನಿರ್ಧರಿಸಲಾಗಿದೆ. ಇದಕ್ಕಾಗಿ 1,969 ಕೋಟಿ ರೂ. ಇದರಿಂದ 11 ಲಕ್ಷಕ್ಕೂ ಹೆಚ್ಚು ರೈಲ್ವೆ ನೌಕರರಿಗೆ ಅನುಕೂಲವಾಗಲಿದೆ.

7ನೇ ವೇತನ ಆಯೋಗದ ಶಿಫಾರಸುಗಳಿಗೆ ಅನುಗುಣವಾಗಿ ಕೇಂದ್ರ ನೌಕರರ ಡಿಎ ಹೆಚ್ಚಳ ಮಾಡಲಾಗಿದೆ. ಇದರಿಂದ 48.67 ಲಕ್ಷ ಕೇಂದ್ರ ಸರ್ಕಾರಿ ನೌಕರರು ಮತ್ತು 67.95 ಲಕ್ಷ ಪಿಂಚಣಿದಾರರು ಪ್ರಯೋಜನ ಪಡೆಯಲಿದ್ದಾರೆ. ಡಿಎ ಹೆಚ್ಚಳದಿಂದ ಸರ್ಕಾರದ ಬೊಕ್ಕಸಕ್ಕೆ ವಾರ್ಷಿಕ 12,857 ಕೋಟಿ ಹೊರೆ ಬೀಳಲಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ತಿಳಿಸಿದರು.

ಪ್ರಧಾನಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಮತ್ತು ಸಿಸಿಇಎ ಸಭೆಯಲ್ಲಿ 4 ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ. ಕೇಂದ್ರ ನೌಕರರ ಡಿಎ ಶೇ.42ರಿಂದ ಶೇ.46ಕ್ಕೆ ಏರಿಕೆಯಾಗಿದೆ. ಅಲ್ಲದೆ, 11 ಲಕ್ಷಕ್ಕೂ ಹೆಚ್ಚು ರೈಲ್ವೆ ಉದ್ಯೋಗಿಗಳಿಗೆ 78 ದಿನಗಳ ಬೋನಸ್ ನೀಡಲು ನಿರ್ಧರಿಸಲಾಗಿದೆ. ಮೂರನೇ ನಿರ್ಧಾರ ರೈತರಿಗೆ ಸಂಬಂಧಿಸಿದ್ದು, ಆರು ಬೆಳೆಗಳ ಎಂಎಸ್‌ಪಿ ಹೆಚ್ಚಿಸಲಾಗಿದೆ. ಎಣ್ಣೆಕಾಳು ಮತ್ತು ಸಾಸಿವೆ ಬೆಲೆ 200 ರೂ., ಉದ್ದಿನಬೇಳೆ 425 ರೂ., ಗೋಧಿ 150 ರೂ., ಬಾರ್ಲಿ 115 ರೂ., ಬೇಳೆ 105 ರೂ., ಸೂರ್ಯಕಾಂತಿ ಕ್ವಿಂಟಲ್‌ಗೆ 150 ರೂ. ಹೆಚ್ಚಿಸಲಾಗಿದೆ.

ಮೋಡಿ ಮಾಡಿದ ಪೊಲೀಸ್ ಬ್ಯಾಂಡ್ ಸಂಗೀತ



ಮೈಸೂರು, ಅ.18(ಎಸ್‌ಪಿಎನ್)- ಅಂಬ ವಿಲಾಸ ಅರಮನೆ ಮುಂಭಾಗದಲ್ಲಿ ಝಗಮಗಿಸುವ ವಿದ್ಯುತ್ ದೀಪಗಳ ನಡುವೆ ಕರ್ನಾಟಕ ಪೊಲೀಸ್ ಬ್ಯಾಂಡ್ ನಡೆಸಿಕೊಟ್ಟ ಶಾಸ್ತ್ರೀಯ ಹಾಗೂ ಪಾಶ್ಚಿಮಾತ್ಯ ವಾದ್ಯ ಸಂಗೀತ ಸುಧೆಗೆ ಕಲಾರಸಿಕರು ಭಾವ ಪರವಶರಾದರು.

ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಬುಧವಾರ ಅರಮನೆ ಆವರಣದಲ್ಲಿ ನಡೆದ 4ನೇ ದಿನದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಮೂಹ ವಾದ್ಯ ಮೇಳದಲ್ಲಿ ಪೊಲೀಸ್ ವಾದ್ಯವೃಂದ ಅಪಾರ ಜನಮೆಚ್ಚುಗೆಗೆ ಪಾತ್ರವಾಯಿತು.

ಗೃಹ ಸಚಿವ ಡಾ.ಜಿ.ಪರಮೇಶ್ವರ್, ಪತ್ನಿ ಕನ್ನಿಕಾ ಪರಮೇಶ್ವರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿಮಹದೇವಪ್ಪ, ಡಿಜಿ ಮತ್ತು ಐಜಿ ಡಾ.ಅಲೋಕ್ ಮೋಹನ್ ಹಾಗೂ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ದಕ್ಷಿಣ ವಲಯ ಐಜಿಪಿ ಬೋರಲಿಂಗಯ್ಯ, ಶಾಸಕರಾದ ತನ್ವೀರ್‌ಸೇಟ್, ಕೆ.ಹರೀಶ್ ಗೌಡ, ಟಿ.ಎಸ್.ಶ್ರೀವತ್ಸ ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ರೂಪ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಹಾಗೂ ಡಿಸಿಪಿ, ಎಸಿಪಿ ಹಾಗೂ ಇತರೆ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಮೂಡಿಬಂಧ ಆಕರ್ಷಿಕ ವಾದ್ಯಗೋಷ್ಠಿ ಜನರ ಮೆಚ್ಚುಗೆಗೆ ಕಾರಣವಾಯಿತು.

ಮೊದಲು ಗಣ್ಯರ ಆಗಮನಕ್ಕೆ ಗ್ರೂಪ್ ಕ್ಯಾಪ್ಟನ್ ಗೋಪಿನಾಥ್ ಅವರ ನೇತೃತ್ವದಲ್ಲಿ ಗೌರವ ಸಲ್ಲಿಸಿ, ವಿಶೇಷವಾಗಿ ನುಡಿಸಿದ ರಾಯಲ್ ಫನ್‌ಫೇರ್ ಶಿಸ್ತುಬದ್ಧ ನಡಿಗೆ ಮೂಲಕ ಅರಮನೆ ಆವರಣದಲ್ಲಿ ನೆರೆದಿದ್ದ ಪ್ರೇಕ್ಷಕರನ್ನು ಆಕರ್ಷಿಸಿತು. ನಂತರ ಹಂಸ್ತೆ ಲೂಶಾಯಿ ವಾದ್ಯಕ್ಕೆ ಕರ್ನಾಟಕ ಮತ್ತು ಇಂಗ್ಲಿಷ್ ಬ್ಯಾಂಡ್‌ನ ಸಮೂಹ ವಿಶೇಷ ನಡಿಗೆ ಗಣ್ಯರು ಭಾವ ಪರವಶರಾಗುವಂತೆ ಮಾಡಿತಲ್ಲದೆ, ಪ್ರೇಕ್ಷಕರಿಂದ ಚಪ್ಪಾಳೆ ಮೂಲಕ ಕಲಾವಿದರನ್ನು ಪ್ರೋತ್ಸಾಹಿಸಿದರು. ಬಳಿಕ ಕ್ವೀನ್ಸ್ ಕಲರ್ಸ್ ವಾದ್ಯಕ್ಕೆ ಪ್ರೇಕ್ಷಕರು ಮರುಳಾದರು.

ಅಂತೆಯೇ ಕನ್ನಡ ಚಲನಚಿತ್ರದ 'ಅಪಾರ ಕೀರ್ತಿ ಗಳಿಸಿ ಮೆರವ ಭವ್ಯ ನಾಡಿದು ಕರ್ನಾಟವಿದುವೆ ನೃತ್ಯ ಶಿಲ್ಪ ಬಿಡಿದು' ಹಾಡಿನ ವಾದ್ಯಕ್ಕೆ ನೆರೆದಿದ್ದ ಸಭಿಕರು ಜೋರು ಚಪ್ಪಾಳೆ ಮೂಲಕ ಕಲಾವಿದರನ್ನು ಮತ್ತಷ್ಟು ಹುರಿದುಂಬಿಸಿದರು. ಹಾಗೆಯೇ ಜಲ್ ಪಕ್ಷಿ ಸಂಯೋಜನೆಗೆ ಪೊಲೀಸರು ಹೆಜ್ಜೆ ಹಾಕಿದರು. ಅಂತೆಯೇ ಕರ್ನಾಟಕ ವಾದ್ಯ ವೃಂದವರು ವಿದ್ವಾನ್ ಮುತ್ತುಸ್ವಾಮಿ ದೀಕ್ಷಿತರು ರಚಿಸಿರುವ ಚಕ್ರವಾಕ ರಾಗ, ಆದಿ ತಾಳದಲ್ಲಿ 'ಗಜಾನನಯುತಂ' ಹಾಡು ನುಡಿಸಿ ಸಭಿಕರು ಸಂಗೀತ ಅಲೆಯಲ್ಲಿ ತೇಲಿಸಿದರು.

ಫ್ರೆಡ್ಡಿ ರಾಗ ಸಂಯೋಜನೆಯ ಎಲ್.ವಿ.ಬೇಥೂವನ್ ತಂಡದ ಲಯಬದ್ಧ ವಾದ್ಯಕ್ಕೆ ಪುಳಕಿತಗೊಂಡರು. ಬಳಿಕ ಕರ್ನಾಟಕ ವಾದ್ಯವೃಂದದಿಂದ ವಿದ್ವಾನ್ ಜಿ.ಎನ್.ಬಾಲಸುಬ್ರಮಣ್ಯಂ ರಚಿತ, ರಂಜಿನಿ ರಾಗ, ಆದಿತಾಳದಲ್ಲಿ ಅಮೋಘವಾಗಿ ಮೂಡಿಬಂದ 'ರಂಜನಿ ನಿರಂಜನಿ' ಗೀತೆ ನುಡಿಸಿದರಲ್ಲದೆ ಟೋನಿ ಮ್ಯಾಥ್ಯೂ ಮತ್ತು ಲುವಾ ದೀಪ ತಂಡದ ಲೆವಿಟಿಂಗ್ ಹಾಗೂ ಲ್ಯಾಟಿನಾ ಪಾಪ್ ಸರಣಿ ವಾದನ ಕಂಡು ಪ್ರೇಕ್ಷಕರು ಚಪ್ಪಾಳೆ ಮೂಲಕ ಬೆಂಬಲಿಸಿದರು.

'ಡ್ರಮ್ಮರ್ಸ್ ಡಿಲೈಟ್' ವಾದನ, ರಿವ್ಯೂ ಆರ್ಡರ್ ಹಾಗೂ ಅಬೈಡ್ ಮಿತ್ ಮಿ ನುಡಿಸಿ ಶಾಸ್ತ್ರೀಯ ಮತ್ತು ಪೊಲೀಸ್ ಬ್ಯಾಂಡ್ ವಾದ್ಯವೃಂದದ ವಾದ್ಯದ ಮೂಲಕ ಮುಕ್ತಾಯಗೊಳಿಸಲಾಯಿತು. ನಂತರ 'ಸಾರೆ ಜಹಾಂಸೆ ಅಚ್ಚಾ ಗೀತೆ' ಮೂಲಕ ಎಲ್ಲಾ ಬ್ಯಾಂಡ್‌ಗಳ ಅರಮನೆ ಭೂಮಿಕೆಯಿಂದ ನಿರ್ಗಮಿಸಿದವು.

2023ನೇ ಸಾಲಿನ ದಸರಾ ಮಹೋತ್ಸವ ಪ್ರಯುಕ್ತ ನಡೆದ ಸಮೂಹ ವಾದ್ಯ ಮೇಳ(ಬಿಗ್ ಬ್ಯಾಂಡ್)ದಲ್ಲಿ ಮೈಸೂರು ಕೆಎಸ್‌ಆರ್‌ಪಿ 5ನೇ ಪಡೆಗೆ ಮೊದಲ ಬಹುಮಾನ, ಹಾಸನ ಕೆಎಸ್‌ಆರ್‌ಪಿ 11ನೇ ಪಡೆಗೆ ಎರಡನೇ ಬಹುಮಾನವನ್ನು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರಿಂದ ಸ್ವೀಕರಿಸಿದರು. ಮೀಡಿಯಂ ಬ್ಯಾಂಡ್ ವಿಭಾಗದಿಂದ ಶಿವಮೊಗ್ಗ ಕೆಎಸ್‌ಆರ್‌ಪಿ 8ನೇ ಪಡೆಯ ಪರವಾಗಿ ಕ್ಯಾಪ್ಟನ್ ಎನ್.ಕೆ.ಪ್ರವೀಣ್ ಹಾಗೂ ಬೆಂಗಳೂರು ಕೆಎಸ್‌ಆರ್‌ಪಿ 4ನೇ ಪಡೆ ದ್ವಿತೀಯ ಬಹುಮಾನ ಪಡೆಯಿತು. ಸ್ಮಾಲ್ ಬ್ಯಾಂಡ್ ವಿಭಾಗದಲ್ಲಿ ಉಡುಪಿ ಡಿಎಆರ್ ತಂಡ ಮೊದಲನೇ ಬಹುಮಾನ ಪಡೆದರೆ, ಬೆಳಗಾವಿ ಕೆಎಸ್‌ಆರ್‌ಪಿ 2ನೇ ಪಡೆ ದ್ವಿತೀಯ ಬಹುಮಾನ ಗಳಿಸಿತು. ನಂತರ ಇಂಗ್ಲಿಷ್ ಬ್ಯಾಂಡ್ ಕ್ಯಾಪ್ಟನ್ ಬಿ.ಮಂಜುನಾಥ್, ಕರ್ನಾಟಕ ವೃಂದ ಕ್ಯಾಪ್ಟನ್ ತಮ್ಮ ತಮ್ಮ ತಂಡದ ಪರವಾಗಿ ವಿಶೇಷ ಬಹುಮಾನ ಪಡೆದರು. 'ವಂದೇ ಮಾತರಂ' ಹಾಡಿಗೆ ವಾದ್ಯ ನುಡಿಸಿ ಕಾರ್ಯಕ್ರಮ ಮುಕ್ತಾಯಗೊಳಿಸಲಾಯಿತು. ಇದಕ್ಕೂ ಮುನ್ನ ಅರ್ಪಣ ವಿನೋಧ್ ಮೆನನ್ ಮತ್ತು ತಂಡದಿಂದ ಭರತನಾಟ್ಯ, ಡಾ.ಕಿಕ್ಕೇರಿ ಕೃಷ್ಣಮೂರ್ತಿ ಮತ್ತು ಡಾ.ಅಪ್ಪುಗೆರೆ ತಿಮ್ಮರಾಜು ಮತ್ತು ತಂಡದಿಂದ ಕನ್ನಡವೇ ಸತ್ಯ ಭಾವಗೀತೆ, ಜನಪದಗೀತೆಗಳನ್ನು ಹಾಡಿದರು. ಬಳಿಕ ಪದ್ಮಶ್ರೀ ಶುಭಾ ಮುದ್ಗಲ್ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನು ಅಮೋಘವಾಗಿ ನಡೆಸಿಕೊಟ್ಟರು.

ಕರ್ನಾಟಕ ವಾದ್ಯವೃಂದದಿಂದ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಚಲನಚಿತ್ರದ ಚಿ.ಉದಯಶಂಕರ್ ರಚಿತ, ರಾಗಮಾಲಿಕೆ ರಾಗದ ಆದಿತಾಳದಲ್ಲಿ ಸಂಯೋಜನೆಗೊಂಡಿರುವ 'ನಾದಮಯ' ಹಾಡಿಗೆ ಪ್ರೇಕ್ಷಕರು ಭಕ್ತಿಯ ಅಲೆಯಲ್ಲಿ ತೇಲುವಂತೆ ಮಾಡಿದರು. ಇಂಗ್ಲಿಷ್ ಬ್ಯಾಂಡ್ ತಂಡದಿಂದ ಎಂ.ಬೋನಿ ಸಂಯೋಜನೆಯ 'ಬಹಮ ಮಾಮ' ವಾದ್ಯವು ಸಭಿಕರ ಮೆಚ್ಚುಗೆ ಪಾತ್ರವಾಯಿತು. ಕರ್ನಾಟಕ ಮತ್ತು ಇಂಗ್ಲಿಷ್ ವೃಂದದವರಿಂದ ಶ್ಯಾಮ್ ಹಾಡಿಗೆ ಜುಗಲ್‌ಬಂದಿ ವಾದನ ಕೇಳುಗರ ಮನಸೂರೆಗೊಂಡಿತು.

ನಡಾಡಿ ಗ್ರಾಮದಲ್ಲಿ ಕಾಡಾನೆ ದಾಳಿ; ರೈತ ಬಲಿ

• ಬಹಿರ್ದೆಸೆಗೆ ತೆರಳಿದ್ದ ಮಾಲೇಗೌಡ ಸಾವು • ಅರಣ್ಯ ಇಲಾಖೆ ವಿರುದ್ಧ ಗ್ರಾಮಸ್ಥರ ಆಕ್ರೋಶ



ಸರಗೂರು, ಅ.18–ಬಹಿರ್ದೆಸೆಗೆ ತೆರಳಿದ್ದ ರೈತ ನೋರ್ವ ಕಾಡಾನೆ ದಾಳಿಯಿಂದ ಮೃತಪಟ್ಟಿರುವ ಘಟನೆ ತಾಲೂಕಿನ ನಡಾಡಿ ಗ್ರಾಮದಲ್ಲಿ ಬುಧವಾರ ಬೆಳಗ್ಗೆ ನಡೆದಿದೆ.

ಗ್ರಾಮದ ಚಿಕ್ಕೇಗೌಡರ ಮಗ ಮಾಲೇಗೌಡ (58) ಮೃತ ರೈತ. ಈತ ಬೆಳಗ್ಗೆ 6 ಗಂಟೆಯಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ಮೋಳಿಯೂರು ವಲಯ ವ್ಯಾಪ್ತಿಯ ಸಮೀಪದ ತಮ್ಮ ಜಮೀನಿನ ಪಕ್ಕ ಬಹಿರ್ದೆಸೆಗೆ ತೆರಳಿದ್ದಾರೆ. ಈ ವೇಳೆ ಅರಣ್ಯ ಪ್ರದೇಶದಿಂದ ಆಹಾರ ಅರಸಿ ಬಂದಿದ್ದ ಕಾಡಾನೆ ಮಾಲೇಗೌಡನ ಮೇಲೆ ಏಕಾಏಕಿ ದಾಳಿ ನಡೆಸಿ, ಕೊಂದುಹಾಕಿದೆ. ಘಟನೆ ತಿಳಿದ ಗ್ರಾಮಸ್ಥರು ಮೋಳಿಯೂರು ವಲಯ ಅರಣ್ಯಾಧಿಕಾರಿಗಳಿಗೆ ರೈತ ಮಾಲೇಗೌಡ ಸಾವಿನ ವಿಷಯ ತಿಳಿಸಿದ್ದಾರೆ. ನಂತರ ಸ್ಥಳಕ್ಕೆ ಭೇಟಿ ನೀಡಿದ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದರು.

ಅರಣ್ಯ ಇಲಾಖೆ ವಿರುದ್ಧ ಆಕ್ರೋಶ: ಇದೇ ವೇಳೆ ರೊಚ್ಚಿಗೆದ್ದ ಗ್ರಾಮಸ್ಥರು ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕಾಡಂಚಿನ ಗ್ರಾಮಗಳ ರೈತರಿಗೆ ಸೂಕ್ತ ರಕ್ಷಣೆ ಇಲ್ಲದಾಗಿದೆ. ಜಮೀನಿನಲ್ಲಿ ಜೀವ ಹಿಡಿದುಕೊಂಡು ಕೃಷಿ ಕೆಲಸ ಮಾಡಬೇಕಾದ ಪರಿಸ್ಥಿತಿ ಉಂಟಾಗಿದೆ. ಹೀಗಾಗಿ ಕೂಡಲೇ ಅರಣ್ಯ ಅಧಿಕಾರಿಗಳು ರೈತರಿಗೆ ರಕ್ಷಣೆ ನೀಡಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಡಂಚಿನ ಗ್ರಾಮಗಳು ಹಾಗೂ ರೈತರ ಜಮೀನುಗಳಿಗೆ ಕಾಡುಪ್ರಾಣಿಗಳಿಂದ ರಕ್ಷಣೆ ಒದಗಿಸಬೇಕು. ಸರಿಯಾಗಿ ರೈಲ್ವೆ ಬ್ಯಾರಿಕೇಡ್ ಕಾಮಗಾರಿ ನಡೆಸದೆ ಇರುವ ಕಾರಣ ಕಾಡಿನಿಂದ ಆನೆಗಳು ಬ್ಯಾರಿಕೇಡ್ ಮೇಲೆ ಹತ್ತಿ ಬರುತ್ತಿವೆ. ಕೆಲ ಕಾಡುಪ್ರಾಣಿಗಳು ಬ್ಯಾರಿಕೇಡ್ ಮಧ್ಯದಲ್ಲೇ ನುಸುಳಿ ಬರುತ್ತಿವೆ. ಆದ್ದರಿಂದ ಬ್ಯಾರಿಕೇಡ್ ಮಧ್ಯ ಭಾಗದಲ್ಲಿ ಮತ್ತೊಂದು ರೈಲ್ವೆ ಕಂಬಿಗಳನ್ನು ಅಳವಡಿಸಬೇಕು. ಆನೆ ಕಂದಕಗಳಲ್ಲಿ ತುಂಬಿರುವ ಹೂಳು ತೆಗೆಸಬೇಕು. ಅನ್ನದಾತರ ಹಿತಕಾಪಾಡಲು ಮುಂದಾಗಬೇಕು ಎಂದು ಅರಣ್ಯಾಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.



ನಂತರ ಸ್ಥಳಕ್ಕೆ ಆಗಮಿಸಿದ ಎಸಿಎಫ್ ಪರಮೇಶ್, ಸಿಸಿಎಫ್ ರಮೇಶ್‌ಕುಮಾರ್ ಮಾತನಾಡಿ, 20 ಕಿ.ಮೀ. ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ 30 ಕೋಟಿ ರೂ. ಅನುದಾನ ಬಂದಿದೆ. ಮೋಳಿಯೂರು ಅರಣ್ಯ ವ್ಯಾಪ್ತಿಗೆ ಹೆಚ್ಚು ಅನುದಾನ ಬಳಸಲಾಗುವುದು. ಗ್ರಾಮಸ್ಥರು ತಿಳಿಸಿದಂತೆ ಬ್ಯಾರಿಕೇಡ್ ದುರಸ್ತಿ ಹಾಗೂ ಉಳಿಕೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು. ಒಂದು ಹೊಸ ಅರಣ್ಯ ಸಂಚಾರಿ ವಾಹನವನ್ನು ಈ ವ್ಯಾಪ್ತಿಗೆ ನೀಡಲಾಗಿದೆ. ಕಾಡಾನೆಗಳ ಹಾವಳಿ ತಪ್ಪಿಸಿ, ರೈತರಿಗೆ ರಕ್ಷಣೆ ನೀಡಲು ಅರಣ್ಯ ಇಲಾಖೆ ಮುಂದಾಗಲಿದೆ ಎಂದು ಭರವಸೆ ನೀಡಿದರು.

ನಂತರ ಬಿ.ಮಟಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಶವ ಪರೀಕ್ಷೆ ನಡೆಸಿ, ಮೃತದೇಹವನ್ನು ಕುಟುಂಬಸ್ಥರಿಗೆ ನೀಡಲಾಯಿತು. ಮೃತ ರೈತನಿಗೆ ಪತ್ನಿ, ಇಬ್ಬರು ಪುತ್ರರು, ಒಬ್ಬ ಪುತ್ರಿ ಇದ್ದಾರೆ. ಈ ಸಂಬಂಧ ಸರಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇದೇ ವೇಳೆ ಡಿವೈಎಸ್‌ಪಿ ಗೋಪಾಲಕೃಷ್ಣ, ಹುಣಸೂರು ಸಿಪಿಐ ಲಕ್ಷ್ಮಿಕಾಂತ್, ಪಿಎಸ್‌ಐಗಳಾದ ನಂದೀಶ್ ಕುಮಾರ್, ರವಿಶಂಕರ್, ಆರ್‌ಎಫ್‌ಒ ಅಮೃತ ಮಾಯಪ್ಪನವರ್, ಮಂಜುನಾಥ್, ಪುನೀತ್ ಕುಮಾರ್, ನಾರಾಯಣ್, ಗುಡಿಗೌಡರಾದ ಪುಟ್ಟೇಗೌಡ, ಚಿಕ್ಕಸ್ವಾಮಪ್ಪ, ರೈತ ಮುಖಂಡರಾದ ಅಣ್ಣಯ್ಯಸ್ವಾಮಿ, ಎಂ.ಬಿ. ಆನಂದ, ಭೀಮರಾಜ್, ಪಿ.ರವಿ, ದೇವರಾಜ್, ನಾಗೇಶ್, ಬೆಟ್ಟಸ್ವಾಮಿ, ಅರಣ್ಯ, ಪೊಲೀಸ್ ಸಿಬ್ಬಂದಿ ಹಾಜರಿದ್ದರು.

15 ಲಕ್ಷ ರೂ. ಪರಿಹಾರ ಚೆಕ್ ವಿತರಣೆ

ಕಾಡಾನೆ ದಾಳಿಯಿಂದ ಮೃತಪಟ್ಟ ಮಾಲೇಗೌಡರ ಪತ್ನಿ ನಾಗಮ್ಮ ಅವರಿಗೆ ಅರಣ್ಯ ಇಲಾಖೆಯಿಂದ ನೀಡುವ ಪರಿಹಾರದ 15 ಲಕ್ಷ ರೂ. ಚೆಕ್ ಅನ್ನು ಶಾಸಕ ಅನಿಲ್ ಚಿಕ್ಕಮಾದು ವಿತರಿಸಿದರು. ಪತ್ನಿ ನಾಗಮ್ಮಗೆ ಐದು ವರ್ಷದವರೆಗೆ ಮಾಸಿಕ 4 ಸಾವಿರ ರೂ. ವೇತನ ಹಾಗೂ ಕುಟುಂಬದ ಒಬ್ಬ ಸದಸ್ಯರಿಗೆ ಅರಣ್ಯ ಇಲಾಖೆಯಲ್ಲಿ ಕೆಲಸ ನೀಡುವುದಾಗಿ ಎಸಿಎಫ್ ಪರಮೇಶ್ ಮತ್ತು ಸಿಸಿಎಫ್ ರಮೇಶ್‌ಕುಮಾರ್ ಭರವಸೆ ನೀಡಿದರು.

ಅರಣ್ಯ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಯಿಂದ ಇಂತಹ ಘಟನೆಗಳು ಮರುಕಳಿಸುತ್ತಿವೆ. ಈಗಾಗಲೇ ಕಾಡಂಚಿನ ಗ್ರಾಮಗಳ ಸಮಸ್ಯೆಗಳನ್ನು ಅರಣ್ಯ ಸಚಿವರ ಗಮನಕ್ಕೆ ತರಲಾಗಿದೆ. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ನಡೆದರೆ ಈ ಭಾಗದ ಅರಣ್ಯಾಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ಎಚ್ಚರಿಸಿದರು.



ತಿ.ನರಸೀಪುರ ತಾಲೂಕಿನ ಮೂಗೂರು ಗ್ರಾಮದ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯಕ್ಕೆ ಬುಧವಾರ ಹೈಕೋರ್ಟ್ ನ್ಯಾಯಮೂರ್ತಿ ದೇವದಾಸ್ ಹಾಗೂ ಅವರ ಕುಟುಂಬದವರು ಭೇಟಿ ನೀಡಿ, ದೇವಿಯ ದರ್ಶನ ಪಡೆದರು. ದೇಗುಲದ ಅರ್ಚಕರಾದ ನಂಜುಂಡಸ್ವಾಮಿ, ಅಭಿಷೇಕ್, ರವಿಶಂಕರ್, ಬದನವಾಳು ಪ್ರದೀಪ್ ಇದ್ದರು.

ಇಂದು ಪೆರುಮಾಳ್ ದೇವಸ್ಥಾನದಲ್ಲಿ ಕುಂಭಾಭಿಷೇಕ

ನಂಜನಗೂಡು, ಅ.18–ಇಲ್ಲಿನ ಊಟಿ ಮುಖ್ಯರಸ್ತೆಯ ಚಾಮುಂಡಿ ಟೌನ್‌ಶಿಪ್ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಶ್ರೀನಿವಾಸ ಪೆರುಮಾಳ್ ದೇವಸ್ಥಾನದಲ್ಲಿ ಅ.19ರಂದು ಕುಂಭಾಭಿಷೇಕ ಮಹೋತ್ಸವ ನಡೆಯಲಿದೆ.

ಪ್ರೊ.ಡಾ.ಭಾಷ್ಯಂ ಸ್ವಾಮೀಜಿ ನೇತೃತ್ವದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಅಂದು ಬೆಳಗ್ಗೆ 10 ಗಂಟೆಗೆ ಕುಂಭಾಭಿಷೇಕದ ಪೂಜಾ ಕಾರ್ಯಗಳು ನಡೆಯಲಿವೆ. ಬೆಳಗ್ಗೆ 11 ಗಂಟೆಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಭಿವೃದ್ಧಿ ಕಾಮಗಾರಿಗಳಿಗೆ ಕ್ರಿಯಾ ಯೋಜನೆ



ಹೆಚ್.ಡಿ.ಕೋಟೆ, ಅ.18–ಹೆಚ್.ಡಿ.ಕೋಟೆ ಹಾಗೂ ಸರಗೂರು ಭಾಗದಲ್ಲಿ ನಿವೇಶನ ಹಾಗೂ ವಸತಿ ಇಲ್ಲದವರಿಗೆ ಮನೆ ನಿರ್ಮಿಸಿ ಕೊಡಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕಿನ ಬಡಕುಟುಂಬಗಳಿಗೆ ನಿವೇಶನ ಹಾಗೂ ಮನೆ ನಿರ್ಮಿಸಿಕೊಡುವ ಜತೆಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಕ್ರಿಯಾ ಯೋಜನೆ ರೂಪಿಸಲಾಗಿದೆ. ಹ್ಯಾಂಡ್‌ಪೋಸ್ಟ್‌ನಿಂದ ಹೆಚ್.ಡಿ.ಕೋಟೆ ಹಾಗೂ ಸರಗೂರು ಪಟ್ಟಣದವರೆಗೆ ಜೋಡಿರಸ್ತೆ ನಿರ್ಮಿಸಲಾಗುವುದು ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಬಿನಿ ಜಲಾಶಯ ನಿರ್ಮಾಣಗೊಂಡು 50 ವರ್ಷ ಕಳೆದಿದೆ. ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಅದ್ಧೂರಿಯಾಗಿ ಆಚರಿಸಲು ಸಿದ್ಧತೆಯಾಗಿತ್ತು. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿ ರಾಜ್ಯದಲ್ಲಿ ಬರ ಇರುವುದರಿಂದ ಬೇಡ. ಮುಂದಿನ ವರ್ಷ ಆಚರಿಸೋಣ ಎಂದು ಹೇಳಿದ್ದಾರೆ. ಆದ್ದರಿಂದ ಕಬಿನಿ ಸುವರ್ಣ ಮಹೋತ್ಸವವನ್ನು ಮುಂದೂಡಲಾಗಿದೆ ಎಂದು ಹೇಳಿದರು.

ತಾಲೂಕಿನ ವಿವಿಧ ಶಾಲೆಗಳಲ್ಲಿ ನೂತನವಾಗಿ 160 ಕಟ್ಟಡಗಳನ್ನು ನಿರ್ಮಿಸಲಾಗಿದೆ. 180 ಶಾಲೆಗಳಲ್ಲಿ ದುರಸ್ತಿ ಕಾರ್ಯ ಮಾಡಲಾಗಿದೆ. ನವೆಂಬರ್‌ನಲ್ಲಿ ನಮ್ಮ ತಂದೆ ದಿ.ಚಿಕ್ಕಮಾದು ಮತ್ತು ಮಾಜಿ ಸಂಸದ ದಿ.ಧ್ರುವನಾರಾಯಣ್ ಅವರ ಹೆಸರಿನಲ್ಲಿ ಉದ್ಯೋಗ ಮೇಳ ನಡೆಸಲಾಗುವುದು. ಜತೆಗೆ ಉದ್ಯೋಗ ಸೃಷ್ಟಿಗಾಗಿ ಕಾರ್ಖಾನೆಯನ್ನು ಸ್ಥಾಪಿಸಲು ನೂರು ಎಕರೆಯನ್ನು ಗುರುತಿಸುವ ಕೆಲಸ ನಡೆಯುತ್ತಿದೆ. ಬಿದರಹಳ್ಳಿ ಗ್ರಾಮದಲ್ಲಿ 60 ಎಕರೆ ಜಾಗವನ್ನು ಗುರುತಿಸಲಾಗಿದೆ ಎಂದರು.

ಸರಗೂರು ನೂತನ ತಾಲೂಕು ಆಗಿರುವುದರಿಂದ ಮೂಲ ಸೌಕರ್ಯ ಒದಗಿಸಲಾಗುವುದು. ಈಗಾಗಲೇ ಎರಡು ತಾಲೂಕಿನಲ್ಲಿ ಹಲವಾರು ಅಭಿವೃದ್ಧಿ ವಿಚಾರವಾಗಿ ಅಧಿಕಾರಿಗಳೊಡನೆ ಸಭೆ ನಡೆಸಿ, ಕ್ರಿಯಾ ಯೋಜನೆ ಪಟ್ಟಿ ತಯಾರಿಸಲಾಗಿದೆ. ಈಗಾಗಲೇ ಸರಗೂರು ತಾಲೂಕಿನಲ್ಲಿ 230 ನಿವೇಶನಗಳನ್ನು ಹಂಚಿಕೆ ಮಾಡಲಾಗಿದ್ದು, ಇನ್ನು 113 ನಿವೇಶನಗಳನ್ನು ಸದ್ಯದಲ್ಲೇ ಹಂಚಿಕೆ ಮಾಡಲಾಗುವುದು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಸತೀಶ್ ಆರಾಧ್ಯ, ಮುಖಂಡ ನಾಗನಹಳ್ಳಿ ಪ್ರದೀಪ ಹಾಜರಿದ್ದರು.

ಭೂಮಿ ವಾಪಸ್ ಕೊಡಿಸುವಂತೆ ಸಚಿವರಿಗೆ ರೈತರ ಮನವಿ ಸಲ್ಲಿಕೆ



ನಂಜನಗೂಡು, ಅ.18–ಗುತ್ತಿಗೆ ಅವಧಿ ಮುಕ್ತಾಯವಾದರೂ ಮೈಸೂರು ಮಿನರಲ್ಸ್ ಕಂಪನಿ ನಮ್ಮ ಭೂಮಿಯನ್ನು ಬಿಟ್ಟುಕೊಡದೆ ತಕರಾರು ಮಾಡುತ್ತಿದ್ದು, ಕೃಷಿ ಜಮೀನನ್ನು ವಾಪಸ್ ಕೊಡಿಸುವಂತೆ ಒತ್ತಾಯಿಸಿ ತಾಲೂಕಿನ ಹುಲ್ಲಹಳ್ಳಿ ಹೋಬಳಿಯ ಕಾರ್ಯ ಗ್ರಾಮದ ರೈತರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಮನವಿ ಸಲ್ಲಿಸಿದರು.

ಇದೇ ವೇಳೆ ಮಾತನಾಡಿದ ವೀರಶೈವ–ಲಿಂಗಾಯತ ಮಹಾಸಭಾದ ತಾಲೂಕು ಅಧ್ಯಕ್ಷ ಬುಲೆಟ್ ಮಹದೇವಪ್ಪ, ಕಾರ್ಯ ಗ್ರಾಮದ ರೈತರ 80 ಎಕರೆ ಕೃಷಿ ಭೂಮಿಯನ್ನು ಮೈಸೂರು ಮಿನರಲ್ಸ್ ಕಂಪನಿಯವರು ಗಣಿಗಾರಿಕೆಗಾಗಿ 20 ವರ್ಷ ಗುತ್ತಿಗೆ ಪಡೆದಿದ್ದರು. ಆದರೆ, ಗುತ್ತಿಗೆ ಅವಧಿ ಮುಗಿದರೂ ಭೂಮಿಯನ್ನು ಹಿಂತಿರುಗಿಸದೆ ರೈತರನ್ನು ವಂಚಿಸುತ್ತಿದ್ದಾರೆ. ಮಿನರಲ್ಸ್ ಕಂಪನಿ ವಿರುದ್ಧ ಪ್ರತಿಭಟನೆ ನಡೆಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಅಧಿಕಾರಿಗಳು ಸಹ ರೈತರ ಪರವಾಗಿ ಕೆಲಸ ಮಾಡುತ್ತಿಲ್ಲ. ಇದರಿಂದ ರೈತರಿಗೆ ಅನ್ಯಾಯವಾಗುತ್ತಿದೆ. ಆದ್ದರಿಂದ ನೀವೇ ಮಧ್ಯೆ ಪ್ರವೇಶಿಸಿ ರೈತರ ಹಿತ ಕಾಪಾಡಬೇಕು ಎಂದು ಮನವಿ ಮಾಡಿದರು. ನಂತರ ಈ ಸಂಬಂಧ ದಾಖಲೆಗಳನ್ನು ಪರಿಶೀಲಿಸಿ ಮಾತನಾಡಿದ ಸಚಿವ ಹೆಚ್.ಸಿ.ಮಹದೇವಪ್ಪ, ರೈತರಿಗೆ ಭೂಮಿ ವಾಪಸ್ ಕೊಡಿಸಲು ಕ್ರಮ ವಹಿಸಬೇಕು ಎಂದು ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದರು. ರೈತ ದೇಶಕ್ಕೆ ಅನ್ನ ನೀಡುವ ಅನ್ನದಾತ. ಇಂತಹ ರೈತರಿಗೆ ಯಾವುದೇ ಅನ್ಯಾಯವಾಗಬಾರದು. ರೈತರಿಗೆ ಮೋಸ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು. ಅಧಿಕಾರಿಗಳೊಂದಿಗೆ ಮತ್ತೊಂದು ಸಭೆ ನಡೆಸಿ, ಭೂಮಿ ವಾಪಸ್ ಕೊಡಿಸಲು ಕ್ರಮ ವಹಿಸುವುದಾಗಿ ರೈತರಿಗೆ ಭರವಸೆ ನೀಡಿದರು.

ಇಂದು ರೈತರ ಪ್ರತಿಭಟನೆ

ಹುಣಸೂರು, ಅ.18–ಕೃಷಿ ಪಂಪ್ ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಸುವಂತೆ ಒತ್ತಾಯಿಸಿ ಅ.19ರಂದು ರಾಜ್ಯದ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸುವುದಾಗಿ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರ್ ಕುಮಾರ್ ತಿಳಿಸಿದರು.

ಪಟ್ಟಣದ ಎಪಿಎಂಸಿ ಕಚೇರಿಯ ಆವರಣದಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಬೆಂಕಿಪುರ ಚಿಕ್ಕಣ್ಣ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲೆಯಲ್ಲಿ ಹೆಚ್ಚು ಪಂಪ್ ಸೆಟ್ ಬಳಕೆದಾರರು ಇದ್ದಾರೆ. ಸರ್ಕಾರ ಹಗಲಿನಲ್ಲಿ ಸಮರ್ಪಕ ವಿದ್ಯುತ್ ಸರಬರಾಜು ಮಾಡದೆ ಬೆಳೆ ಕೈ ಸೇರದೆ ರೈತರು ನಷ್ಟಕ್ಕೆ ಒಳಗಾಗುತ್ತಿದ್ದಾರೆ. ಸಂಘ ಈಗಾಗಲೇ ಬರದ ಹಿನ್ನೆಲೆಯಲ್ಲಿ ವಿದ್ಯುತ್ ಅಭಾವ ಸೃಷ್ಟಿಯಾಲಿದೆ ಎಂದು ಸರ್ಕಾರದ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಭೆಯಲ್ಲಿ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ಅಗ್ರಹಾರ ರಾಮೇಗೌಡರು, ಕಾರ್ಯಾಧ್ಯಕ್ಷ ಮಂಜುನಾಥರಾಜೇ ಅರಸ್, ಉಪಾಧ್ಯಕ್ಷರಾದ ಹೊಸೂರು ಮಣಿ, ಧನಂಜಯ ಕಿರಿಜಾಜಿ, ಸಂಚಾಲಕರಾದ ಹರಳಹಳ್ಳಿ ಬಸವರಾಜು, ಅಗ್ರಹಾರ ಸತೀಶ್, ವಾಸು, ಶೇಖರ ನಾಯಕ, ಕಲ್ಲಹಳ್ಳಿ ಜಯಣ್ಣ, ಕಲ್ಲಹಳ್ಳಿ ವಿಷಕಂಠಪ್ಪ, ಗ್ರಾಪಂ ಮಾಜಿ ಅಧ್ಯಕ್ಷರಾದ ವಿಗೌಡ, ಪಾಲ ಹಾಜರಿದ್ದರು.

ಗಾವಡಗೆರೆಯಲ್ಲಿ ಹೊಲಿಗೆ ತರಬೇತಿ



ಹಿರೀಕ್ಯಾತನಹಳ್ಳಿ, ಅ.18–ಹುಣಸೂರು ತಾಲೂಕಿನ ಗಾವಡಗೆರೆಯಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನ ವಿಕಾಸ ಕಾರ್ಯಕ್ರಮದಡಿ ಮಹಿಳೆಯರಿಗೆ ಹೊಲಿಗೆ ತರಬೇತಿ ಆಯೋಜಿಸಲಾಗಿತ್ತು.

ತರಬೇತಿಗೆ ಚಾಲನೆ ನೀಡಿ ಮಾತನಾಡಿದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮದ್ಯವರ್ಜನ ಶಿಬಿರದ ಅಧ್ಯಕ್ಷ ಹೊನ್ನಪ್ಪ ರಾವ್ ಕಾಂಳಿಗೆ, ಧರ್ಮಸ್ಥಳ ಸಂಸ್ಥೆ ಮಹಿಳೆಯರ ಸಬಲೀಕರಣಕ್ಕೆ ಅನೇಕ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತಿದೆ. ಜತೆಗೆ ಉತ್ತಮ ಬದುಕು ಕಟ್ಟಿಕೊಳ್ಳಲು ಸಹಕರಿಂತಾಗಿದೆ. ಮಹಿಳೆಯರು ಹೊಲಿಗೆ ತರಬೇತಿ ಪಡೆದು ಸ್ವಉದ್ಯೋಗ ನಡೆಸುವುದರಿಂದ ಆರ್ಥಿಕ ಲಾಭ ಗಳಿಸಬಹುದು ಎಂದರು.

ಗ್ರಾಪಂ ಅಧ್ಯಕ್ಷೆ ಧನಲಕ್ಷ್ಮೀ, ತರಬೇತಿ ಶಿಕ್ಷಕಿ ವಿಜಯಲಕ್ಷ್ಮೀ ಶಿಂದೆ, ವಲಯ ಮೇಲ್ವಿಚಾರಕ ಶಿವಕುಮಾರ್, ಜ್ಞಾನ ವಿಕಾಸ ಕೇಂದ್ರದ ಸಮನ್ವಯಾಧಿಕಾರಿ ರೂಪಾ, ಸೇವಾ ಪ್ರತಿನಿಧಿ ರೇಷ್ಮಾ ಹಾಜರಿದ್ದರು.

ಚಿರತೆ ದಾಳಿಗೆ ಎರಡು ಮೇಕೆ ಬಲಿ



ಹುಣಸೂರು, ಅ.18– ತಾಲೂಕಿನ ಕೊಳಗಟ್ಟ ಗ್ರಾಮದಲ್ಲಿ ಬುಧವಾರ ಜಮೀನಿನಲ್ಲಿ ಮೇಯುತ್ತಿದ್ದ ಎರಡು ಮೇಕೆಗಳ ಮೇಲೆ ಚಿರತೆ ದಾಳಿ ನಡೆಸಿ, ಕೊಂದುಹಾಕಿದೆ.

ಗ್ರಾಮದ ಕುಮಾರ್ ಅವರಿಗೆ ಸೇರಿದ ಮೇಕೆಗಳು ಬಲಿಯಾಗಿವೆ. ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ಹಾಡಹಗಲೇ ಚಿರತೆ ದಾಳಿ ನಡೆದಿರುವುದರಿಂದ ಈ ಭಾಗದ ಜನರಲ್ಲಿ ಆತಂಕ ಸೃಷ್ಟಿಯಾಗಿದೆ.

ತೆಂಗಿನ ಗಿಡ ವಿತರಣೆಗೆ ಅರ್ಜಿ ಆಹ್ವಾನ

ಹುಣಸೂರು, ಅ.18–ತೋಟಗಾರಿಕೆ ಇಲಾಖೆ ವತಿಯಿಂದ ಉಚಿತವಾಗಿ ತೆಂಗಿನ ಗಿಡ ವಿತರಿಸಲು ತಾಲೂಕಿನ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

ತಾಲೂಕಿನಲ್ಲಿ 75 ಹೆಕ್ಟೇರ್ ತೆಂಗು ಬೆಳೆ ಪ್ರದೇಶ ವಿಸ್ತರಿಸಲು ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ತೆಂಗು ಬೆಳೆ ಆಸಕ್ತರು ಹಾಗೂ ನೀರಾವರಿ ಸೌಲಭ್ಯವಿರುವ ರೈತರು ಪಹಣಿ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕದ ಪ್ರತಿಯೊಂದಿಗೆ ಅರ್ಜಿ ಸಲ್ಲಿಸಬಹುದು.

ಮಾಹಿತಿಗಾಗಿ ಹುಣಸೂರಿನ ತೋಟಗಾರಿಕೆ ಇಲಾಖೆಯ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಹಿರಿಯ ಸಹಾಯಕ ತೋಟಗಾರಿಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುಟ್ಟನಂಜಮ್ಮ ನಿಧನ



ತಿ.ನರಸೀಪುರ, ಅ.18–ತಾಲೂಕಿನ ಎಂ.ಸೀಹಳ್ಳಿ ಗ್ರಾಮದ ನಿವಾಸಿ ಬಸವೇಗೌಡರ ಪತ್ನಿ ಹಾಗೂ ಕೊತ್ತೇಗಾಲ ಗ್ರಾಪಂ ಸದಸ್ಯೆ ಪುಟ್ಟನಂಜಮ್ಮ (65) ಮಂಗಳವಾರ ನಿಧನರಾದರು. ಮೃತರಿಗೆ ಪತಿ, ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗ ಇದ್ದಾರೆ. ಸ್ವಗ್ರಾಮದಲ್ಲಿ ಬುಧವಾರ ಅಂತ್ಯಕ್ರಿಯೆ ನಡೆಯಿತು. ಜಿಪಂ ಮಾಜಿ ಸದಸ್ಯ ಎಂ.ಆರ್.ಸೋಮಣ್ಣ, ತಾಪಂ ಮಾಜಿ ಸದಸ್ಯ ಸೀಹಳ್ಳಿ ಗುರುಮೂರ್ತಿ, ಗ್ರಾಪಂ ಮಾಜಿ ಅಧ್ಯಕ್ಷ ಕನ್ನಹಳ್ಳಿ ಲಕ್ಷ್ಮಣ, ಸದಸ್ಯ ಮಹದೇವಸ್ವಾಮಿ, ನಂಜುಂಡೇಗೌಡ, ಸುಬ್ಬೇಗೌಡ, ಎಸ್.ಬಿ.ಪ್ರಕಾಶ್ ಅವರು ಮೃತರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ವಿಜೃಂಭಣೆಯ ವಾಲ್ಮೀಕಿ ಜಯಂತಿ ಆಚರಣೆಗೆ ಮನವಿ



ತಿ.ನರಸೀಪುರ, ಅ.18–ಮಹರ್ಷಿ ವಾಲ್ಮೀಕಿ ಜಯಂತಿಯನ್ನು ತಾಲೂಕು ಆಡಳಿತದ ವತಿಯಿಂದ ವಿಜೃಂಭಣೆಯಿಂದ ಆಚರಿಸುವಂತೆ ವಿವಿಧ ಸಮಾಜಗಳ ಮುಖಂಡರು ತಹಶೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ಅವರಿಗೆ ಮನವಿ ಮಾಡಿದರು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ವಾಲ್ಮೀಕಿ ಜಯಂತಿ ಆಚರಣೆಯ ಪೂರ್ವಭಾವಿ ಸಭೆಯಲ್ಲಿ ತಾಲೂಕು ನಾಯಕ ಸಂಘದ ಕಾರ್ಯದರ್ಶಿ ಆಲಗೂಡು ನಾಗರಾಜು, ಕೊರೋನಾದಿಂದ ಕಳೆದ ಮೂರು ವರ್ಷಗಳಿಂದಲೂ ವಾಲ್ಮೀಕಿ ಜಯಂತಿ ಆಚರಿಸಲು ಸಾಧ್ಯವಾಗಿಲ್ಲ. ಹಾಗಾಗಿ ಈ ಬಾರಿ ಅದ್ಧೂರಿಯಾಗಿ ಆಚರಿಸಬೇಕು. ಶ್ರೀ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದಿಂದ ವಿವಿಧ ಸ್ತಬ್ಧಚಿತ್ರಗಳ ಮೆರವಣಿಗೆ ಮೂಲಕ ಪಟ್ಟಣದ ವಿವಿಧ ರಸ್ತೆಗಳಲ್ಲಿ ಸಂಚರಿಸಿ, ವಿದ್ಯೋದಯ ಕಾಲೇಜು ಆವರಣದಲ್ಲಿ ವೇದಿಕೆ ಕಾರ್ಯಕ್ರಮ ನಡೆಸುವಂತೆ ತಹಶೀಲ್ದಾರ್ ಅವರನ್ನು ಒತ್ತಾಯಿಸಿದರು.

ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮಾತನಾಡಿ, ಜಯಂತಿ ಆಚರಣೆಯಲ್ಲಿ ರಾಜಕಾರಣಿಗಳು ಹಾಗೂ ಮತ್ತಿತರರಿಗೆ ಮಾಡುತ್ತಿದ್ದ ಸನ್ಮಾನಕ್ಕೆ ತಿಲಾಂಜಲಿ ಇಟ್ಟು ನಾಯಕ ಸಮಾಜದ 10 ತರಕಾರಿ ಹಾಗೂ ತಳ್ಳುಗಾಡಿ ವ್ಯಾಪಾರಸ್ಥರನ್ನು ಗುರುತಿಸಿ ಸನ್ಮಾನಿಸುವಂತೆ ಸಲಹೆ ನೀಡಿದರು.

ಪಟ್ಟಣದಲ್ಲಿ ನಡೆದ ಹನುಮ ಜಯಂತಿ ಕಹಿ ನೆನಪು ಇನ್ನೂ ಮಾಸಿಲ್ಲ. ಕ್ಷುಲ್ಲಕ ಕಾರಣಕ್ಕೆ ತೊಂದರೆಗೊಳಗಾಗುವುದು ಬೇಡ. ಹಾಗಾಗಿ ಮೆರವಣಿಗೆಯಲ್ಲಿ ವಾಲ್ಮೀಕಿಯವರ ಭಾವಚಿತ್ರ ಹೊರತುಪಡಿಸಿ, ಚಿತ್ರನಟರ ಭಾವಚಿತ್ರ ಪ್ರದರ್ಶನಕ್ಕೆ ಅವಕಾಶ ನೀಡಬಾರದು. ಹದ್ದುಮೀರಿದರೆ ಕಾನೂನು ಕ್ರಮ ಜರುಗಿಸುವಂತೆ ಮನವಿ ಮಾಡಿದರು.

ತಾಲೂಕು ನಾಯಕ ಸಂಘದ ಅಧ್ಯಕ್ಷ ಬನ್ನೂರು ಚಿಕ್ಕಯ್ಯ, ಮುಖಂಡ ಘಟಕ ಮಹದೇವ್, ಕ್ಷೇತ್ರ ಬಿಜೆಪಿ ಅಧ್ಯಕ್ಷ ಕೆ.ಸಿ. ಲೋಕೇಶ್ ನಾಯಕ್, ಕರೋಹಟ್ಟಿ ಪ್ರಭುಸ್ವಾಮಿ ಮಾತನಾಡಿದರು. ತಾಪಂ ಕಾರ್ಯನಿರ್ವಹಣಾಧಿಕಾರಿ ಕೃಷ್ಣ, ಬಿಇಓ ಶೋಭಾ, ಪ.ವರ್ಗಗಳ ಕಲ್ಯಾಣಾಧಿಕಾರಿ ಕೋಮಲಾ, ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಕೆಂಡಗಣ್ಣಸ್ವಾಮಿ, ಮುಖಂಡರಾದ ಕರೋಹಟ್ಟಿ ಮಹದೇವಯ್ಯ, ಜಿಪಂ ಮಾಜಿ ಸದಸ್ಯೆ ಸುಧಾಮಣಿ, ಬೂದಹಳ್ಳಿ ಸಿದ್ದರಾಜು, ಮೂಗೂರು ಮರಿಸ್ವಾಮಿ, ಸಿದ್ದರಾಜು, ಕೃಷ್ಣಮೂರ್ತಿ, ಗೋವಿಂದ, ಕುಕ್ಕೂರು ಶಾಂತರಾಜು, ಸಿ. ಪುಟ್ಟಯ್ಯ, ಇಂಡವಾಳು ಬಸವರಾಜು, ಶಿವಶಂಕರಮೂರ್ತಿ, ವಿವಿಧ ಸಂಘಟನೆಗಳ ಮುಖ್ಯಸ್ಥರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಲಿಯೋ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಾನದಾರಿಯಲ್ಲಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಚಂದ್ರಮುಖಿ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಲಿಯೋ (ತ)	4 ಪ್ರದರ್ಶನಗಳು
ಗಾಯಿತ್ರಿ	
ತೋತಾಪುರಿ–2 (ಕ)	4 ಪ್ರದರ್ಶನಗಳು
ರಾಜಕಮಲ್	
ಭಗವಂತ್ ಕೇಸರಿ (ತೆ)	4 ಪ್ರದರ್ಶನಗಳು
ಸಂಗಂ	
ಲಿಯೋ (ಕ)	3 ಪ್ರದರ್ಶನಗಳು
ಲಿಯೋ (ತ)	1 ಪ್ರದರ್ಶನಗಳು
ಲಿಡೋ	
ಫೈಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ಕಂದ (ತೆ)	4 ಪ್ರದರ್ಶನಗಳು
ಪ್ರಭಾ	
ಟೈಗರ್ (ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿ ಎಗ್ಸಾರ್‌ಸಿಸ್ಟ್ ಬಿಲಿವರ್ (ಇಂ): ಬೆ.10.50ಕ್ಕೆ, ರಾ.10ಕ್ಕೆ, 800 (ತ): ಮ.1.15ಕ್ಕೆ, ಅಭಿರಾಮಚಂದ್ರ (ಕ): ಸಂ.4.25ಕ್ಕೆ, ದಿ ವ್ಯಾಕ್ಸಿನ್ ವಾರ್ (ಹಿಂ): ಸಂ.6.50ಕ್ಕೆ.
ಸ್ಕ್ರೀನ್ 2	ಕನ್ನೂರ ಸ್ಕ್ವಾಡ್ (ಮ): ಬೆ.10.40ಕ್ಕೆ, ರಥಂ (ತ): ಮ.1.45ಕ್ಕೆ, ರೂಲ್ಸ್ ರಂಜನ್ (ತೆ): ಸಂ.4.10ಕ್ಕೆ, ಮಿಷನ್ ರಾಣಿಗಂಜ್ (ಹಿಂ): ರಾ.7.15ಕ್ಕೆ, ರಾ.9.55ಕ್ಕೆ
ಸ್ಕ್ರೀನ್ 3	ರಾಜಮಾರ್ತಾಂಡ (ಕ): ಬೆ.10.55ಕ್ಕೆ, ತೋತಾಪುರಿ 2 (ಕ): ಮ.1.35ಕ್ಕೆ, ಜವಾನ್ (ಹಿಂ): ಸಂ.4.05ಕ್ಕೆ, ಥ್ಯಾಂಕ್ಯೂ ಫಾರ್ ಕಮಿಂಗ್ (ಹಿಂ): ರಾ.7.25ಕ್ಕೆ, ಚಾವರ್ (ಮ): ರಾ.10ಕ್ಕೆ.
ಸ್ಕ್ರೀನ್ 4	ಫೈಟರ್ (ಕ): ಬೆ.10.40ಕ್ಕೆ, ಬಾನ ದಾರಿಯಲ್ಲಿ (ಕ): ಮ.1.10ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಮ್ಯಾಡ್ 2023 (ತೆ): ಸಂ.4.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬಾನ ದಾರಿಯಲ್ಲಿ (ಕ): ಬೆ.11.15ಕ್ಕೆ, ಮ.2.30ಕ್ಕೆ, ಸಂ.5.45, ರಾ.9ಕ್ಕೆ.
ಸ್ಕ್ರೀನ್ 2	ಪಾವ್ ಪಟ್ರೋಲ್ (ಇಂ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ರಾ.8.15ಕ್ಕೆ, ಮಿಷನ್ ರಾಣಿಗಂಜ್ (ಹಿಂ): ಸಂ.5.15ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.11.55ಕ್ಕೆ, ಪಾವ್ ಪಟ್ರೋಲ್ (ಇಂ): ಮ.3.20ಕ್ಕೆ, ಸಂ.5.40ಕ್ಕೆ, ರಾ.8ಕ್ಕೆ,
ಸ್ಕ್ರೀನ್ 4	ಮಿಷನ್ ರಾಣಿಗಂಜ್ (ಹಿಂ): ಬೆ.11ಕ್ಕೆ, ಮಾರಕಾಸ್ತ್ರ (ಕ): ಮ.3ಕ್ಕೆ, ಅಭಿರಾಮಚಂದ್ರ (ಕ): ಸಂ.6.20ಕ್ಕೆ, ಮ್ಯಾಡ್ (ತೆ): ರಾ.9ಕ್ಕೆ

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸುಗಳು

13ನೇ ದಿನ, ಗುರುವಾರ 19–10–2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಚಿರಾಪುಂಜಿ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಅಕಾಸಿ 2. ಈಸ್ ದ ಒನ್ 3. ಸ್ಟಾರ್ ಸಿಟಿಜನ್

II. ಆಟುಮನ್ ಬ್ಲೂ ಪ್ಲೇಟ್–1200 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಅಪೋಲೊ ಲೈಟ್ 2. ಬೆಲ್ಲಿಸ್ಸಿಮೋ 3. ಶೂಟಿಂಗ್ ವೀನಸ್

III. ಶ್ರೀ ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್ ಟ್ರೋಫಿ–1600 ಮೀ. ರೇಟೆಡ್ 20 ರಿಂದ 45. (ಮೈಸೂರ್ ಬೇಸ್ಡ್ ಹಾರ್ಸ್). ಮ.3.00ಕ್ಕೆ
1 ಗ್ರೇಟ್ ಹೋಪ್ 2. ಪಾರ್ಕರ್ 3 ಉದುಕೈ

IV. ಕೆ.ತಮ್ಮಣ್ಣಗೌಡ ಮೆಮೋರಿಯಲ್ ಟ್ರೋಫಿ. ರೇಟೆಡ್ 40 ರಿಂದ 65. (ಮೈಸೂರ್ ಬೇಸ್ಡ್ ಹಾರ್ಸ್). ಸಂ.3.30ಕ್ಕೆ
1. ಬ್ಲಾಕ್ ಕಾಫಿ 2. ಬ್ರೇವ್ ಟ್ರೂಪರ್ 3. ಇಂಡಿಯನ್ ಗ್ಲೋರಿ

V. ಮೈಸೂರ್ ಡಿಸ್ಟ್ರಿಕ್ಟ್ ಕಪ್–1400 ಮೀ. ರೇಟೆಡ್ 80 ಮತ್ತು ಮೇಲ್ಪಟ್ಟ. ಸಂ.4.00ಕ್ಕೆ
1. ಸ್ಟಾರ್ ಗ್ಲೋರಿ 2. ರಾವಿಶಿಂಗ್ ಫಾರ್ಮ್ 3. ಪಿಯೋ

VI. ಅಲೆಕೋನಾ ಟ್ರೋಫಿ ಡಿ1–1400 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1 ಕ್ವೀನ್ ರಿಗನೆಂಟ್ 2 ಸೂಪರ್ ಗ್ಲಾಡಿಯೆಟರ್ 3 ಪೆಲುಚಿ

VII. ಅಲೆಕೋನಾ ಟ್ರೋಫಿ ಡಿ2–1400 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1 ಸಿನ್‌ಕೊ ಡಿ ಮೆಯೋ 2. ಸ್ಕೆರ್ಡ್ ಕಿಯೇಟರ್ 3. ವಾರ್ ಸಾಂಗ್

ದಿನದ ಅತ್ಯುತ್ತಮ	ಸ್ಟಾರ್ ಗ್ಲೋರಿ
ಡಬ್ಬಲ್	ಗ್ರೇಟ್ ಹೋಪ್, ಕ್ವೀನ್ ರಿಗನೆಂಟ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜಿಸಿ